ಸಂಪುಟ 24 ಸಂಚಿಕೆ 36
ಸೆಪ್ಟೆಂಬರ್ 8, 2002 ಬೆಲೆ ರೂ. 3.00


ದುಡಿವ ಜನರ ಪ್ರಾಣ ಪತ್ರ

ಐಕ್ಯರಂಗ


http:// www.geocities.com/aikyaranga



ಬೆನ್ನಟ್ಟಿ ಬಂದರೋ ರೈತರು...



ಬರಕ್ಕೆ ಬಲಿಯಾದ ರೈತ



ಬಿಜೆಪಿ ತೊಲಗಿಸಲು ದೇಶವ್ಯಾಪಿ ಚಳುವಳಿ

ವೀರಪ್ಪನ್ ಅಟ್ಟಹಾಸ ಹೊಣಗೇಡಿ ಸರ್ಕಾರಗಳು



ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 8

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ

ಮುಂದುವರೆದ ಭಾಗ...

ನವದೆಹಲಿಯಲ್ಲಿರುವ ಅಮೇರಿಕ ಸಂಯುಕ್ತ ಸಂಸ್ಥಾನಗಳ ರಾಯಭಾರ ಕಛೇರಿಯ ಅಧಿಕಾರಿಗಳು ಭಾರತ ಸರ್ಕಾರದ ಗೃಹ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಎಡ ಕಮ್ಯುನಿಸ್ಟರು ಅಪಾಯಕಾರಿಗಳೆಂದೂ, ಚೀನದ ಏಜೆಂಟರೆಂದೂ, ಅವರನ್ನು ಮಟ್ಟಹಾಕಲು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದೂ ಒತ್ತಾಯಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಯಿತು.

1964 ರ ಡಿಸೆಂಬರ್ 31ರಂದು ಬೆಳಗ್ಗೆ ಹೊಸೂರಿನ ಜನತಾ ಹೋಟೆಲಿನಲ್ಲಿ ಕೂತು ಕಾಫಿ ಕುಡಿಯುತ್ತಿದ್ದಾಗ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಮೊದಲ ಪುಟದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೆ "ಎಡ ಕಮ್ಯುನಿಸ್ಟರು ಚೀನದ ಪಂಚಮದಳ, ದೇಶವ್ಯಾಪಿ ಬಂಧನ ಸತ್ರ" ಎಂದು ಪ್ರಕಟಿಸಿದ್ದ ಸುದ್ದಿಯನ್ನು ಓದಿದೆ. "pre-dawn swoop of left reds" ಎಂಬ ಅಷ್ಟೇ ದೊಡ್ಡ ತಲೆಬರಹವನ್ನು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಓದಿದೆ. ಒಂದು ಸಾವಿರಕ್ಕಿಂತಲೂ ಹೆಚ್ಚು ಮುಖಂಡರನ್ನು ಬಂಧಿಸಿರುವ ಸುದ್ದಿಯ ಜತೆಗೆ ಇ.ಎಂ.ಎಸ್ ಮತ್ತು ಜ್ಯೋತಿಬಸುರನ್ನು ಬಂಧಿಸಿಲ್ಲವೆಂಬ ಸುದ್ದಿಯೂ ಇದ್ದಿತು. ರಾಜ್ಯದಲ್ಲಿ ಎನ್.ಎಲ್. ಉಪಾಧ್ಯಾಯ, ಎಸ್.ಸೂರ್ಯನಾರಾಯಣರಾವ್, ಎನ್.ಕೆ.ಉಪಾಧ್ಯಾಯ, ಗಂಗಾಧರ ನಮೋಷಿ, ಎಂ.ಎಸ್. ಉಗ್ರಪ್ಪ, ಎ.ಕೃಷ್ಣ ಶೆಟ್ಟಿ, ಪಿ.ರಾಮಚಂದ್ರರಾವ್, ಕೆ. ಚಂದು ಕುಟ್ಟಿ ಮೊದಲಾದ ಮುಖಂಡರ ಬಂಧನದ ಸುದ್ದಿಗಳಿದ್ದುವಲ್ಲದೆ, 'ಐಕ್ಯರಂಗ' ಪತ್ರಿಕೆಯ ಮುದ್ರಕ ವಸುಕುಮಾರ್ ಎಂಬ ಮುದ್ರಣಕಾರರನ್ನು ಭಾರತ ರಕ್ಷಣಾ ಕಾಯಿದೆಯನ್ವಯ ಬಂಧಿಸಿದ ಸುದ್ದಿಯಿದ್ದಿತು.

ಕಾಂಗ್ರೆಸ್ ಸರ್ಕಾರದ ಈ ಆಕ್ರಮಣವನ್ನು ನಾನು ಉಗ್ರವಾಗಿ ವಿರೋಧಿಸಿದರೂ ಸಹ, ಕಾಂಗ್ರೆಸ್ ಸರ್ಕಾರವನ್ನು, ಸಾಮ್ರಾಜ್ಯಶಾಹಿಗಳನ್ನು ವಿರೋಧಿಸಿದ್ದರಿಂದ ಈ ಆಕ್ರಮಣ ಬಂದಿದೆ. ಇದು ಒಂದು ಆರೋಗ್ಯಕರವಾದ ಬೆಳವಣಿಗೆ ಎಂದು ನನಗೆನಿಸಿತು.

1964ರ ಪ್ರಾರಂಭದಲ್ಲಿ ಒಂದು ವಿಚಿತ್ರವಾದ ಕಳ್ಳತನವಾಯಿತು. ನಾನು ಹುಬ್ಬಳ್ಳಿಯ ಹೊಸೂರಿನ ಕೆ.ಎಸ್.ಆರ್.ಟಿ.ಸಿಯ ಎದುರಿಗಿರುವ ಒಂದು ಚಾಳಿನಲ್ಲಿ ವಾಸಿಸುತ್ತಿದ್ದೆ. ಒಂದು ದಿನ ಸಂಜೆ ನಾನು ಕೆಲಸ ಮಾಡುತ್ತಿದ್ದ ಆಫೀಸಿನಿಂದ ಬಂದು ರೂಮಿನ ಬಾಗಿಲು ತೆರೆದಾಗ ಒಳಗಿದ್ದ ಒಂದು ಟ್ರಂಕಿನ ಬಾಗಿಲು ತೆರೆದು ಬಟ್ಟೆಗಳು ಕದಡಿದ್ದುದು ಕಂಡುಬಂದಿತು. ಆದರೆ ರೂಮಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆದಿರಲಿಲ್ಲ. ಅಥವಾ ಒಡೆದಿರಲಿಲ್ಲ. ನನಗೆ ಗಾಬರಿಯಾಯಿತು. ಬಟ್ಟೆಗಳಾಗಲೀ ಬೇರೆನೂ ಹೋಗಿರುವಂತೆ ಕಾಣಲಿಲ್ಲ. ಆದರೆ ಟ್ರಂಕಿನಲ್ಲಿದ್ದ ನನ್ನ ಫೋಟೋ ಅಲ್ಬಮ್‌ಗಳು, ಎಲ್ಲಾ ಫೋಟೋಗಳು ಮಾಯವಾಗಿದ್ದುವು.

1964 ರ ಆಗಸ್ಟ್‌ನಲ್ಲಿ ಗೆಳೆಯ ಸುಂದರನಿಗೆ ಕೌಟುಂಬಿಕ ವಿಚಾರದಲ್ಲಿ ಸಹಾಯ ಮಾಡಲು ತಮಿಳುನಾಡಿನ ಸೇಲಂ ಜಿಲ್ಲೆಯ ಸೇರವಾಯ್‌ಗೆ ಮತ್ತು ಅಲ್ಲಿಂದ ಈರೋಡಿಗೆ ಹೋಗಬೇಕಾಯಿತು. ಇದಕ್ಕಾಗಿ ಬೆಂಗಳೂರಿಗೆ ಬಂದಾಗ ಆಕಸ್ಮಿಕವಾಗಿ ವೆಂಕಟರಾಜಪಾನಸೆಯವರ ಭೇಟಿಯಾಯಿತು. ಸಿಪಿಐ ಒಡಕಿನ ಬಗ್ಗೆ ಅವರೊಂದಿಗೆ ಮಾತನಾಡಿದೆ. ಭಾರತದ ಕ್ರಾಂತಿಯ ಮೂಲಭೂತ ವಿಚಾರಗಳ ಬಗ್ಗೆ ಇರುವ ಭಿನ್ನಾಭಿಪ್ರಾಯಗಳ ಕುರಿತು ಅವರು ಏನನ್ನೂ ಹೇಳಲಿಲ್ಲ, ಎರಡು ಕಡೆಯವರದೂ ತಪ್ಪಿದೆ ಎಂದಷ್ಟೇ ಹೇಳಿದರು. ನನಗೆ ಸಮಾಧಾನವಾಗಲಿಲ್ಲ. ಆದರೆ ಸಮಯವೂ ಇರಲಿಲ್ಲ.

1965ರ ಪ್ರಾರಂಭದಲ್ಲಿ ನಾವು ಮೂವರು ಹುಬ್ಬಳ್ಳಿಯಲ್ಲಿದ್ದ ಸಿಪಿಐ ಮುಖಂಡರನ್ನು ಭೇಟಿ ಮಾಡಿದೆವು. ಪಕ್ಷವು ಒಡೆದಿರುವುದರಿಂದ ಅವರು ಯಾವ ಕಡೆ ಮತ್ತು ಯಾಕೆ ಎಂದು ಕೇಳಿದೆವು. 'ಎಡ' ಎಂದು ಹೇಳಿದರೆ ಪೋಲೀಸರು ನಮ್ಮನ್ನು ಬಂಧಿಸಿ ಜೇಲಿನಲ್ಲಿಡುತ್ತಾರೆ. ಜನರ ಸಂಪರ್ಕ ಹೋಗಿಬಿಡುತ್ತದೆ. ಸುಮ್ಮನೆ ಜೇಲಿನಲ್ಲಿ ಕೂತು ಏನು ಮಾಡುವುದು? ಎಂದು ಹೇಳಿ, ಅವರು ಬಲ ಕಮ್ಯುನಿಸ್ಟ್ ಪಕ್ಷದಲ್ಲಿರುವುದಾಗಿ ಹೇಳಿದರು.

1965ರ ಏಪ್ರಿಲ್‌ನಲ್ಲಿ ಕೇರಳದ ವಿಧಾನ ಸಭೆ ನಡೆದ ಚುನಾವಣೆಯ ಮತದಾನದ ಮೂರು ದಿವಸಗಳ ಮೊದಲು ಕಾಂಗ್ರೆಸ್ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಆಕಾಶವಾಣಿಯಲ್ಲಿ ಭಾಷಣಮಾಡುತ್ತಾ "ಕೇರಳದ ಮತದಾರರು ಜಾಣರು, ಬುದ್ಧಿವಂತರು, ಅವರು ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬುದನ್ನು ಗುರುತಿಸುತ್ತಾರೆ. ಆದ್ದರಿಂದ ಅವರು ವಿಚಾರ ಮಾಡಿ ತಮಗೆ ಒಳ್ಳೆಯದು ಎನಿಸಿದ್ದಕ್ಕೆ ಮತ ಕೊಡುತ್ತಾರೆ" ಎಂದು ಹೇಳಿದರು. ಚುನಾವಣಾ ಫಲಿತಾಂಶ ಬಂದಿತು. ಕಾಂಗ್ರೆಸ್ ಪಕ್ಷ ಸೋತು ಹೋಯಿತು. ಸಿಪಿಐ(ಎಂ) ಪಕ್ಷದವರನ್ನು ರಾಷ್ಟ್ರದ್ರೋಹಿಗಳು, ಚೀನದ ಏಜೆಂಟರು ಎಂದು ಆಪಾದಿಸುತ್ತಿದ್ದ ಡಾಂಗೆಯವರ ಕಮ್ಯುನಿಸ್ಟ್ ಪಕ್ಷವು ತಾನು ಸ್ಪರ್ಧಿಸಿದ್ದ ಸ್ಥಾನಗಳ ಪೈಕಿ 50ಕ್ಕೂ ಹೆಚ್ಚು ಸ್ಥಾನಗಳಲ್ಲಿ ಠೇವಣಿಯನ್ನು ಕಳೆದುಕೊಂಡು ಒಂದು ದಾಖಲೆಯನ್ನೇ ಸ್ಥಾಪಿಸಿತು. ಎರಡು ಕ್ಷೇತ್ರಗಳಲ್ಲಿ ಮಾತ್ರ ಜಯಶಾಲಿಯಾಯಿತು. ಡಾಂಗೆ ಪಕ್ಷದ, ಕಾಂಗ್ರೆಸ್ಸಿನ ಮತ್ತು ಪ್ರತಿಗಾಮಿಗಳ ಆಕ್ರಮಣಕ್ಕೆ ಗುರಿಯಾಗಿದ್ದ ಸಿಪಿಐ(ಎಂ) 39 ಕ್ಷೇತ್ರಗಳಲ್ಲಿ ವಿಜಯ ಪಡೆದು ಏಕೈಕ ದೊಡ್ಡ ಪಕ್ಷವಾಯಿತು. ಗೆದ್ದವರ ಪೈಕಿ ಮುಕ್ಕಾಲು ಪಾಲು ಮಂದಿ ಭಾರತ ರಕ್ಷಣಾ ಕಾಯಿದೆಯನ್ವಯ ಬಂಧಿಸಲ್ಪಟ್ಟು ಜೇಲಿನಲ್ಲಿದ್ದವರು. ಅವರು ಚುನಾವಣಾ ಪ್ರಚಾರಕ್ಕೆ ಸಹ ಹೋಗುವುದಕ್ಕೆ ಸಾಧ್ಯವಾಗಿರಲಿಲ್ಲ.

ಬುದ್ಧಿವಂತ ಕೇರಳದ ಮತದಾರರು ಸರಿಯಾಗಿಯೇ ಮತ ನೀಡಿದ್ದರು. ವರ್ಗ ಹೋರಾಟ, ವರ್ಗ ಸಹಕಾರಗಳ ನಡುವೆ, ಮಾರ್ಕ್ಸ್‌ವಾದ ಲೆನಿನ್‌ವಾದ ಮತ್ತು ಪರಿಷ್ಕರಣವಾದಗಳ ನಡುವೆ ಅವರು ಕೊಟ್ಟ ತೀರ್ಪು ಸ್ಪಷ್ಟವಾಗಿದ್ದಿತ್ತು, ನಿರ್ಣಾಯಕವಾಗಿದ್ದಿತು. ಕಾರ್ಮಿಕವರ್ಗದ ಪಕ್ಷ ಸಿಪಿಐ(ಎಂ) ಮತ್ತು ಶೋಷಕ ವರ್ಗಗಳ ಪಕ್ಷ ಕಾಂಗ್ರೆಸ್ಸಿನ ನಡುವೆ ಅವರ ತೀರ್ಪು ನಿಚ್ಚಳವಾಗಿದ್ದಿತು.

ಚುನಾವಣಾ ಫಲಿತಾಂಶ ಬಂದ ಹಲವು ವಾರಗಳ ನಂತರ ಒಂದು ಸಂಜೆ ಸಿ.ಜಿ.ಪಾಟೀಲರು ನನ್ನ ಕೊಠಡಿಗೆ ಬಂದರು. ಅವರೊಂದಿಗೆ ಇನ್ನೊಬ್ಬ ಹಿರಿಯ ವ್ಯಕ್ತಿ ಇದ್ದರು. ಪಾಟೀಲರು ಅವರ ಪರಿಚಯ ಮಾಡಿಸಿದೆವು. ಅವರು ಕೃಷ್ಣಸ್ವಾಮಿ, ಕಾಂಗ್ರೆಸ್ ಸರ್ಕಾರವು ಹಲವು ಮುಖಂಡರನ್ನು ಬಂಧಿಸಿ ಜೇಲಿನಲ್ಲಿಟ್ಟದ್ದಿತು. ಆದ್ದರಿಂದ ಕೃಷ್ಣಸ್ವಾಮಿಯವರು ತಮ್ಮ ಚಲನವಲನಗಳ ಬಗ್ಗೆ ಜಾಗರೂಕರಾಗಿದ್ದರು. ಬಂಧಿಸಲ್ಪಡದೆ ಹೊರಗೆ ಉಳಿದಿರುವವರನ್ನು ಭೇಟಿ ಮಾಡಿ ಮಾತನಾಡಿಸಿಕೊಂಡು ಹೋಗಲು ಅವರು ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದರು. ಎರಡನೆಯ ಬಾರಿ ಅವರು ಬರುವಾಗ ಹರಿಹರದ ಒಬ್ಬ ಸಂಗಾತಿಯ ಪರಿಚಯವಾಗಿ ಅವರಿಂದ "ಡಾಂಗೆ ಅನ್‌ಮಾಸ್ಡ್" ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ, "ಎ ಕಾಂಟ್ರಿಬ್ಯುಷನ್ ಟುದಿ ಐಡಿಯಲಾಜಿಕಲ್ ಡಿಬೇಟ್", ಎಂಬ ಪುಸ್ತಕಗಳು "ಪೀಪಲ್ಸ್ ಡೆಮೊಕ್ರಸಿ", "ಐಕ್ಯರಂಗ" ಪತ್ರಿಕೆಗಳು ನನಗೆ ಸಿಕ್ಕಿದವು. ನಾನು ಅವುಗಳನ್ನು ಓದಿದೆ. ಕಾರ್ಯಕ್ರಮವು ಬಹುತೇಕ ಸರಿಯಾಗಿದ್ದಿತು. "ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದಕ್ಕೆ" ಸಂಬಂಧಿಸಿದ ಕೊನೆಯ ಭಾಗವನ್ನು ಓದಿದಾಗ ನನಗೆ ಸಮಾಧಾನವಾಯಿತು. ಅದನ್ನು ಅಂಗೀಕರಿಸಿದೆ. ಅದನ್ನು ಓದಿದ ನಂತರ ಅದರ ಆಧಾರದ ಮೇಲೆ ಇನ್ನು ಮೂವರನ್ನು ಸಿದ್ಧ ಪಡಿಸಿದೆ.

ಮೂರನೆಯ ಬಾರಿ ನನ್ನನ್ನು ಭೇಟಿ ಮಾಡಿದಾಗ ಕೃಷ್ಣಸ್ವಾಮಿಯವರು ನನಗೆ ಪಕ್ಷದ ಸದಸ್ಯನಾಗಲು ಹೇಳಿದರು. ನಾನು 1965ರಲ್ಲಿ ಹೆಮ್ಮೆಯಿಂದ ಸಿಪಿಐ(ಎಂ) ಸದಸ್ಯನಾದೆ, ಮುಂದಿನ ವರ್ಷ ಒಂದು ಶಾಖೆಯ ಕಾರ್ಯದರ್ಶಿಯೂ ಆದೆ.


(ಮುಗಿಯಿತು)

ಹೊಸಕೋಟೆ ರೈತನ ಆತ್ಮಹತ್ಯೆ: ಬರದ ಬೇಗೆಗೆ ಪ್ರಥಮ ಆಹುತಿ

ಬೆಂಗಳೂರಿನ ಹೊಸಕೋಟೆ ತಾಲ್ಲೂಕಿನ ಗೊಟ್ಟಿಪುರ ಗ್ರಾಮದ 53 ವರ್ಷ ವಯಸ್ಸಿನ ರೈತ ರಾಮಪ್ಪ ಇದೇ ಆಗಸ್ಟ್ 27 ರಂದು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಾಲ್ಲೂಕಿನಾತ್ಯಂತ ದಿಗ್ಭ್ರಮೆಯನ್ನುಂಟು ಮಾಡಿದೆ. ಹೊಸಕೋಟೆ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಯಾರೊಬ್ಬ ರೈತನೂ ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ. ಈ ಸಲದ ಬೀಕರ ಬರ ಮೊತ್ತ ಮೊದಲ ಬಾರಿಗೆ ಒಬ್ಬ ರೈತನನ್ನು ಬಲಿತೆಗೆದುಕೊಂಡಿದೆ.

ರಾಜ್ಯದ ರಾಜಧಾನಿ ಬೆಂಗಳೂರಿನಿಂದ ಕೇವಲ 40 ಕಿ.ಮೀ. ದೂರದಲ್ಲಿರುವ ಗೊಟ್ಟಿಪುರ ಗ್ರಾಮದ ನಿವಾಸಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರೇ ಹೆಚ್ಚು. ಕೇವಲ 29 ಗುಂಟೆ ಭೂಮಿಯನ್ನು ಹೊಂದಿರುವ ರಾಮಪ್ಪ ಆ ಗ್ರಾಮದ ದೇವಸ್ಥಾನವೊಂದರಲ್ಲಿ ಪೂಜಾರಿಯಾಗಿಯೂ ಸೇವೆಸಲ್ಲಿಸುತ್ತಿದ್ದ. ರಾಮಪ್ಪ ಕಳೆದ ಅನೇಕ ವರ್ಷಗಳಿಂದ ತನ್ನ ತುಂಡು ಭೂಮಿಯಲ್ಲಿ ಪಕ್ಕದ ಹೂಳೂರು ಅಮ್ಮನ ಕೆರೆಯ ನೀರನ್ನು ಬಳಸಿ ರಾಗಿ ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದ.

ಈ ಸಲ ಮಳೆ ಕೈ ಕೊಟ್ಟ ಪರಿಣಾಮವಾಗಿ ರಾಮಪ್ಪ ಬೇರೆಯವರಿಂದ 60 ಸಾವಿರ ರೂ. ಸಾಲತಂದು ತನ್ನ ಭೂಮಿಯಲ್ಲಿ ಎರಡು ಕಡೆ ಕೊಳವೆ ಬಾವಿಗಳನ್ನು ತೋಡಿಸಿಕೊಂಡಿದ್ದ. 400 ಅಡಿಗಲ ವರೆಗೆ ಬಾವಿಗಳನ್ನು ಕೊರೆದರೂ ನೀರು ದೊರೆಯಲಿಲ್ಲ. ರಾಮಪ್ಪನಿಗೆ ದೇವರ ಮೇಲೆ ತುಂಬಾ ವಿಶ್ವಾಸ. ಮಳೆಗಾಗಿ ಆತ ತುಂಬಾ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದ. ಒಳ್ಳೆಯ ಮಳೆ ಬಂದು, ಚೆನ್ನಾಗಿ ಬೆಳೆ ಬಂದರೆ, ತನ್ನ ಆರ್ಥಿಕ ಸಮಸ್ಯೆಗಳೆಲ್ಲವೂ ಪರಿಹಾರವಾಗುವುವು ಎಂದು ಆತ ವಿಶ್ವಾಸವನ್ನಿಟ್ಟುಕೊಂಡಿದ್ದ.



ರಾಮಪ್ಪ (ಒಳಚಿತ್ರ) ಮತ್ತು ಅವರ ಪತ್ನಿ ಶಾರದಮ್ಮ

ಮಳೆ ಬರಬಹುದೆಂಬ ನಂಬಿಕೆಯಿಂದ ರಾಮಪ್ಪ ಮನೆಯಲ್ಲಿದ್ದ ಹಸುವನ್ನು ಮಾರಾಟ ಮಾಡಿ ಗದ್ದೆಯಲ್ಲಿ ಬೀನ್ಸ್ ಬಿತ್ತಿದ. ಕೆರೆಯಿಂದ ಹನಿ ಹನಿ ನೀರನ್ನು ಸಂಗ್ರಹಿಸಿ ಆತ ಗದ್ದೆ ಯಲ್ಲಿ ಪೈರು ಒಣಗದಂತೆ ನೋಡಿಕೊಂಡ. ಬೀನ್ಸ್ ಬಳ್ಳಿ ಹೂ ಬಿಡಲು ಆರಂಭವಾಗುವಷ್ಟರಲ್ಲಿ ಕೆರೆಯಲ್ಲಿನ ನೀರು ಸಂಪೂರ್ಣ ಬತ್ತಿಯೋಯಿತು. "ಪೈರಿಗೆ ಹಾಕಲು ತಂದಿಟ್ಟ ಕ್ರಿಮಿನಾಶಕವನ್ನೇ ಸೇವಿಸಿ ನನ್ನ ಗಂಡ ಆತ್ಮಹತ್ಯೆಮಾಡಿಕೊಂಡ" ಎಂದು ಕಣ್ಣೀರಿಡುತ್ತಾಳೆ ಆತನ ಹೆಂಡತಿ ಶಾರದಮ್ಮ.

ಸರ್ಕಾರಿ ಯಂತ್ರದ ಮೇಲೆ ಈ ಘಟನೆ ಯಾವುದೇ ಪರಿಣಾಮ ಬೀರಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘವು ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದೆ. ಗ್ರಾಮಾಂತರ ಜಿಲ್ಲಾಧಿಕಾರಿ ನಾರಾಯಣ ಸ್ವಾಮಿಯವರು ತಕ್ಷಣದಲ್ಲಿ ಭೇಟಿ ನೀಡಿ ಸ್ಪಂದಿಸಿದ್ದಾರೆ. ಆದರೆ ಕೃಷ್ಣ ಸರ್ಕಾರ ವಿರೇಶ್ ವರದಿಯನ್ನು ಮುಂದಿಟ್ಟುಕೊಂಡು "ಪರಿಹಾರದ ಹಣಕ್ಕಾಗಿ ರೈತರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ" ಎಂಬ ಉದ್ಧಟತನದ ನಿಲುಮೆಗೆ ಬಂದಂದಿರುವಾಗ ಜೀವಕಳೆದು ಕೊಂಡ ಕುಟುಂಬಕ್ಕೆ ನೆರವು ನೀಡಿಯಾರೆ?. ಹಣಕ್ಕಾಗಿ ಮಂತ್ರಿಗಳು ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳಲು ತಯಾರಾದರೆ ಅವರಿಗೆ ರೈತರಿಂದ 50 ಲಕ್ಷ ಸಂಗ್ರಹಮಾಡಿ ಕೊಡಲು ಸಿದ್ಧರಿದ್ದೇವೆ ಎಂದು ರೈತಸಂಘ ಸವಾಲು ಹಾಕಿದೆ. ಹೊಸಕೋಟೆ ತಾಲ್ಲೂಕಿನ ರೈತರು ಗೊಟ್ಟಿಪುರದ ರೈತರೊಂದಿಗೆ ಕಾಲುನಡಿಗೆಯಲ್ಲಿ ಬರಲಿದ್ದಾರೆ ಬೆಂಗಳೂರಿಗೆ. ಈ ಸಲದ ಬರದ ಭೀಕರತೆಗೆ ರಾಮಪ್ಪನ ಸಾವು ಒಂದು ಸಾಕ್ಷಿ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಉದಾಸೀನತೆಯ ನಡುವೆ ರೈತರು ಬರದೊಂದಿಗೆ ಹೋರಾಡಿ ಮಣ್ಣಾಗುತ್ತಿದ್ದಾರೆ.

- ನಿತ್ಯಾನಂದಸ್ವಾಮಿ

ವೀರಪ್ಪನ್ ಅಟ್ಟಹಾಸ - ಹೊಣೆಗೇಡಿ ಸರ್ಕಾರಗಳು

ಕಾಡುಗಳ್ಳ ವೀರಪ್ಪನ್‌ಗೆ ಈಗ ಮತ್ತೆ ಸುದ್ದಿ ಮಾಧ್ಯಮದ ಕೇಂದ್ರ ಸ್ಥಾನ. ಮಾಜಿ ಸಚಿವ ನಾಗಪ್ಪನ ಅಪಹರಣವಾದ ನಂತರ ಅವರನ್ನು ಬಿಡಿಸಲು ಹಾಗೂ ನರಹಂತಕನನ್ನು ಹಿಡಿಯಲು ಸರ್ಕಾರವೀಗ ಕ್ರೀಯಾಶೀಲ. ಡಾ. ರಾಜ್‌ರವರ ಬಿಡುಗಡೆ ಬಳಿಕ ಒಂದು ರೀತಿಯಲ್ಲಿ ವೀರಪ್ಪನ್‌ನ ವಿರುದ್ಧದ ಕಾರ್ಯಾಚರಣೆ ತೆರೆಗೆ ಸರಿದಿತ್ತು ಎಂಬಂತಹ ಸ್ಥಿತಿ. ಈಗ ಸಮರ ಹಾಗೂ ಸಂಧಾನ ಎಂಬ ಸಾಧ್ಯತೆಗಳ ಶೋಧನೆಯಲ್ಲಿ ಸರ್ಕಾರ ಮಗ್ನ.



ವೀರಪ್ಪನ್

ಇತ್ತ ಡಾ. ರಾಜ್‌ಕುಮಾರ್ ತಮ್ಮ ಅಪಹರಣದ ನಂತರದ ಮೊದಲ ಭೇಟಿಯೆಂದು ಹುಟ್ಟೂರು ಗಾಜನೂರಿಗೆ ಹೋಗಿ ಕಹಿನೆನಪುಗಳ ಮೆಲುಕು ಹಾಕುತ್ತಿರುವಾಗ ಅತ್ತ ನಾಗಪ್ಪನವರ ಅಪಹರಣ ನಡೆದಿದೆ. ನಾಗಪ್ಪನವರು ಕಾಮಗೆರೆಯ ಅವರ ಮನೆಯಲ್ಲಿರುವಾಗ ನುಗ್ಗಿದ ವೀರಪ್ಪನ್ ಹಾಗೂ ಏಳು ಜನ ಶಸ್ತ್ರದಾರಿಗಳ ತಂಡ ಅಪಹರಿಸಿದೆ. ಕಾಡುಸೇರಲು ಪ್ರಾಯಾಣಿಕರಿದ್ದ ಖಾಸಗಿ ಬಸ್‌ನ್ನು (ಖಾಲಿಮಾಡಿಸಿ) ಬಳಸಲಾಗಿದೆ. ಹತ್ತಿರಲ್ಲೇ ಪೋಲೀಸ್ ತಂಡದ ವಾಹನ ಇರುವುದನ್ನು ಗ್ರಹಿಸಿದ ಅಪಹರಣಕಾರರು ಬಸ್‌ನಿಲ್ಲಿಸಿ ಪರಾರಿಯಾಗಿದ್ದಾರೆ. ಮರಳಿ ಕಾಡುಹೊಕ್ಕ ನಂತರ ಅಲ್ಲಿಂದ ಹೊಸ ಸಂದೇಶಗಳು ಸಂಪರ್ಕ ಇಲ್ಲವಾಗಿದೆಯಂತೆ. ಅಪಹರಣ ಮಾಡುವಾಗ ಕೊಟ್ಟು ಹೋದ 56 ಸೆಕೆಂಡುಗಳು ಕ್ಯಾಸೆಟ್‌ನಲ್ಲಿನ ಬಂಧಿತನಾಗರುವ ತನ್ನ ಸಹಚರರು ಮುಖ್ಯವಾಗಿ LTTE ಬೆಂಬಲಿಗ ತಮಿಳು ರಾಷ್ಟ್ರೀಯವಾದಿ ನೆಡುಮಾರನ್, ಹಾಗೂ ಸಂಧಾನಕಾರರಾಗಿದ್ದ ಪತ್ರಕರ್ತರುಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾನಂತೆ, ಹಿಂದೆ ಕರ್ನಾಟಕ, ತಮಿಳುನಾಡು ಸರ್ಕಾರಗಳು ತನಗೆ ಕೊಟ್ಟ 'ವಚನ' ಭಂಗಪಡಿಸಿದ್ದಾನೆಂದು ಆಕ್ಷೇಪಿಸಿದ್ದನಂತೆ ವೀರಪ್ಪನ್. ಈ ಹಿಂದಿನ ಸಂಧಾನಕಾರರೆಲ್ಲಾ ಜೈಲಿನಲ್ಲಿರುವುದರಿಂದ ಸಂಧಾನಕಾರರನ್ನು ಹುಡುಕುವುದು ಸರ್ಕಾರಕ್ಕೆ ಒಂದು ಸಮಸ್ಯೆಯಂತೆ. ಈಗ ಹೊಸ ಸಂಧಾನಕಾರರಾಗಿ ತೆರಳಲು ಒಂದೆರಡು ವಕೀಲರು ಸಿದ್ದರಾಗುತ್ತಿದ್ದಾರೆ. ಆದರೆ ಸರ್ಕಾರ ಅದನ್ನು ಇನ್ನೂ ಪರಿಗಣಿಸಿಲ್ಲ.

ಕರ್ನಾಟಕ-ತಮಿಳುನಾಡು ಇಬ್ಬರೂ ಹೊಣೆ


ವೀರಪ್ಪನ್‌ನ ಅಟ್ಟಹಾಸ ಇನ್ನು ಮುಂದುವರಿಯುತ್ತಿರುವುದರ ಹೊಣೆ ಪೂರ್ಣವಾಗಿ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳ ಮೇಲಿದೆ. ಈ ಎರಡೂ ಸರ್ಕಾರಗಳೂ ಅತ್ಯಂತ ಬೇಜವಾಬ್ದಾರಿಯಾಗಿ ವರ್ತಿಸಿವೆ. ನಿರಂತರ, ನಿಖರ ಕಾರ್ಯಾಚರಣೆ ನಡೆಸಿ ಸದೆಬಡಿಯಬಹುದಾದ ಬಹಳಷ್ಟು ಅವಕಾಶಗಳನ್ನು ತಪ್ಪಿಸಿಕೊಳ್ಳುತ್ತಲೇ ಬಂದಿದೆ. ಅವನು ಇಷ್ಟೊಂದು ಪ್ರಮಾಣದಲ್ಲಿ ಬೆಳೆಯುವಲ್ಲಿ ಅಧಿಕಾರದಲ್ಲಿರುವ ಹಲವರ ಬೆಂಬಲವಿದ್ದೆ ಇದೆಯೆಂಬುದು ಸಾರ್ವಜನಿಕರಲ್ಲಿ ಬಲವಾದ ಅಭಿಪ್ರಾಯ. ಈ ಕೃತ್ಯಗಳ ಹೊಣೆಯಿಂದ ಸರ್ಕಾರಗಳು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಡಾ. ರಾಜ್ ಅಪಹರಣದ ನಂತರ ವೀರಪ್ಪನ್ ವಿರುದ್ಧದ ಕಾರ್ಯಾಚರಣೆ ನಿಂತೇ ಹೋಯಿತು ಎಂಬಂತಾಗಿತ್ತು. ಹಲವು ಅಧಿಕಾರಿಗಳು ಬದಲಾವಣೆಯಾಯಿತು. ಆ ಹೊತ್ತಿಗೆ ಕೇವಲ 4 ಜನರಷ್ಟೇ ಇದ್ದ ತಂಡ ಈಗ ನಾಗಪ್ಪನವರ ಅಪಹರಣದ ವೇಳೆಗೆ ಮತ್ತೆ ಬಲಿತಂತೆ ಕಾಣುತ್ತಿದೆ. ಆ ಪ್ರದೇಶದ ಕಾಡುಗಳ್ಳ ಯುವಕರು, ವೀರಪ್ಪನ್‌ನನ್ನು ಸೇರಿದ್ದಾರಂತೆ. ಅಪಾಯಕಾರಿ ಸಂಗತಿಯೆಂದರೆ ಈ ಅವಧಿಯಲ್ಲಿ ವೀರಪ್ಪನ್ LTTE ಮುಂತಾದ ಉಗ್ರಗಾಮಿಗಳ ಸಂಪರ್ಕದಲ್ಲಿರುವುದು, ಅವರನ್ನು ನೆಚ್ಚಿಕೊಳ್ಳುತ್ತಿರುವುದು.

ಅರಕೇಶ್ ವರದಿ: ಚಾರಿಮಾಡುತ್ತಿರುವ ವೀರಪ್ಪನ್!

ಈಗಿನ ಪ್ರಕರಣವನ್ನೇ ತೆಗೆದುಕೊಂಡರೆ ಅಪಹರಣ ವಾಗಬಹುದಾದ ಪ್ರಮುಖರ ಹೆಸರುಗಳಲ್ಲಿ ನಾಗಪ್ಪನವರದ್ದು ಎರಡನೆಯದು. ಡಾ. ರಾಜ್ ಮೊದಲನೆಯದು. ಇದನ್ನು ರಾಜ್ಯ ಗುಪ್ತಾಚಾರ ಇಲಾಖೆಯು ಪತ್ತೆ ಮಾಡಿದೆ. ಹಿಂದೆ ವಿಶೇಷ ಕಾರ್ಯಚರಣೆ ಪಡೆಯ ತಂಡದಲ್ಲಿದ್ದ ಎಸ್ಪಿಯಾಗಿದ್ದ ಅರಕೇಶ್ ನಿಖರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ವೀರಪ್ಪನ್‌ನ ಚಟುವಟಿಕೆಗಳು ಅವ್ಯಾಹತವಾಗಿ ಮುಂದುವರಿದಿರುವಾಗ, ನಾಗಪ್ಪನವರ ರಕ್ಷಣೆ ಹೆಚ್ಚಿನ ಕ್ರಮಗಳನ್ನು ಸರ್ಕಾರ ಕೈಗೊಂಡಿಲ್ಲ. ಕೇವಲ ಒಬ್ಬಿಬ್ಬರು ಪೇದೆಗಳನ್ನು ನಿಯೋಜಿಸಿ ಪೋಲೀಸ್ ಇಲಾಖೆ ಕೈತೊಳೆದುಕೊಂಡಿದೆ. ಗುಪ್ತಚರ ಇಲಾಖೆ ಪೂರ್ಣವಾಗಿ ವಿಫಲಗೊಂಡು ನಿಷ್ಕ್ರಿಯತೆ ತೋರಿದೆ. ನಾಗಪ್ಪನವರ ಅಪಹರಣವಾದ ಕೂಡಲೇ ಅವರ ಹೆಂಡತಿ ಪೋಲೀಸ್‌ಠಾಣೆಗೆ ಸುದ್ದಿ ಮುಟ್ಟಿಸಿದ ಹಲವು ತಾಸುಗಳ ನಂತರವೇ ಪೋಲೀಸರು ಮನೆಗೆ ಬಂದಿದ್ದು ಅಷ್ಟರಲ್ಲಿ ಅಪಹರಣಕಾರರು ಕಣ್ಮರೆಯಾಗಲು ಬೇಕಾದಷ್ಟು ಅವಕಾಶ ಸಿಕ್ಕಿಯಾಗಿದೆ

ಹಲವು ಅನುಮಾನಗಳು

ಈ ಎಲ್ಲಾ ವಿದ್ಯಮಾನಗಳಿಂದ ಕಾಮಗೆರೆ ಹಾಗೂ ಕೊಳ್ಳೆಗಾಲದ ಜನತೆ ಆಕ್ರೋಶಗೊಂಡಿದ್ದಾರೆ. ಅಂದಿನಿಂದ ನಿತ್ಯವೂ ಚಳುವಳಿ ಹೂಡಿದ್ದಾರೆ. ಏನಾದರೂ ಮಾಡಿಯಾದರೂ ನಾಗಪ್ಪನವರನ್ನು ಬಿಡಿಸಿಕೊಳ್ಳಬೇಕೆಂದು ಸರ್ಕಾರದ ಮೇಲೆ ಸತತ ಒತ್ತಡ ಹೇರುತ್ತಿದ್ದಾರೆ. ಸರ್ಕಾರದ ಪ್ರಾಮಾಣಿಕತೆಯ ಮೇಲೆ ಶಂಕೆ ಮೂಡಿದೆ. ನಾಗಪ್ಪನವರ ರಾಜಕೀಯ ಪ್ರತಿಸ್ಪರ್ಧಿ ರಾಜುಗೌಡ ವೀರಪ್ಪನ್ ಜೊತೆ ನಿಕಟ ಸಂಬಂಧವಿದೆಯೆಂಬ ಅಭಿಪ್ರಾಯವೂ ಅಲ್ಲಿ ಗಾಢವಾಗಿದೆ. ಮೇಲಾಗಿ ರಾಜುಗೌಡರನ್ನು ಕೃಷ್ಣರವರು ಈಚೆಗಿನ ಸಂಪುಟ ವಿಸ್ತರಣೆಯಲ್ಲಿ ಮಂತ್ರಿಯನ್ನಾಗಿಸಿಕೊಂಡಿರುವುದು ಜನರಲ್ಲಿ ಪ್ರಶ್ನಾರ್ಹವಾಗಿತ್ತು. ನರಹಂತಕ ಎಂತಹ ಹಂತಕ್ಕೂ ಹೋಗುವವನಾಗಿದ್ದು, ನಾಗಪ್ಪನವರು ಅವನ ಕೈಯ್ಯಲ್ಲಿರುವದು ಭದ್ರತಾ ಪಡೆಗಳಿಂದ ಕಾರ್ಯಾಚರಣೆ ಮಾಡುವುದರ ಪರಿಣಾಮ ಏನಾದೀತೆಂಬ ಆತಂಕ ಜನರಲ್ಲಿದೆ. ಎದ್ದುಬಂದಿರುವ ಅನುಮಾನಗಳನ್ನು ಸರ್ಕಾರ ಪರಿಹರಿಸಲೇಬೇಕು.



ಮಾಜಿ ಸಚಿವ ನಾಗಪ್ಪ

ಹಕ್ಕುಗಳ ನಿಷೇಧ?

ದಿನದಿಂದ ದಿನಕ್ಕೂ ಹೆಚ್ಚುತ್ತಿರುವ ಉದ್ವೇಗದ ಪರಿಸ್ಥಿತಿಯನ್ನು ಸರ್ಕಾರ ಸರಿಯಾಗಿ ಗ್ರಹಿಸಬೇಕು. ವೀರಪ್ಪನ್‌ನ ಅಪಹರಣದ ಪ್ರಹಸನಗಳಿಂದ ಆತಂಕ ಹಬ್ಬುತ್ತಿದೆ, ಹಬ್ಬಿಸಲಾಗುತ್ತಿದೆ. ಬರದ ಬವಣೆ ರೈತರ ಆತ್ಮಹತ್ಯೆ, ಖಜಾನೆ ಖಾಲಿ, ವಿಶ್ವ ಬ್ಯಾಂಕ್ ಒತ್ತಡಗಳಂತಹ ಪ್ರಶ್ನೆಗಳು ಮೂಲೆಗೆ

ಈ ವಾರ ಒಂದು ನೋಟ

ಸರಿಯುತ್ತಿವೆ. ಈ ನೆಪದಲ್ಲಿ ಮೆರವಣಿಗೆ ಪ್ರತಿಭಟನೆಗಳಂತಹ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಷೇಧಿಸಿ, ಪೋಲೀಸ ಇಲಾಖೆಯಿಂದ ನಿಷೇಧಾಜ್ಞೆಗಳು ಜಾರಿಗೊಂಡಿವೆ. ಹೀಗೆ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಅಪಹರಿಸಲ್ಪಡುತ್ತಿವೆ.

ದೂಷಣೆಯಲ್ಲಿ ಬೇಕಾದ್ದು

ಈ ಅಪಹರಣದ ಪ್ರಕರಣದ ತಕ್ಷಣವೇ ಸರ್ವಪಕ್ಷಗಳು ಸಭೆಯನ್ನು ಮುಖ್ಯಮಂತ್ರಿಗಳು ಕರೆದು ಚರ್ಚಿಸಿದ್ದಾರೆ. ಇದು ಸ್ವಾಗತಾರ್ಹ. ಅಪಹರಣಗೊಂಡವರ ಬಿಡುಗಡೆಗೆ ಅಗತ್ಯವಿರುವುದನ್ನೆಲ್ಲಾ ಮಾಡಲು ಸರ್ಕಾರಕ್ಕೆ ಸಲಹೆ ನೀಡಲಾಗಿದೆ. ಹಿಂದೆ ಡಾ. ರಾಜ್ ಬಿಡುಗಡೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ವೀರಪ್ಪನ್‌ಗೆ ಒಪ್ಪಿಸಲಾಗಿದೆಯೆಂಬ ಬಗ್ಗೆ ಅನೇಕ ಮಾಹಿತಿಗಳು ಸುದ್ದಿ ಪ್ರಕಟಗೊಂಡಿದ್ದವು. ಅಂತಹ ನಿಧಿ ಸಂಗ್ರದಲ್ಲಿ ಬಲಿತವರ ಹೆಸರುಗಳು ಬಯಲುಗೊಂಡಿದ್ದವು. ಈಗಲೂ ಅಂತಹ ಪ್ರಯತ್ನಗಳು ನಡೆಯದೇ ಇರಲಿಕ್ಕಿಲ್ಲ. ಆದರೆ ಕೃಷ್ಣಸರ್ಕಾರ ಕೈಗೊಳ್ಳುವ ಕ್ರಮಗಳು ಸರ್ಕಾರದ, ಜನತೆಯ ಘನತೆಗೆ ಚ್ಯುತಿ ತರಬಾರದು, ತಲೆಬಾಗಬಾರದು. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರದ್ದು ತಮ್ಮ ಪಾಲಿನ ಕರ್ತವ್ಯ ಬಿಟ್ಟು ಕರ್ನಾಟಕ ಸರ್ಕಾರವನ್ನು ದೂಷಿಸುತ್ತಾ, ಅದರಲ್ಲಿಯೂ ರಾಜಕೀಯ ಮೈಲುಗಲ್ಲು ದಾಟಲು ಯತ್ನಿಸುತ್ತಿರುವುದು ಖಂಡನೀಯ. ಹಾಗೇ ಇದನ್ನು ಜಾತೀಯ ಪ್ರಶ್ನೆಯಾಗಿಸಿ ರಾಜಕೀಯ ದುರ್ಬಳಕೆಗೆ ಯತ್ನಿಸುತ್ತಿರುವುದು ಅಪಾಯಕರ. ಜನತೆ ಇಂತಹದಕ್ಕೆ ಬಲಿಯಾಗ ಬಾರದು.

ಅಪಹರಣ ಮತ್ತು ಗ್ರಾನೈಟ್ ಸಂಬಂಧ

ಇತ್ತೀಚೆಗೆ ವೀರಪ್ಪನ್ ಅಪಹರಣಗಳಲ್ಲಿ ಒಂದು ಸಾಮಾನ್ಯ ಅಂಶ ಕಾಣುತ್ತಿದೆ. ಅದೇನೆಂದರೆ ಗ್ರಾನೈಟ್ ದಂಧೆ. ಸಾವಿರಾರು ಕೋಟಿ ರೂಪಾಯಿಗಳು ದೇಶೀಯ, ವಿದೇಶಿಯ ವ್ಯವಹಾರದಿಂದ ಈ ದಂಧೆ ಬಂಗಾರಕ್ಕಿಂತಲೂ ಹೆಚ್ಚಿನದು. ಹೀಗಾಗಿ ಅಕ್ರಮ ಗಣಿಗಾರಿಕೆಯಲ್ಲಿ ಭಾರೀ ಕುಳಗಳೇ ಇವೆ. ಕೊಳ್ಳೇಗಾಲ ಪ್ರದೇಶದಲ್ಲಿ ಗ್ರಾನೈಟ್‌ನ ಗಣಿಗಾರಿಕೆಯಲ್ಲಿ ತೊಡಗಿರುವವರು ವೀರಪ್ಪನ್‌ಗೆ 'ಕಪ್ಪಕಾಣಿಕೆ' ನೀಡಬೇಕಿದೆಯಂತೆ. ಈ ವ್ಯವಹಾರದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ವೀರಪ್ಪನ್ ಕೇಳುವುದಿಲ್ಲವಂತೆ. ಡಾ. ರಾಜ್‌ರವರ ಅಪಹರಣದ ಸಂದರ್ಭದಲ್ಲಿಯೂ ಇದೇ ಮಾತು ಕೇಳಿತ್ತು. ರಾಜ್‌ರವರ ಒಬ್ಬ ಮಗ ಪುನೀತ್ ಒಬ್ಬ ಗ್ರಾನೈಟ್ ವ್ಯವಹಾರಿ. ಈ ಭಾಗದಲ್ಲಿ ಸಿಗುವ ಅತ್ಯಂತ ಬೆಲೆಬಾಳುವ ಕಪ್ಪು ಗ್ರಾನೈಟ್ ಗಣಿಗಾರಿಕೆ ಮಾಡದಂತೆ ಪಟೇಲ್ ಸರ್ಕಾರ ನಿಷೇಧಾಜ್ಞೆ ಜಾರಿಗೆ ತರುವಲ್ಲಿ ನಾಗಪ್ಪನವರ ಪಾತ್ರವಿದೆಯೆಂದು, ಇಂತಹದ್ದು ರಾಜಕೀಯ ವೈಷಮ್ಯಕ್ಕೆ ತಿರುಗಿದೆಯೆಂದು ವದಂತಿಗಳಿವೆ.

ಒಟ್ಟಾರೆ ಸರ್ಕಾರ ಈಗ ಜಾಗ್ರತೆಯಿಂದ ಹೆಜ್ಜೆ ಇಡಬೇಕಿದೆ. ಜನತೆಯೂ ಸಹ ತಾಳ್ಮೆ ಸಂಯಮದಿಂದ ವರ್ತಿಸಬೇಕು. ಜನರ ಕಾಪಾಡಿಕೊಳ್ಳಬೇಕು.

ಬೆಂಗಳೂರು : ಹೆಚ್ಚಿದ ಕ್ರಿಮಿನಲ್ ಕೃತ್ಯಗಳು

ಕಂಪ್ಯೂಟರ್ ಕಣಿವೆಯೆಂದು ಖ್ಯಾತವಾಗಿರುವ ಬೆಂಗಳೂರು ಕ್ರಿಮಿನಲ್‌ಗಳ ತಾಣವಾಗುತ್ತಿದೆಯೇ? ಇತ್ತೀಚಿನ ತಿಂಗಳುಗಳಲ್ಲಿ ಬೆಂಗಳೂರು ನಗರದಲ್ಲಿ ಘಟಿಸುತ್ತಿರುವ ಭೀಕರ ಕೊಲೆಗಳು, ಹಾಡುಹಗಲೇ ಮನೆಗಳಿಗೆ ನುಗ್ಗಿ ಇದ್ದಬದ್ದದ್ದನ್ನು ದೋಚಿ, ಕೊಲೆಗೈದು ಓಡುವ ದರೋಡೆಗಳು ಹೆಚ್ಚುತ್ತಿವೆ. ಮಕ್ಕಳನ್ನು, ವ್ಯಾಪಾರಿಗಳನ್ನು ಅಪಹರಿಸಿ ಬೆದರಿಸಿ, ಹಣ ಕೀಳಲಾಗುತ್ತಿದೆ. ಮುಖಕ್ಕೆ ಆಸಿಡ್ ಎರಚಲಾಗುತ್ತಿದೆ. ಕಳೆದೆರೆಡು ದಿನಗಳ ಹಿಂದೆ ಜನನಿಬಿಡ ಪ್ರದೇಶದಲ್ಲಿನ ಅಪಾರ್ಟ್‌ಮೆಂಟ್‌ಗೆ ನುಗ್ಗಿದ ದರೋಡೆಖೋರರು ಅಬ್ಕಾರಿ ಇನ್ಸ್‌ಪೆಕ್ಟರ್‌ರ ಮನೆಯಲ್ಲಿದ್ದ ಅವರ ತಾಯಿ, ಹೆಂಡತಿಯನ್ನು ಇಸ್ತ್ರಿಪೆಟ್ಟಿಗೆಯಿಂದಲೇ ತಿವಿದು ಕೊಂದು, ಹಣ, ಒಡವೆ ಲೂಟಿ ಮಾಡಿದ್ದಾರೆ.

ಬೆಂಗಳೂರು ಜಾಗತಿಕ ಬಂಡವಾಳಕ್ಕೆ ತೆರೆದುಕೊಳ್ಳುತ್ತಿರುವಂತೆಯೇ ಹಲವಾರು ಕ್ರೂರ ಕ್ರಿಮಿನಲ್‌ಗಳೂ ಬೆಂಗಳೂರಿನಲ್ಲಿ ತಳವೂರುತ್ತಿದ್ದಾರೆ. ಬಾಂಬೆ ಮುಂತಾದೆಡೆಗಳಿಂದ ಮಾಫಿಯಾಗಳು, ರೌಡಿಗಳು ಬೆಂಗಳೂರಿನ ಈ ಸೈಬರ್ ಸಿಟಿ ಸೇರುತ್ತಿದ್ದಾರೆ. ದೇಶಬಿಟ್ಟು ತಲೆಮರೆಸಿಕೊಂಡಿದ್ದ ಅಪರಾಧಿ ಜಗತ್ತಿನ ಭೂಗತ ಕುಖ್ಯಾತಿಯ ಮುತ್ತಪ್ಪ ರೈ ಬೆಂಗಳೂರಿಗೆ ಬಂದಿದ್ದಾನೆ(ಅಥವಾ ಇಳಿಸಲ್ಪಟ್ಟಿದ್ದಾನೆ). ಈ ವೃತ್ತಿನಿರತ ಕ್ರಿಮಿನಲ್‌ಗಳೊಂದಿಗೆ. ಹೊಸದಾಗಿ ಹಲವು ತಂಡಗಳು ಸೃಷ್ಟಿಗೊಳ್ಳುತ್ತಿವೆ. ಆರ್ಥಿಕ ಬಿಕ್ಕಟ್ಟು, ದಿವಾಳಿಯೆಬ್ಬಿಸುವ ಸ್ಥಿತಿಯೆದುರು ಬದುಕಲು ದಾರಿಕಾಣದವರು, ಹೆಚ್ಚುತ್ತಿರುವ ನಿರುದ್ಯೋಗ ಸಹ ಅಂತಹ ಕ್ರಿಮಿನಲ್ ಪಡೆಯನ್ನು ಬಲಗೊಳಿಸುತ್ತಿದೆ. ಈಒಟ್ಟಾರೆ ಕ್ರಿಮಿನಲ್ ಕೃತ್ಯಗಳು ಬೆಂಗಳೂರಿನ ಹಾಗೂ ಸುತ್ತಲಿನ ನಾಗರೀಕರನ್ನು ತಲ್ಲಣಗೊಳಿಸಿ, ಭಯಭೀತರನ್ನಾಗಿಸಿವೆ. ಸರ್ಕಾರದ ವಿರುದ್ಧ, ಆಕ್ರೋಶವುಂಟು ಮಾಡಿದೆ.

ಇಂತಹ ಸರಣಿ ಅಪರಾಧಗಳು ಹೆಚ್ಚುತ್ತಿರುವ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅವುಗಳನ್ನು ತಡೆಗಟ್ಟಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು. ಎಸ್.ಎಂ.ಕೃಷ್ಣರ ಸರ್ಕಾರ ಇದಕ್ಕೆ ಉತ್ತರ ಹೇಳಲೇಬೇಕು.

ಆತಂಕದ ಇನ್ನೊಂದು ಸಂಗತಿಯೆಂದರೆ ಈ ಕ್ರಿಮಿನಲ್‌ಗಳು, ಕೆಲ ಪೋಲೀಸ್ ಅಧಿಕಾರಿಗಳು, ಮತ್ತು ರಾಜಕಾರಣಿಗಳೊಂದಿಗಿನ ನಂಟುಗಳು ಬಯಲಿಗೆ ಬರುತ್ತಿರುವುದು. ಹೀಗಾಗಿ ಅಪರಾಧಿಗಳನ್ನು ಮಟ್ಟಹಾಕಲು ಅಗತ್ಯಕ್ರಮ ವಹಿಸದೇ ಹೋಗಲಾಗುತ್ತಿದೆ ಎಂಬುದು. ಆದ್ದರಿಂದ ಸರ್ಕಾರ ಅತ್ಯಂತ ಬಿಗಿಯಾದ ಅಗತ್ಯ ಕ್ರಮವಹಿಸಿ ಇಂತಹುಗಳನ್ನು ದಮನಿಸಬೇಕು. ನಾಗರೀಕರಿಗೆ ಅವರ ಜೀವ-ಆಸ್ತಿಗಳಿಗೆ ಭದ್ರತೆ ಒದಗಿಸಬೇಕು. ಇದಕ್ಕಾಗಿ ನಾಗರೀಕರ ಒತ್ತಡ, ಚಳುವಳಿ ಅಗತ್ಯ.

ಇದೇ ಸಂದರ್ಭವನ್ನು ಉಪಯೋಗಿಸಿ ಬಿಜೆಪಿ ಬೆಂಗಳೂರಿನ ಪೋಲೀಸ್ ಕಮಿಷನರ್ ಸಾಂಗ್ಲಿಯಾನರ ಮೇಲೆ ಧಾಳಿ ಆರಂಭಿಸಿದೆ. ನಿಜ ಸಾಂಗ್ಲಿಯಾನ ಒಬ್ಬ್ ಅಧಿಕಾರಿಯಾಗಿ ಹೊಣೆ ಇದೆ ಆದರೆ ಅವರೇ ಇದಕ್ಕೆಲ್ಲಾ ಹೊಣೆಯೆಂದು, ಅವರನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕೆಂದು ಭಾಜಪ ಗಣ ಒತ್ತಾಯಿಸುತ್ತಿದ್ದಾರೆ. ಸಾಂಗ್ಲಿಯಾನರ ಮೇಲೆ ಬಿಜೆಪಿ ದಾಳಿ ಇದು ಮೊದಲಲ್ಲ. ಅವರು ಬೆಂಗಳೂರು ಕಮಿಷನರ್ ಆಗಿ ನೇಮಕವಾದಂದಿನಿಂದ ಸತತವಾಗಿ ಒಂದಿಲ್ಲೊಂದು ನೆಪವೊಡ್ಡಿ ಇಂತಹುದೇ ಬೇಡಿಕೆ ಮಂಡಿಸುತ್ತಿದೆ. ಮತ್ತು ಅವಕಾಶ ಬಳಸಿ ವ್ಯಾಪಕ ಅಪಪ್ರಚಾರ ಮಾಡಲಾಗುತ್ತಿದೆ. ಅನೇಕ ಕ್ರಿಮಿನಲ್‌ಗಳಿಗೆ ರಾಜಕೀಯ ಆಶ್ರಯ ನೀಡಿ, ಕಾನೂನು-ವ್ಯವಸ್ಥೆ, ಸಂವಿಧಾನ ಗಾಳಿಗೆ ತೂರಿ ಹಿಂಸಾಚಾರ, ಕೊಲೆ-ಸುಲಿಗೆಗಳಿಗೆ ಕುಮ್ಮಕ್ಕು ನೀಡಿದ ಇತಿಹಾಸವಿರುವ ಬಿಜೆಪಿ, ಸಾಂಗ್ಲಿಯಾನರ ಮೇಲೆ ಧಾಳಿ ನಡೆಸುತ್ತಿರುವುದೇ ಅವರೊಬ್ಬ ಅಲ್ಪಸಂಖ್ಯಾತ ಕೋಮಿಗೆ ಸೇರಿದವರೆಂಬುದು. ಸಂಘ ಪರಿವಾರದ ಈ ದ್ವೇಷ ಯಾರಿಗೂ ಅರ್ಥವಾಗುವಂತಹದ್ದು.

ಸಂಗಾತಿ ಶ್ರೀನಿವಾಸ ಬಜಾಲ್ ಕುಟುಂಬಕ್ಕೆ ನಿಧಿ ಅರ್ಪಣೆ

ಹಿಂದೂ ಯುವಸೇನೆಯ ಗೂಂಡಾಗಳಿಂದ ಭೀಕರವಾಗಿ ಕೊಲೆಗೀಡಾದ ಸಂಗಾತಿ ಶ್ರೀನಿವಾಸ ಬಜಾಲ್ ರವರ ಕುಟುಂಬಕ್ಕೆ ನೆರವು ನೀಡಲು ನಿಧಿ ಸಮರ್ಪಿಸಲಾಯಿತು. ರಾಜ್ಯದ ಪಕ್ಕದಕೇರಳದ ದೇಶಪ್ರೇಮಿ ಜನತೆ ಅತ್ಯಪೂರ್ವವಾಗಿ ಸ್ಪಂದಿಸಿ ನಿಧಿ ನೀಡಿದ್ದಾರೆ. ಕೋಮುವಾದಿಗಳನ್ನು ಮೆಟ್ಟಲು ಸಾಗಿರುವ ಸಮರದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಹೋರಾಟ ಮುಂದೊಯ್ಯುವ ಪ್ರತಿಜ್ಞೆ ಮಾಡಿದರು

ಜೂನ್ 24 ರಂದು ಕೋಮುವಾದಿಗಳಿಂದ ಹತ್ಯೆಯಾದ ಸಂಗಾತಿ ಶ್ರೀನಿವಾಸ್ ಬಜಾಲ್ ಕುಟುಂಬಕ್ಕೆ ರಾಜ್ಯದ ಜನತೆಯು ಪರವಾಗಿ ಸಂಗ್ರಹಿಸಲಾಗಿದ್ದ ನಿಧಿಯನ್ನು ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅರ್ಪಿಸಲಾಯಿತು. ಒಟ್ಟು 1.61 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ.

ಹೃದಯಸ್ಪರ್ಶಿ ಸಮಾರಂಭ

ನಗರದ ಎನ್‌ಜಿಓ ಸಭಾಂಗಣದಲ್ಲಿ ಆಗಸ್ಟ್ 15 ರಂದು ಕಾರ್ಯಕ್ರಮವನ್ನು ಡಿವೈಎಫ್‌ಐ ಜಿಲ್ಲಾ ಸಮಿತಿ ವ್ಯವಸ್ಥೆಗೊಳಿಸಿತ್ತು. ಸಭೆಯ ಆರಂಭದಲ್ಲಿ ಡಿವೈಎಫ್‌ಐ ಕೇರಳ ರಾಜ್ಯ ಸಮಿತಿ , ಕಣ್ಣೂರು ಹಾಗೂ ಕಾಸರಗೋಡು ಜಿಲ್ಲಾ ಸಮಿತಿಗಳು ಸಂಗ್ರಹಿಸಿ ತಂದಿದ್ದ 61 ಸಾವಿರ ರೂಪಾಯಿಗಳನ್ನು ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ವಿ.ವಿ.ರ 'ಮೇಶನ್, ರಾಜ್ಯ ಸಮಿತಿ ಸದಸ್ಯರಾದ ರಜೀಂದ್ರನಾಥ್ ಹಾಗೂ ಮಂಜೇಶ್ವರ ಬ್ಲಾಕ್ ಕಾರ್ಯದರ್ಶಿ ದಯಾನಂದರವರು ದ.ಕನ್ನಡ ಜಿಲ್ಲಾ ಸಮಿತಿಗೆ ಹಸ್ತಾಂತರಿಸಿದರು. ನಂತರದಲ್ಲಿ ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಶಾಂತ ರಾಮನಾಯಕರವರು ಕರ್ನಾಟಕ ರಾಜ್ಯ ಸಮಿತಿ ದ. ಕನ್ನಡ ಜಿಲ್ಲಾ ಸಮಿತಿ ಹಾಗೂ ಕೇರಳ ರಾಜ್ಯ ಸಮಿತಿ ಪರವಾಗಿ ಜೀವ ವಿಮಾ ನಿಗಮದಲ್ಲಿ ಇಡಲಾದ ನಿಗದಿತ ಠೇವಣಿ ಸರ್ಟಿಫಿಕೇಟನ್ನು ಸಂಗಾತಿ ಶ್ರೀನಿವಾಸ ಬಜಾಲ್ ರವರ ತಾಯಿ ಹಾಗೂ ಸಹೋದರಿಯವರಿಗೆ ಅರ್ಪಿಸಿದರು.



ನಂತರದಲ್ಲಿ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷ ಯಶವಂತ ಮುದೋಳಿ, ಜಯಾನಂದ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಬಿ.ಮಾಧವ, ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಮೊದಲಾದವರು ಮಾತನಾಡಿದರು. ಕ್ರಾಂತಿಕಾರಿಗಳ ಆದರ್ಶಗಳನ್ನು ಎತ್ತಿಹಿಡಿದು ಮುನ್ನಡೆಯುತ್ತಿರುವ ಡಿವೈಎಫ್‌ಐ ಸಂಘಟನೆಯ ಕಾರ್ಯಕರ್ತರನ್ನು ಕೊಲ್ಲುವುದರ ಮೂಲಕ ತಡೆಯೊಡ್ಡಲು ಸಾಧ್ಯವಿಲ್ಲ ಎಂಬ ಕಟು ಸತ್ಯವನ್ನು ಎಲ್ಲಾಕೋಮುವಾದಿ ಶಕ್ತಿಗಳು ಅರಿತುಕೊಳ್ಳಬೇಕು. ಇಂತಹ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಡಿವೈಎಫ್‌ಐ ಸಂಘಟನೆಯನ್ನು ಮತ್ತಷ್ಟು ಬಲಿಷ್ಟಗೊಳಿಸಲು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಕೊಂಚಾಡಿ ಯವರು ವಹಿಸಿದ್ದರು. ಡಿವೈಎಫ್‌ಐ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಆರಂಭದಲ್ಲಿ ಒಂದು ನಿಮಿಷ ಮೌನ ಆಚರಿಸಲಾಯಿತು.

ಶ್ರೀನಿವಾಸ ಸ್ಮಾರಕ ಕಾರ್ಯಕ್ರಮಗಳು: ಶ್ರೀನಿವಾಸ ಬಜಾಲ್ ಕುಟುಂಬಕ್ಕೆ ನೀಡಿ ಉಳಿಯುವ ಹಣದಲ್ಲಿ ಶ್ರೀನಿವಾಸ್ ನೆನಪಿನಲ್ಲಿ ಕ್ರೀಡಾ, ಸಾಹಿತ್ಯ, ಜನಪರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಶ್ರೀನಿವಾಸ್ ನೆನಪಿನಲ್ಲಿ ಜಿಲ್ಲಾಮಟ್ಟದ ಶಿಬಿರ

ಆಗಸ್ಟ್ 18ರಿಂದ 24 ರವರೆಗೆ ಜಿಲ್ಲಾ ಮಟ್ಟದ ಪ್ರಮುಖ 40 ಜನ ಕಾರ್ಯಕರ್ತರಿಗೆ 7 ದಿನಗಳ ಸೈದ್ಧಾಂತಿಕ, ಸಂಘಟನಾ, ರಾಜಕೀಯ ಶಿಬಿರವು ಮಂಗಳೂರು ಸಮೀಪದ ಕುಲಶೇಖರ ಪ್ರಿಯದರ್ಶಿನಿ ಸಭಾಂಗಣದಲ್ಲಿ ವೈವಿಧ್ಯಮಯವಾಗಿ ನಡೆಯಿತು.

ಹುತಾತ್ಮ ಶ್ರೀನಿವಾಸ ಬಜಾಲ್ ನಿಧಿ




ಕಳೆದ ವಾರದ ಸಂಗ್ರಹ	36110-75
ಈ ವಾರದ ಸಂಗ್ರಹ	
ಎಐಎಲ್‌ಯು ರಾಜ್ಯ ಸಮಿತಿ ಸಭೆಯಲ್ಲಿಸಂಗ್ರಹ	550-00
ಡಿವೈಎಫ್‌ಐ ಉ.ಕ. ಜಿಲ್ಲಾ ಸಮಿತಿ ಸಂಗ್ರಹ	2000-00
ರಾಯಚೂರು ಡಿವೈಎಫ್‌ಐ ಸಭೆ	118-00
ಡಿವೈಎಫ್‌ಐ ಕುಂದಾಪುರ	1000-00
ಡಿವೈಎಫ್‌ಐ ತೆಂಕನಿಡಿಯೂರು, ಉಡುಪಿ	700-00
ಕೈಮಗ್ಗ ನೇಕಾರರ ಸಂಘ, ರಾಣೆಬೆನ್ನೂರು	500-00
ಪ್ರೊ. ಚಿಕ್ಕನರಗುಂದ, ರಾಮದುರ್ಗ	110-00
ಡಿವೈಎಫ್‌ಐ ರಾಮದುರ್ಗ ಘಟಕ	1000-00
ಜೆಎಂಎಸ್ ಜಿಲ್ಲಾ ಸಮಿತಿ ಬಳ್ಳಾರಿ	500-00
ಕೊಪ್ಪಳ ಜಿಲ್ಲಾಹಮಾಲರ ಸಮಾವೇಶ	550-00
ಎಸ್‌ಎಫ್‌ಐ ಮಂಡ್ಯಜಿಲ್ಲಾ ಸಮಿತಿ	500-00
ಪೇಪರ್ ಮಿಲ್ ಸಿಪಿಐ(ಎಂ) ಶಾಖೆ, ದಾಂಡೇಲಿ	305-00
ಕೆಪಿಆರ್‌ಎಸ್ ಜೋಯಿಡಾ ತಾಲೂಕು	100-00
ಜೆ.ಮಂಜುಳಾ, ಚಾಮರಾಜಪೇಟೆ, ಬೆಂಗಳೂರು	100-00
ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ಯು.ಶೇಕ್ಷಪ್ಪ	350-00
ಶ್ರೀಮತಿಶ್ರೀ ಫಿಲೋಮಿನಾ ಪೌಲ್	300-00
ರಾಘವ ಕೆ.	200-00
ಅದಮಾರು ಶ್ರೀಪತಿ ಆಚಾರ್ಯ	500-00
ಕೆ.ಜೆ.ದೇವಾಡಿಗ	500-00
ವಾಸುದೇವ ಉಚಿಲ್	250-00
ಮೈಕಲ್ ಎಫ್.	100-00
ಹರೀಶ್ ಪಿ.	500-00
ಗಣೇಶ್ ನಿತಿನ್	200-00
ಎಲ್‌ಐಸಿ ಸಂಗಾತಿಗಳು ಕಾಪು	400-00
ನೆಲ್ಸನ್ ರೋಚ್	300-00
ತೇಜ್‌ಪಾಲ್	500-00
ಡಾ.ಶ್ರೀನಿವಾಸ ಕಕ್ಕಿಲಾಯ	200-00
ಜೀವಕುಮಾರ್	200-00
ಸರಳ, ಎಲ್‌ಐಸಿ ಮಂಗಳೂರು	100-00
ಎನ್.ಎಂ.ಬಂಗೇರ	100-00
ಸಂಜೀವ ಬಳ್ಕೂರ್	1000-00
ನಾಗೇಶ / ಶರತ್ ಸುರತ್ಕಲ್	250-00
ಶ್ಯಾಂ ಸುಂದರ್	200-00
ಎಂ.ಡಿ.ವೆಂಕಪ್ಪ, ಎಲ್‌ಐಸಿ	101-00
ದ.ರೈಲ್ವೆ ಎಂಪ್ಲಾಯಿಸ್ ಯೂನಿಯನ್ ಮಂಗಳೂರು	1000-00
ಆಲ್ವಿನ್ ಜೋನ್ಸ್	500-00
ಬಿ.ಕೆ.ಲಕ್ಷ್ಮಿ ಮಡಿಕೇರಿ	250-00
ಎಲ್‌ಐಸಿ ಸಂಗಾತಿಗಳು, ಮುಲ್ಕಿ	700-00
ಎಂ.ದೇವದಾಸ್	250-00
ಜಿಐಸಿ ಸಂಗಾತಿಗಳು, ಮಂಗಳೂರು	1000-00
ಸದಾಶಿವ ಶಿಬನಾಲ್	250-00
ಯಶವಂತ ಮುದೋಳಿ	1000-00
ಮಹಮದ್ ಇಕ್ಬಾಲ್, ಸೌದಿಅರೆಬಿಯಾ	3000-00
ರವೀಂದ್ರ ತಲವಾಜಿ	1000-00
ರಾಘವೇಂದ್ರ ರಾವ್, ಎಲ್‌ಐಸಿ ಮಂಗಳೂರು	500-00
ಎಐಐಇಎ, ಉಡುಪಿ ಸಂಗಾತಿಗಳು	2000-00
ನಾಗೇಶ್‌ಕುಮಾರ್ ಕೆ.	400-00
ಸುಕೇಶ್‌ಕುಮಾರ್ ಹೈದ್ರಾಬಾದ್	1000-00
ನವೀನ್ ಕುಮಾರ್ ಪಿ ಲಾಲ್, ಹೈದ್ರಾಬಾದ್	250-00
ಕೆ.ಕೃಷ್ಣಶೆಟ್ಟಿಗಾರ್, ಹೊಸಂಗಡಿ, ಮಂಜೇಶ್ವರ	500-00
ಬಾಲಕೃಷ್ಣ ಮಾಸ್ಕಲ್	500-00
ಸುರೇಶ್ ಮಂಜೇಶ್ವರ ಹೊಸಂಗಡಿ	100-00
ನವೀನ್ ಮಂಜೇಶ್ವರ ಹೊಸಂಗಡಿ	100.00
ದಿನಕರ, ಮಯ್ಯ	50.00
ಚಂದ್ರಹಾಸ್ ಕೆ.ಮಂಗಳೂರ	500-00
ಪದ್ಮನಾಭ,ಕೋಟ್ಯಾನ	200-00
ವಿಠಲಪೂಜಾರಿ, ಅಡ್ವಕೇಟ್	1000-00
ಜಯನಗರ, ಶಾಂತಿನಗರ, ಚಾ.ಪೇಟ ಪ್ರದೇಶ ಸಮಿತಿಯ ಸಭೆಯಲ್ಲಿ	113
ವಿನೋಭಾನಗರ ಘಟಕ ಸಭೆಯಲ್ಲಿ	60
ವಿನಾಯಕನಗರ ಘಟಕ ಸಭೆಯಲ್ಲಿ	40
ವಿನಾಯಕ ನಗರ ಪ್ರದೇಶದಲ್ಲಿ ಸಾಮೂಹಿಕವಾಗಿ	687-25
ವರದರಾಜ್, ಹುಲಿದುರ್ಗ ಉಪಾಧ್ಯಕ್ಷರುರವರಿಂದ ಸಂಗ್ರಹ	100
ಒಟ್ಟು ಸಂಗ್ರಹ	67,344-75

ಈ ವಾರ....

ಅಡ್ವಾಣಿಯವರ ಹತಾಶೆ ಧಾಳಿ?

ಭಾರತೀಯ ಪೆಟ್ರೋಲ್ ಪಂಪ್ ಪಾರ್ಟಿಯೆಂದೇ ಖ್ಯಾತಗೊಳುತ್ತಿರುವ ಬಿಜೆಪಿಯ ದಕ್ಷಿಣ ಭಾರತದ ರಾಜ್ಯಗಳ ಪದಾಧಿಕಾರಿಗಳ ಎರಡು ದಿನಗಳ ಸಭೆಯೊಂದನ್ನು ಬೆಂಗಳೂರಿನಲ್ಲಿ 'ಅದ್ದೂರಿಯಾಗಿ' ನಡೆಸಿತು.

ಪೆಟ್ರೋಲ್ ಪಂಪ್ ಹಗರಣದಲ್ಲಿ ಸಿಕ್ಕಿಹಾಕಿಕೊಂಡು ತಪ್ಪಿಸಿಕೊಳ್ಳಲಾಗದೇ ಬಿಜೆಪಿ ನಾಯಕಗಣ ಏದುಸಿರು ಬಿಡುತ್ತಿರುವಾಗಲೇ ಪತ್ರಕರ್ತ ಶಿವಾನಿ ಕೊಲೆಯಲ್ಲಿ ಕೇಂದ್ರ ಸಚಿವ ಪ್ರಮೋದ್ ಮಹಾಜನ್ ಭಾಗಿಯಾಗಿರುವುದು ಬಯಲಿಗೆ ಬಂತು. ರಾಜಿನಾಮೆ ಕೊಡಬೇಕಿಲ್ಲವೆಂದು ಆತನಿಗೆ ಪ್ರಧಾನಿಯಾದಿಯಾಗಿ ಬೆಂಬಲಕ್ಕೆ ನಿಂತು ಹೇಸಿಗೆ ಹುಟ್ಟಿಸಿದ್ದಾರೆ. ಸ್ವಚ್ಛ ಪಕ್ಷದ ದೇಶಪ್ರೇಮಿ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯ ನಾಯ್ಡು ಆಂಧ್ರದಲ್ಲಿ ಭೂಮಿ ನುಂಗಿದ್ದು ಹೊರಬಿತ್ತು. ಇಂತಹ ಹಗರಣಗಳ ಸರದಾರರಿಗೆ ಜನ ಛಿಮಾರಿ ಹಾಕುತ್ತಿರುವಾಗ ಮುಖ ಉಳಿಸಿಕೊಳ್ಳಲು ಬೆಂಗಳೂರಿನ ಸಭೆ ಒಂದು ನೆಪವಾಗಿ ಬಳಸಲು ಯತ್ನಿಸಿದುರ ಫಲ. ಅದಕ್ಕಾಗಿ ಹವಾಲ ಹಗರಣ, ಅಯೋಧ್ಯಾಕಾಂಡದ ಕಳಂಕಿತ ನಾಯಕ ಉಪಪ್ರಧಾನಿ ಎಲ್.ಕೆ.ಅಡ್ವಾಣಿಯವರೇ ಕಸರತ್ತು ನಡೆಸಿದ್ದು ಗಮನಾರ್ಹ. ವಿರೋಧ ಪಕ್ಷಗಳು ತಮ್ಮ ಪಕ್ಷದ ಬೆಳವಣಿಗೆ(!) ಸಹಿಸದೇ ಅಪಪ್ರಚಾರದಲ್ಲಿ ತೊಡಗಿದ್ದು, ಅದನ್ನು ತಡೆಯಲು 'ವಾಗ್ದಾಳಿ' ನಡೆಸಬೇಕೆಂದು ಕಾರ್ಯಕರ್ತರಿಗೆ ಕರೆ ನೀಡಿದರು. ದೇಶ ಉನ್ನತ ಸ್ಥಾನದಲ್ಲಿರುವ ಒಬ್ಬ ಗೃಹಸಚಿವ, ಉಪಪ್ರಧಾನಿ ತಮ್ಮ ಪಕ್ಷದ



ಮೇಲಿನ ಆರೋಪಗಳಿಗೆ ಸಮಜಾಯಿಷಿ ನೀಡುವ ಬದಲು ಇಂತಹ ಧಾಳಿ ನಡೆಸಲು ಸೂಚಿಸಿದ್ದು ಅತ್ಯಂತ ಗಂಭೀರ ವಿಷಯ. ಹತಾಶೆಯ ಸ್ಥಿತಿಯಲ್ಲಿರುವ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ, ವಿಹೆಚ್‌ಪಿ ಗಳ ಈ ವಾಗ್ದಾಳಿ ಎಂಬುದು ಕೇವಲ ಮಾತಿನದ್ದಾಗಿರಲು ಸಾಧ್ಯವೇ ಇಲ್ಲವೆಂಬುದು ದೇಶದ ಉದ್ದಗಲದಲ್ಲಿ ಕಂಡುಬರುವ ಸತ್ಯ. ಅಡ್ವಾಣಿಯವರ ಮಾತಿನ ಅರ್ಥ ದೈಹಿಕ ದಾಳಿ. ಪ್ರಜಾಪ್ರಭುತ್ವದಲ್ಲಿ ಭಿನ್ನಮತ, ವಿರೋಧಗಳನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಎದುರಿಸದೇ ಬಲಪ್ರಯೋಗಿಸಲು ಹೇಳಿದ್ದು ಅಕ್ಷಮ್ಯ ಅಪರಾಧ. ಈ ಹಿಟ್ಲರ್ ಮತ್ತು ಗೋಡ್ಸೆ ಸಂತತಿಯವರ ಭಾಷೆ ಎಲ್ಲರಿಗೂ ಅರ್ಥವಾಗುವಂತಹದು. ಈ ಚಡ್ಡಿವೀರರು ಎಷ್ಟು ಹತಾಶರಾಗಿ ದ್ದಾರೆಂಬುದನ್ನು ಇದು ತೋರಿಸುವುದಷ್ಟೆ. ಅವರು ದಕ್ಷಿಣ ಭಾರತವನ್ನು ಅದರಲ್ಲೂ ಕರ್ನಾಟಕವನ್ನು ಗುರಿಯಾಗಿಸಿದ್ದಾರೆ ಎಂಬುದು ಮುಖ್ಯ ಅಂಶ.

ದೆಹಲಿಯಲ್ಲಿ ಆಗಸ್ಟ್ 26 ರಿಂದ 28 ರವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯು ಪ್ರಸ್ತುತ ರಾಷ್ಟ್ರದ ಪರಿಸ್ಥಿತಿ ಕುರಿತು ಚರ್ಚಿಸಿ ತಾರಕಕ್ಕೇರಿರುವ ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಿಂದ ಗುಜರಾತ್ ಕೋಮುವಾದಿ ಶಕ್ತಿಗಳ ಹಿಮ್ಮೆಟ್ಟಿಸುವಿಕೆ, ಜಮ್ಮು ಮತ್ತು ಕಾಶ್ಮೀರ, ಬರ ಪರಿಸ್ಥಿತಿ, ತ್ರಿಪುರ ಮತ್ತು ಪಶ್ಚಿಮ ಬಂಗಾಳದಲ್ಲಿ ಭಯೋತ್ಪಾದಕ ಉಪಟಳ ಮತ್ತು ಇರಾಕ್ ಮೇಲೆ ಯುದ್ಧ ನಡೆಸುವ ಅಮೆರಿಕಾ ಬೆದರಿಕೆವರೆಗಿನ ಅನೇಕ ವಿಚಾರಗಳ ಕುರಿತ ಸಿಪಿಐ(ಎಂ) ನಿಲುವನ್ನು ಈ ಹೇಳಿಕೆ ಸ್ಪಷ್ಟಪಡಿಸಿದೆ.

ಎನ್‌ಡಿಎ ಸರ್ಕಾರದ ಅಸಹನೀಯ ಆಡಳಿತ

ಅನಿಯಂತ್ರಿತ ಭ್ರಷ್ಟಾಚಾರ:

ಹತ್ತು ಹಲವಾರು ಭ್ರಷ್ಟಾಚಾರದ ಹಗರಣಗಳಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸಿಲುಕಿಕೊಂಡಿದೆ. ತೆಹಲ್ಕಾ ಬಹಿರಂಗ ಪಡಿಸಿದ ರಕ್ಷಣಾ ಇಲಾಖೆಯಲ್ಲಿನ ಭ್ರಷ್ಟಾಚಾರ ಮತ್ತು ಬಿಜೆಪಿ, ಸಂಘ ಪರಿವಾರದ ಮುಖಂಡರ ಸಂಬಂಧಿಗಳಿಗೆ ಪೆಟ್ರೋಲ್ ಪಂಪ್, ಗ್ಯಾಸ್, ಸೀಮೆ ಎಣ್ಣೆ ಏಜೆನ್ಸಿ ನೀಡಿರುವ ವ್ಯವಸ್ಥಿತ ಹಗರಣ ಇಡೀ ದೇಶವನ್ನು ದಂಗುಬಡಿಸಿದೆ. ಏಜೆನ್ಸಿ ಆಯ್ಕೆ ಮಂಡಳಿಯ (ಡಿಎಸ್‌ಬಿ) ಪ್ರಕ್ರಿಯೆಗಳನ್ನೇ ದಾರಿತಪ್ಪಿಸಿ, ಬಿಜೆಪಿ ಎನ್‌ಡಿಎ ಮಿತ್ರಪಕ್ಷಗಳ ಮುಖಂಡರ ಶಿಫಾರಸುಗಳ ಮೇರೆಗೆ ಏಜೆನ್ಸಿಗಳನ್ನು ನೀಡುವ ಮೂಲಕ ಬಿಜೆಪಿ ಸ್ವಜನಪಕ್ಷಪಾತವೆಸಗಿದೆ. ನ್ಯಾಯಾಲಯದ ಪರೀಕ್ಷೆಯನ್ನು ತಮ್ಮ ಅಜ್ಞೆ ಎದುರಿಸಲಾಗದು ಎಂಬ ಅಂಶವನ್ನು ಅರಿತುಅರಿಯದಂತೆ ಫೆಬ್ರವರಿ 2000 ದಿಂದ ನೀಡಲಾದ ಎಲ್ಲಾ ಏಜೆನ್ಸಿಗಳನ್ನು ವಾಜಪೇಯಿಯವರು ರದ್ದುಪಡಿಸಿ ಆಜ್ಞೆ ಹೊರತಿಸಿದ್ದರು. ಸುಪ್ರೀಂ ಕೋರ್ಟ್ ಈ ಆಜ್ಞೆಗೆ ತಡೆ ಆಜ್ಞೆ ನೀಡಿದೆ. ಈ ಏಜೆನ್ಸಿ ನೀಡುವಿಕೆಯಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದೆ, ಸಮರ್ಪಕವಾದ ಕಾನೂನು ರೀತಿಯಲ್ಲಿ ಇಡಿ ಏಜೆನ್ಸಿಗಳನ್ನು ರದ್ದುಗೊಳಿಸಬೇಕಿದೆ, ಈ ಸರ್ಕಾರದ ಪೆಟ್ರೋಲಿಯಂ ಖಾತೆಯ ಸಚಿವರಾದ ಶ್ರೀ ರಾಂನಾಯಕ್ ರವರು ತಮ್ಮ ಜವಾಬ್ದಾರಿ ನಿರಾಕರಿಸುತ್ತಾರೆ. ಹಾಗಾಗಿ ಈಎಲ್ಲದರ ಬಗ್ಗೆ ಉನ್ನತ ಹಂತದ ತನಿಖೆ ನಡೆಯಬೇಕು ಮತ್ತು ರಾಮನಾಯಕ್ ರಾಜಿನಾಮೆ ನೀಡಬೇಕಿದೆ.

ಭೂಹಗರಣ

ಈಹಗರಣಗಳು ಸಾಲದೆಂಬಂತೆ ದೆಹಲಿಯಲ್ಲಿ ಅತ್ಯಂತ ಬೇಡಿಕೆಯುಳ್ಳ ನಿವೇಶನಗಳನ್ನು ಬಿಜೆಪಿ-ಆರೆಸ್ಸೆಸ್ ಮುಖಂಡರುಗಳಿಗೆ ನೀಡಿರುವುದು ಒಂದೆಡೆಯಾದರೆ ಮತ್ತೊಂದೆಡೆ ಬಿಜೆಪಿಯ ನೂತನ ಅಧ್ಯಕ್ಷರಾದ ವೆಂಕಯ್ಯನಾಯ್ಡು ರವರು ಆಂಧ್ರದಲ್ಲಿ ಶಾಸಕರಾಗಿದ್ದಾಗ ಅಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ್ದ ಜಮೀನನ್ನು ತಮ್ಮದಾಗಿಸಿಕೊಂಡಿದ್ದು, ಇಡೀ ಬಿಜೆಪಿ-ಆರ್‌ಎಸ್‌ಎಸ್ ಪರಿವಾರದ ವಿವಿಧ ಹಂತದಲ್ಲಿರುವ ಭ್ರಷ್ಟಾಚಾರದ ದಾಹದ ದ್ಯೋತಕವಾಗಿದೆ.

ಗುಜರಾತ್ ಬೆಳವಣಿಗೆಗಳು:

ಶೀಘ್ರ ಚುನಾವಣೆ ನಡೆಸಲು ಅಸಾಧ್ಯವೆಂಬ ಚುನಾವಣಾ ಆಯೋಗದ ತೀರ್ಮಾನವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಶಂಸಿಡೆ. ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಸಬಹುದು, ಆದರೆ ಪ್ರಸ್ತುತ ಕೂಡಲೇ ನಡೆಸಲು ಸಾಧ್ಯವಾಗದು, ಕಾರಣ ಅಲ್ಪಸಂಖ್ಯಾತರು ತಮ್ಮ ಮತಚಲಾಯಿಸುವ ಮುಕ್ತ ಪರಿಸ್ಥಿತಿ ಹಾಗೂ ವಾತಾವರಣ ಅಲ್ಲಿ ಇಲ್ಲ ಎಂದು ಆಯೋಗ ತಿಳಿಸಿದೆ. ಚುನಾವಣಾ ಆಯೋಗದ ಆಜ್ಞೆ ಕುರಿತು ರಾಷ್ಟ್ರಪತಿಗಳ ಮೂಲಕ ಸುಪ್ರೀಂಕೋರ್ಟ್ ಪರಿಶೀಲನೆಗೆ ಒಳಪಡಿಸಿರುವ ಕ್ರಮ ಆಯೋಗ ಅಧಿಕಾರವನ್ನು ಕಡೆಗಣಿಸುವ ಕ್ರಮವಾಗಿದೆ. ಈ ಹಿನ್ನೆಲೆಯಲ್ಲಿ ನರೇಂದ್ರಮೋದಿ ರವರು ಮುಖ್ಯ ಚುನಾವಣಾ ಆಯುಕ್ತರ ಬದ್ಧತೆಯನ್ನು ಅವರ ಧರ್ಮದ ಆಧಾರದಲ್ಲಿ ಟೀಕಿಸಿರುವುದು ಖಂಡನೀಯ. ಇದೇ ನರೇಂದ್ರಮೋದಿ ಪರಿಸ್ಥಿತಿಯ ದುರುಪಯೋಗ ಪಡೆಯಲು ಗೌರವಯಾತ್ರೆ ನಡೆಸಲು ಹೊರಟಿದ್ದಾರೆ. ಅಲ್ಲಿ 5 ತಿಂಗಳು ಆಗಿದ್ದರೂ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ, ನಿರಾಶ್ರಿತ ಶಿಬಿರಗಳಲ್ಲಿರುವವರು ತಮ್ಮಮನೆಗಳಿಗೆ ವಾಪಸು ತೆರಳಿಲ್ಲ. ಆದ್ದರಿಂದ ಈ ಕೂಡಲೇ ಮೋದಿ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ವಿಧಿಸಬೇಕು.

ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವಿಕೆ

ಈ ಕೂಡಲೇ ಗುಜರಾತ್‌ನಲ್ಲಿ ಚುನಾವಣೆ ನಡೆಸಬೇಕೆಂಬ ಬಿಜೆಪಿ ತೀರ್ಮಾನ. ಬಿಜೆಪಿ-ಆರ್‌ಎಸ್‌ಎಸ್ ಪರಿವಾರದ ಕೋಮುವಾದಿ ಅಜೆಂಡಾವನ್ನು ಅತ್ಯುಗ್ರವಾಗಿ ಮುಂದುವಿಸುವಒಂದು ಅಂಶವಾಗಿದೆ ಇತ್ತೀಚೆಗೆ ತನ್ನ ನೆಲೆಯನ್ನು ಒಂದರನಂತರ ಒಂದರಂತೆ ಪ್ರತಿ ಚುನಾವಣೆಗಳಲ್ಲಿಯೂ ಕಳೆದುಕೊಳ್ಳುತ್ತಿರುವ ಬಿಜೆಪಿ ಅದನ್ನು ಉಳಿಸಿಕೊಳ್ಳುವ ಯತ್ನವಾಗಿ ತನ್ನ ಸಂಪುಟವನ್ನು ಪುನರ್ರಚಿಸಿ, ಬಿಜೆಪಿ ನಾಯಕತ್ವದಲ್ಲಿ ಬದಲಾವಣೆ ತಂದಿದೆ. ಅಂತೆಯೆ ವಿಹೆಚ್‌ಪಿ ತನ್ನ ಮಾತಿನಿಂದ ಹಿಂದೆ ಸರಿದು ಅಯೋಧ್ಯಾ ವಿವಾದ ಕುರಿತು ಕೋರ್ಟ್ ತೀರ್ಪಿಗೆ ಬದ್ಧರಲ್ಲ ಎಂಬ ವಾದ ಮಂಡಿಸುತ್ತಿವೆ. ಆದರೆ ಕೋಮುವಾದಿ ಅಜೆಂಡವಾಗಲಿ ಅಥವಾ ಆರ್ಥಿಕ ನೀತಿಗಳಾಗಲಿ ಅವರಿಗೆ ಅವರು ಕಳೆದುಕೊಳ್ಳುತ್ತಿರುವ ನೆಲೆಯನ್ನು ವಾಪಸ್ಸು ನೀಡುವುದಿಲ್ಲ.

ದೇಶದ ಐಕ್ಯತೆಗೆ ಕಂಟಕವಾಗಿರುವ ಗುಜರಾತ್‌ನಲ್ಲಿ ಹರಿಬಿಡಲಾಗಿರುವ ಕೋಮುವಾದಿ ದಾಳಿಯನ್ನು ದಿಟ್ಟವಾಗಿ ಎದುರಿಸಬೇಕು.ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕಿದೆ. ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಈ ಸವಾಲನ್ನು ಐಕ್ಯತೆಯಿಂದ ಎದುರಿಸಬೇಕಿದೆ.

ಜಮ್ಮು ಮತ್ತು ಕಾಶ್ಮೀರ ಚುನಾವಣೆ:

ಜಮ್ಮುವನ್ನು ಜಮ್ಮು ಮತ್ತು ಕಾಶ್ಮೀರದಿಂದ ವಿಭಜಿಸುವ ಬಿಜೆಪಿ-ಆರೆಸ್ಸೆಸ್ ಬೇಡಿಕೆಯನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿವೆ. ಜಮ್ಮು ಮತ್ತು ಕಾಶ್ಮೀರವನ್ನು ಮೂರು ಭಾಗಗಳಾಗಿ ವಿಭಜಿಸಬೇಕೆಂಬ ಆರ್‌ಎಸ್‌ಎಸ್ ಒತ್ತಾಯ ಅಮೇರಿಕಾದ ಯೋಜನೆಗೆ ಪೂರಕವಾಗಿದೆ. ಸಾಮ್ರಾಜ್ಯಶಾಹಿ ಪಿತೂರಿಗೆ ಅಣಿನೆರಸುವ ಆರ್‌ಎಸ್‌ಎಸ್‌ಗೆ ವಿಭಜಕ ನಿಲುವು ಹಾಗೂ ಆರ್‌ಎಸ್‌ಎಸ್ ಪ್ರಾಯೋಜಿತ ರಂಗದೊಂದಿಗೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳಲು ಹೊರಟಿರುವ ಬಿಜೆಪಿಯ ಪಾತ್ರವನ್ನು ಜನತೆ ಅರಿಯಬೇಕಿದೆ.

ಶಾಂತಿಯುತ ಮತ್ತು ಮುಕ್ತ ವಾತಾವರಣದಲ್ಲಿ ಅತಿ ಹೆಚ್ಚು ಜನತೆಪಾಲ್ಗೊಳ್ಳುವಂತೆ ಜಮ್ಮು ಮತ್ತು ಕಾಶ್ಮೀರದ ಚುನಾವಣೆ ನಡೆಸುವ ಪ್ರಾಮುಖ್ಯತೆಯನ್ನು ಕೇಂದ್ರ ಸಮಿತಿ ಒತ್ತಿ ಹೇಳಿದೆ. ರಿಗ್ಗಿಂಗ್‌ನ್ನು ತಡೆಗಟ್ಟಿ ಮುಕ್ತವಾದ ವಾತಾರಣದಲ್ಲಿ ಚುನಾವಣೆ ನಡೆಸುವುದು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಆಡಳಿದ ಯಂತ್ರದ ಮುಖ್ಯ ಜವಾಬ್ದಾರಿಯಾಗಿದೆ. ಚುನಾವಣೆಯನ್ನು ವಿಫಲಗೊಳಿಸುಲ ಪಾಕ್ ಆಧಾರಿತ ಭಯೋತ್ಪಾದಕರು ನಡೆಸುವ ಹಿಂಸೆಯನ್ನು ಸಮರ್ಪಕವಾಗಿ ತಡೆಗಟ್ಟಬೇಕಿದೆ.

ಭೀಕರ ಬರ ಪರಿಸ್ಥಿತಿ

ರಾಷ್ಟ್ರದ ವಿವಿಧ ಭಾಗಗಳನ್ನು ವ್ಯಾಪಿಸಿರುವ ಭೀಕರ ಬರ ಪರಿಸ್ಥಿತಿ ಕುರಿತ ಕೇಂದ್ರ ಸಮಿತಿ ಗಂಭೀರ ಕಳಕಳಿ ವ್ಯಕ್ತಪಡಿಸಿದೆ. ಮಳೆಯ ಅಭಾವ ಈಗಾಗಲೇ ಎಣ್ಣೆ ಕಾಳು, ಬೇಳೆ ಕಾಳುಗಳು, ಭತ್ತ ಮತ್ತಿತರೆ ಮುಂಗಾರು ಬೆಳೆಗಳು ತೀವ್ರ ಹಾನಿಗೊಳಪಟ್ಟಿವೆ. ಜನತೆಗೆ ಕುಡಿಯುವ ನೀರಿನ ಹಾಗೂ ದನಕರುಗಳಿಗೆ ಮೇವಿನ ಅಭಾವ ತೀವ್ರಗೊಂಡಿದೆ. ಬಡ ವಿಭಾಗದ ರೈತರು ಹಾಗೂ ಕೃಷಿ ಕೂಲಿಕಾರರು ಸಂಕಷ್ಟಕ್ಕೆ ಒಳಪಟ್ಟಿದ್ದಾರೆ. ಕೂಲಿಕಾರರ ಉದ್ಯೋಗವಕಾಶಗಳು ಇಲ್ಲವಾಗಿವೆ.

ಪಡಿತರ ವ್ಯವಸ್ಥೆಯನ್ನು ಕೆಡವಿಹಾಕಿರುವ ಕೇಂದ್ರ ನೀತಿಗಳಿಂದಾಗಿ ಕೂಲಿಗಾಗಿ ಕಾಳು ಯೋಜನೆಗೆ ಕಳ್ಳಪೆಗೊಂಡಿದೆ. ತೊಂದರೆಗಳೊಗಾದ ಜನತೆಗೆ ಶೀಘ್ರ ಪರಿಹಾರ ಮತ್ತಷ್ಟು ಕಷ್ಟಕರವಾಗಿದೆ. ಇದುವರೆಗಿನ ಕೇಂದ್ರದ ಪ್ರತಿಕ್ರಿಯೆ ಒಟ್ಟಾರೆ ಸಮರ್ಪಕವಾಗಿಲ್ಲ, ರಾಜ್ಯ ಸರ್ಕಾರಗಳು ಪರಿಹಾರ ಕಾರ್ಯಕ್ರಮಗಳನ್ನು ಮತ್ತಷ್ಟು ತೀವ್ರಗೊಳಿಸಬೇಕು. ವ್ಯಾಪಕ ಕೂಲಿಗಾಗಿ ಕಾಳು ಯೋಜನೆ, ಬರಪೀಡಿತ ಪ್ರದೇಶಗಳಲ್ಲಿ ಉಚಿತ ಆಹಾರ ವಿತರಣೆ, ಮೇಲಿನ ಹಾಗೂ ಕುಡಿಯುವ ನೀರಿನ ಸರಬರಾಜು, ಸಣ್ಣ ರೈತರ ಸಾಲ ಮನ್ನಾ, ಸಾಲದ ಮೇಲಿನ ಬಡ್ಡಿ ಮನ್ನಾದಂತ ನೇರ ಪರಿಹಾರವನ್ನು ಕೂಡಲೇ ಸಮರ್ಪಕವಾಗಿ ಕೈಗೆತ್ತಿಕೊಳ್ಳಬೇಕು. ಎಫ್‌ಸಿಐ ಗೋಡಾನುಗಳಲ್ಲಿರುವ ಹೇರಳವಾದ ಆಹಾರ ಧಾನ್ಯಗಳನ್ನು ಬರ ಪರಿಹಾರಕ್ಕೆ ಕೂಡಲೇ ಬಳಸಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ತ್ರಿಪುರಾ-ಬಂಗಾಳ ಭಯೋತ್ಪಾದನೆ: ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ (ಎನ್‌ಎಲ್‌ಎಫ್‌ಟಿ) ಹಾಗೂ ಇತರೆ ತ್ರಿಪುರಾದ ಭಯೋತ್ಪಾದಕ ಗುಂಪುಗಳು ನಡೆಸಿರುವ ಅಮಾನುಷ ಧಾಳಿಗಳು ಖಂಡನೀಯ. ತ್ರಿಪುರಾ ರಾಜ್ಯ ರೈಫಲ್ ದಳದ 20 ಯೋಧರನ್ನು ಕೊಂದದ್ದು ಇತ್ತೀಚಿನ ಧಾಳಿಯಾಗಿದೆ. ಬುಡಕಟ್ಟು ಜನಾಂಗದ ಮುಖಂಡರು ಹಾಗೂ ಸಿಪಿಐ(ಎಂ) ಮುಖಂಡರನ್ನು ಕೊಲೆಗೈಯುವುದಕ್ಕೆ ಎನ್‌ಎಲ್‌ಎಫ್ ಟಿ ಗಂಭೀರ ಪ್ರಯತ್ನ ನಡೆಸಿದೆ. ಮುಂಬರುವ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿರಿಸಿ ಈ ಯತ್ನದಲ್ಲಿ ಅದು ತೊಡಗಿದೆ.

ಕಾಂಗ್ರೆಸ್ ಪಕ್ಷವು ನಿಷೇದಿತ ಎನ್ ಎಲ್‌ಎಫ್‌ಟಿಯ ರಂಗವಾದ ಇಂಡಿಜಿನಿಯಸ್ ನ್ಯಾಷನಲಿಸ್ಟ್ ಪಾರ್ಟಿ ಆಫ್ ತ್ರಿಪುರಾ (ಐಎನ್‌ಪಿಟಿ) ದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವುದನ್ನು ಕೇಂದ್ರ ಸಮಿತಿ ವಿರೋಧಿಸಿದೆ. ಐಎನ್‌ಪಿಡಿಯ ಅಧ್ಯಕ್ಷರಾದ ಬಿಜಯ್ ಕುಮಾರ್ ರಾಂಗ್‌ಕ್ವಾಲ್ ಇತ್ತೀಚೆಗೆ ಜಿನಿವಾ ದಲ್ಲಿ ಎನ್‌ಎಲ್‌ಎಫ್‌ಟಿಯ ಪ್ರತ್ಯೇಕತಾವಾದ ಮತ್ತು ಅದರ ಭಯೋತ್ಪಾದ ಚಟುವಟಿಕೆಗಳನ್ನು ಬೆಂಬಲಿಸಿ ಭಾಷಣ

ಪುಟ 8 ಕ್ಕೆ

ಬಿಜೆಪಿ ದುಷ್ಟ ಆಡಳಿತದ ವಿರುದ್ಧ ಜನರ ದಾಳಿ

ಸೆಪ್ಟೆಂಬರ್ ಚಳುವಳಿಗೆ ಸಿಪಿಐ(ಎಂ) ಕರೆ

ಪ್ರಸ್ತುತ ಪರಿಸ್ಥಿತಿಯನ್ನು ವಿಮರ್ಶಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯು ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ಪ್ರಚಾರ ಹಾಗೂ ಚಳುವಳಿಯನ್ನು ಜನತೆ ಹಾಗೂ ರಾಷ್ಟ್ರವನ್ನು ಕಾಡುತ್ತಿರುವ ಕೆಳಗಿನ 6 ಪ್ರಮುಖ ವಿಷಯಗಳ ಆಧಾರದಲ್ಲಿ ಸೆಪ್ಟೆಂಬರ್ 20 ರಿಂದ 30 ರವರೆಗೆ ನಡೆಸಲು ನಿರ್ಧರಿಸಿ ಕರೆ ನೀಡಿದೆ.

ಸೆಪ್ಟೆಂಬರ್ 20 ರಂದು 'ಬರ ಪರಿಹಾರ ದಿನ' ವನ್ನಾಗಿ ಕೇಂದ್ರ ಸರ್ಕಾರದ ಕಛೇರಿಗಳು ಹಾಗೂ ಎಫ್‌ಸಿಐ ಗೋಡಾನುಗಳ ಎದುರು ಪ್ರತಿಭಟನೆ ನಡೆಸುವ ಮೂಲಕ ಆಚರಿಸಲು ಹಾಗೂ ಸೆಪ್ಟೆಂಬರ್ 30 ರಂದು ಕೊನೆಯ ದಿನ **'ತ್ರಿಪುರಾ ಸೌಹಾರ್ದ ದಿನ'** ವನ್ನಾಗಿ ಬಹಿರಂಗಸಭೆಗಳು ಹಾಗೂ ಪ್ರದರ್ಶನಗಳ ನಡೆಸಲು ಕರೆ ನೀಡಿದೆ.

20 ರಿಂದ 30 ರ ನಡುವಿನ ದಿನಗಳಲ್ಲಿ ಬಹಿರಂಗಸಭೆ, ಮೆರವಣಿಗೆ, ಕರಪತ್ರ ಹಂಚುವಿಕೆ ಮೂಲಕ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.

ಪ್ರಚಾರಾಂದೋಲನದ 6 ಅಂಶಗಳು

1. *ಬಿಜೆಪಿ ನೇತೃತ್ವದ ಸರ್ಕಾರದ ಭ್ರಷ್ಟಾಚಾರದ ಪ್ರಕರಣಗಳ ಕುರಿತು ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು.*
2. *ಕೇಂದ್ರ ಸರ್ಕಾರ ಕೂಡಲೇ ಬರ ಪೀಡಿತ ಪ್ರದೇಶಗಳಲ್ಲಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.*
3. *ನರೇಂದ್ರ ಮೋದಿ ಸರ್ಕಾರ ವಜಾ ಮಾಡಿ ಗುಜರಾತ್‌ನಲ್ಲಿ ರಾಷ್ಟ್ರಪತಿ ಆಳ್ವಿಕೆ ವಿಧಿಸಿ*
4. *ಜಮ್ಮು ಮತ್ತು ಕಾಶ್ಮೀರದ ಸಮಗ್ರತೆಯ ಕಾಪಾಡಿ, ತ್ರಿಭಜಿಸುವ ಆರ್‌ಎಸ್‌ಎಸ್ ಒತ್ತಡ ವಿರೋಧಿಸಿ, ಮುಕ್ತ ಮತ್ತು ಶಾಂತಿಯುತ ಚುನಾವಣೆ ನಡೆಸಿ*
5. *ಭಯೋತ್ಪಾದಕ ಸಂಘಟನೆಗಳನ್ನು ನಿಗ್ರಹಿಸಲು ತ್ರಿಪುರಾಗೆ ಸಮರ್ಪಕ ರಕ್ಷಣಾ ಪಡೆಗಳನ್ನು ಒದಗಿಸಿ. ಕಾಂಗ್ರೆಸ್ ಮತ್ತು ಐಎನ್‌ಪಿಟಿ ಯ ನಡುವಿನ ಸಮಯಸಾಧಕ ಮೈತ್ರಿ ಬಹಿರಂಗಗೊಳಿಸಿ*
6. *ಇರಾಕ್ ಮೇಲೆ ಮಿಲಿಟರಿ ದಾಳಿ ನಡೆಸುವ ಅಮೇರಿಕಾ ಯೋಜನೆ ವಿರೋಧಿಸಿ ವಾಜಪೇಯಿ ಸರ್ಕಾರ ದೃಢವಾಗಿ ಇರಾಕ್ ಮೇಲಿನ ಯುದ್ಧವನ್ನು ವಿರೋಧಿಸಬೇಕು.*

ಸೆಪ್ಟೆಂಬರ್ 2 ಸಂಕಟಗಳ ಸರದ

ದೇಶದ ಸ್ವಾತಂತ್ರ್ಯ ಮತ್ತು ಕೃಷಿಕ್ರಾಂತಿಯನ್ನು ಗುರಿಯಾಗಿಟ್ಟುಕೊಂಡು 1936 ರಲ್ಲಿ ಸ್ವಾಮಿ ... ಅಖಿಲ ಭಾರತ ಕಿಸಾನ್ ಸಭೆಯು ಸೆಪ್ಟೆಂಬರ್ 1 'ರೈತರ ದಿನ'ವನ್ನಾಗಿ ಆಚರಿಸಲು ಕರೆ ... ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘವು ಸೆಪ್ಟೆಂಬರ್ 2 ರಂದು (ಈ ಸಲ ಸೆಪ್ಟೆಂಬ... ದಿನ' ಆಚರಿಸಲು ನಿರ್ಧರಿಸಿ ಂದು ಬೆಂಗಳೂರಿನಲ್ಲಿ ರೈತರ ಬೃಹತ್ ರ್‍ಯಾಲಿಯನ್ನು ಏರ್ಪಡಿಸಿ... ಲಂಚಿತರಾದ ರೈತರ ಪ್ರಮುಖ ಬೇಡಿಕೆಗಳನ್ನು ಇಲ್ಲಿ ಚರ್ಚಿ...

ನಿತ್ಯಾನಂದಸ್ವಾಮಿ

ವೀರಪ್ಪನ್ ಮತ್ತೆ ವಕ್ಕರಿಸಿದ್ದಾನೆ! ಇನ್ನು ಕೆಲಕಾಲ ನಮ್ಮ ರಾಜ್ಯದಲ್ಲಿ ಸರ್ಕಾರ ಇರುವುದಿಲ್ಲ. ಮುಖ್ಯ ಮಂತ್ರಿಗಳ ಧರ್ಮದರ್ಶನ ಇರುವುದಿಲ್ಲ. ಮಂತ್ರಿಗಳು ಯಾರಿಗೂ ಸಿಗುವುದಿಲ್ಲ. ಹೀಗೇಕೆ ಅಂತೀರಾ. ಅವರೆಲ್ಲರೂ ಈಗ ತುಂಬಾ ಬ್ಯುಸಿ. ಸಂಧಾನಕಾರನನ್ನು ಹುಡುಕಬೇಕು. ಹಣದ ಚೀಲಗಳನ್ನು ಸಜ್ಜಾಗಿಡಬೇಕು. ಕಾಡಿನಿಂದ ಬರುವ ಸಂದೇಶಕ್ಕಾಗಿ ಕಾಯಬೇಕು. ವೀರಪ್ಪನ್ ವಿಧಿಸುವ ಷರತ್ತುಗಳನ್ನು ಜಾರಿಗೆ ತರಬೇಕು. ಅನಂತರ ಮಾಜಿ ಸಚಿವ ನಾಗಪ್ಪನನ್ನು ಬಿಡಿಸಿಕೊಂಡು ತರಬೇಕು! ಎಷ್ಟು ಕೆಲಸ! ಏನು ಕಥೆ? ಜನ ಮತ ನೀಡಿ ಚುನಾಯಿಸಿದ ಸರ್ಕಾರಕ್ಕೆ, ಟ್ಯಾಕ್ಸ್ ಕಟ್ಟಿ ಬೆಳೆಸಿದ ಸರ್ಕಾರಕ್ಕೆ ಕೆಲಸ ಮಾಡಲು ಬಿಡಬಾರದೆ?


ಈ ಹಿಂದೆ ಡಾ. ರಾಜಕುಮಾರ್ ಅಪಹರಣ ಪ್ರಕರಣ ಇತ್ಯರ್ಥವಾಗಲು 108 ದಿನಗಳು ಬೇಕಾದವು. ಈ ಸಲ ವಿರೋಧ ಪಕ್ಷದ ಮಾಜಿ ಶಾಸಕರೊಬ್ಬರನ್ನು ಬಿಡಿಸಿಕೊಂಡು ಬರಲು ಸರ್ಕಾರಕ್ಕೆ ಎಷ್ಟು ದಿನಗಳು ಬೇಕಾಗಬಹುದು ಎಂಬುದನ್ನು ನಿಖರವಾಗಿ ಹೇಳಲು ಯಾರಾದರೂ ಜ್ಯೋತಿಷ್ಯರು ಮುಂದೆಬರಬೇಕು. ಆದರೆ ನಮ್ಮ ಎಸ್.ಎಂ.ಕೃಷ್ಣರವರ ಹೈಟೆಕ್ ಸರ್ಕಾರಕ್ಕೆ ಒಳ್ಳೆಯ ಒಂದು ನೆಪ ಸಿಕ್ಕಂತಾಯಿತಲ್ಲ ಎಂದು ಉತ್ತರ ಕರ್ನಾಟಕದ ರೈತರು ಗೊಣಗುಟ್ಟಲಾರಂಭಿಸಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಕುಸಿದು, ಸಾಲಮಾಡಿ ಹಾಕಿದ ಬಂಡವಾಳ ಹಿಂತಿರುಗದಂತಾಗಿ, ಸಾಲ ಕೊಟ್ಟ ಲೇವಾದೇವಿಗಾರರ ಹಾಗೂ ಬ್ಯಾಂಕುಗಳ ಕಾಟ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ರೈತರತ್ತ ತಿರುಗಿ ನೋಡದ ಈ ಸರ್ಕಾರಕ್ಕೆ ಈಗ ಒಳ್ಳೆಯ ನೆಪ ಸಿಕ್ಕಂತಾಗಿದೆ. ಬರದ ಬವಣೆಯಿಂದ ರೈತರು, ಕೂಲಿಕಾರರು ಕಂಗಾಲಾಗಿದ್ದರೂ ಸರ್ಕಾರಕ್ಕೆ ಈಗ ಬರಗಾಲ ಕಾಮಗಾರಿ ಆರಂಭಿಸಲಿಕ್ಕಾಗಲಿ, ಬರಗಾಲ ಪರಿಹಾರಕ್ಕೆ ಶಾಶ್ವತ ಕ್ರಮಗಳನ್ನು ಕೈಗೊಳ್ಳುವ ಕುರಿತಾಗಲಿ ಯೋಚನೆ ಮಾಡಲು ಸಹ ಪುರ್ಸೊತ್ತಿಲ್ಲ. "ಮಂತ್ರಿಮಂಡಲದ ಸಭೆ ನಡೆಯುತ್ತಿದೆ, ಪ್ರವೇಶ ಇಲ್ಲ" ಎಂಬ ಬೋರ್ಡನ್ನು ಟಿ.ವಿ ಚಾನಲ್ಲುಗಳಲ್ಲಿ ಮತ್ತೆ ಮತ್ತೆ ತೋರಿಸಲಾಗುತ್ತಿದೆ.

ಇಡೀ ಅಫಘಾನಿಸ್ತಾನವನ್ನು ಪುಡಿ ಪುಡಿ ಮಾಡಿದ ಬಳಿಕವೂ ಬಿನ್ ಲಾಡೆನ್‌ನನ್ನು ಹಿಡಿಯಲು ಅಮೇರಿಕಕ್ಕೆ ಸಾಧ್ಯವಾಗದಿರುವುದನ್ನು ನಾವು ನೋಡಿದ್ದೇವೆ. ಬಿನ್ ಲಾಡೆನ್‌ನನ್ನು ಹಿಡಿಯುವುದಕ್ಕಿಂತಲೂ ಆ ದೇಶದಲ್ಲಿ ನೆಲೆಯೂರುವುದು ಅಮೇರಿಕದ ಪ್ರಮುಖ ಉದ್ದೇಶವಾಗಿತ್ತು ಎಂಬುದು ಈಗ ವಿಶ್ವಕ್ಕೆ ತಿಳಿದಂತಾಗಿದೆ. ಆದರೆ ವೀರಪ್ಪನ್ ಎಂಬ ಕಾಡುಗಳ್ಳನನ್ನು ಹಿಡಿಯಲು ಎರಡು ರಾಜ್ಯ ಸರ್ಕಾರಗಳಿಗೆ ಸಾಧ್ಯವಾಗದಿರುವುದು ಅನೇಕ ಸಂದೇಹಗಳಿಗೆ ಕಾರಣವಾಗುತ್ತದೆ. ಇಷ್ಟು ದಿನ ಕಾಡುಗಳ್ಳನಾಗಿದ್ದ ಆತ ಈಗ ನಾಡುಗಳ್ಳನಾಗುತ್ತಿದ್ದಾನೆ. ಒಬ್ಬರ ಹಿಂದೆ ಒಬ್ಬರನ್ನು ಅಪಹರಿಸಿ ಅವರ ಬಿಡುಗಡೆಗೆ ಕೋಟಿಗಟ್ಟಲೆ ಹಣ ಪಡೆಯುವುದು ಆತ ಆರಂಭಿಸಿರುವ ಹಗಲುದರೋಡೆ. ಈತನಿಂದ ಲಾಭ ಪಡೆಯುವವರು ತಮಿಳುನಾಡಿನ ಮಂತ್ರಿಮಂಡಲದಲ್ಲಿರುತ್ತಾರೆ. ಕರ್ನಾಟಕದ ವಿಧಾನಸಭೆಯಲ್ಲಿರುತ್ತಾರೆ. ತೋರಿಕೆಗೆ ಆತ ಸರ್ಕಾರಗಳನ್ನು ಬೆದರಿಸುತ್ತಾನೆ. ಸರ್ಕಾರಗಳು, ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿರುವ ಜನತೆಯ ಗಮನವನ್ನು ತುಂಬಾ ಸರಳವಾಗಿ ಬೇರೆ ಕಡೆಗೆ ತಿರುಗಿಸಲು ಈ ಅಪಹರಣದ ಪ್ರಕರಣಗಳನ್ನು ಬಳಸಿಕೊಳ್ಳುತ್ತಿವೆ.


ರಾಜಧಾನಿಯಲ್ಲಿ ಘರ್ಜಿಸಿದ ರೈತರು

ಆದರೆ, ನಮ್ಮ ರಾಜ್ಯದ ಜನತೆ ಅಷ್ಟು ಸುಲಭವಾಗಿ ಮೋಸ ಹೋಗುತ್ತಾರೆ ಎಂದು ರಾಜ್ಯ ಸರ್ಕಾರ ಭಾವಿಸಬಾರದು. ನಮ್ಮ ರೈತರು ಮುಗ್ದರು ಹೌದು. ಆದರೆ, ನಮ್ಮ ಸರ್ಕಾರಗಳ ನೀತಿಗಳಿಂದ ಅವರು ಪಾಠ ಕಲಿಯುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಓಟುಕೊಟ್ಟು ಗೆಲ್ಲಿಸಿದ ರೈತರೂ ದಿವಾಳಿಯಾಗಿದ್ದಾರೆ. ಕೇಂದ್ರದಲ್ಲಿ ಇಂದು ಅಧಿಕಾರದಲ್ಲಿರುವ ಬಿಜೆಪಿ ಪಕ್ಷವನ್ನು ಬೆಂಬಲಿಸುತ್ತಾ ಬಂದಿರುವ ರೈತರೂ ಆಘಾತಕ್ಕೆ ಒಳಗಾಗಿದ್ದಾರೆ. ಬೆಲೆ ಕುಸಿತದಿಂದ ಕಂಗೆಟ್ಟ ನಮ್ಮ ಅಡಿಕೆ ಬೆಳೆಗಾರರು, ತೆಂಗು ಬೆಳೆಗಾರರು, ಸತ್ತಿ ಬೆಳೆಗಾರರು, ಶೇಂಗಾ ಬೆಳೆಗಾರರು, ಭತ್ತ ಬೆಳೆಗಾರರು, ಈರುಳ್ಳಿ ಬೆಳೆಗಾರರು, ಕಾಫಿ ಬೆಳೆಗಾರರು ಈ ಹಿಂದೆ ಎಂದೂ ಇಷ್ಟೊಂದು ಬಿಕ್ಕಟ್ಟನ್ನು ಅನುಭವಿಸಿರಲಿಲ್ಲ. ಈ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯೇ ಕಾರಣ ಎಂದು ನಮ್ಮ ರೈತರು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. WTO ನಿರ್ದೇಶಿತ ಮುಕ್ತ ಆಮದು ನೀತಿಯನ್ನು ಹಿಂದಿನ ಕಾಂಗ್ರೆಸ್ ಸರ್ಕಾರವೇ ಜಾರಿಗೆ ತಂದಿತ್ತು ಎಂದು ಹೇಳಿ ವಾಜಪೇಯಿ ಸರ್ಕಾರ ಕೈತೊಳೆದುಕೊಳ್ಳಲು ಪ್ರಯತ್ನಪಡುತ್ತಿದೆ. ಹಿಂದಿನ ಕಾಂಗ್ರೆಸ್‌ಸರ್ಕಾರ ಮಾಡಿದ ತಪ್ಪನ್ನು ನೀನೂ ಮಾಡುವುದಾದರೆ ನೀನ್ಯಾಕೆ ಕುರ್ಚಿಯ ಮೇಲೆ ಕುಳಿತಿರಬೇಕು ಎಂದು ಕೃಷಿಯ ಬಗ್ಗೆ ಕನಿಷ್ಠ ಕಾಳಜಿಯೂ ಇಲ್ಲದ ವಾಜಪೇಯಿ ಅವರನ್ನು ರೈತರು ಪ್ರಶ್ನಿಸಲಾರಂಭಿಸಿರುವುದು ಇತ್ತೀಚೆಗೆ ನಡೆದ ಚುನಾವಣೆ - ಉಪಚುನಾವಣೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ.

ಉದಾರೀಕರಣದ ನೀತಿಗಳಿಗೆ ಶರಣಾಗಿ ದೇಶದ ಸ್ವಾತಂತ್ರ್ಯ ಸಾರ್ವಭೌಮತೆಯನ್ನು ಒತ್ತೆಯಿಟ್ಟ ಕಾಂಗ್ರೆಸ್ ಪಕ್ಷಕ್ಕೆ ದೇಶದ ಪ್ರಜ್ಞಾವಂತ ಮತದಾರರು ಸರಿಯಾಗಿ ಶಿಕ್ಷಿಸಿದ್ದರೂ ಭಂಡ ಕಾಂಗ್ರೆಸ್ ಅದರಿಂದ ಪಾಠ ಕಲಿಯಲಿಲ್ಲ. ಕೇಂದ್ರದಲ್ಲಿ ಅದು ಅಧಿಕಾರ ಕಳೆದುಕೊಂಡಿರುವಾಗಲೂ ಬಿ.ಜೆ.ಪಿಗೆ ಬೇರೊಂದು ಬದಲಿ ಜನರ ಕಣ್ಣ ಮುಂದೆ ಗೋಚರಿಸದಿದ್ದಾಗ ಕೆಲವು ರಾಜ್ಯಗಳಲ್ಲಿ ಜನ ಕಾಂಗ್ರೆಸನ್ನು ಆಯ್ಕೆ ಮಾಡಿಕೊಂಡಿರಬಹುದು. ಆದರೆ ಕರ್ನಾಟಕವೂ ಸೇರಿದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವ ಎಲ್ಲಾ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಸರ್ಕಾರಗಳು ಅವರ ಹಳೆಯ ಹಳಸಿದ ನೀತಿಗಳನ್ನೇ ಜಾರಿಗೊಳಿಸುವ ಮೂಲಕ ಜನತೆಯ ಮೇಲೆ ಸಂಕಷ್ಟಗಳನ್ನು ಹೇರುತ್ತಿವೆ. ಕಾಂಗ್ರೆಸ್‌ನ್ನು ಬೆಂಬಲಿಸಿದವರಾಗಲಿ, ಬಿ.ಜೆ.ಪಿಯನ್ನು ಬೆಂಬಲಿಸಿದವರಾಗಲಿ, ಸಂಕಷ್ಟಗಳಿಗೆ ಹೊರತಾಗಿಲ್ಲ. ರಾಜ್ಯದ ಮೂಲೆ ಮೂಲೆಗಳಲ್ಲಿ ಇಂದು ಹೊರ ಹೊಮ್ಮುತ್ತಿರುವ ಜನ ಚಳುವಳಿಗಳಿಂದ ಇದು ಸಾಬೀತಾಗುತ್ತದೆ . ರೈತರು ಮತ್ತು ಇತರ ಜನ ವಿಭಾಗಗಳು ಪಕ್ಷಾತೀತವಾಗಿ ಇಂದು ಚಳುವಳಿಗಳಲ್ಲಿ ದುಮುಕುತ್ತಿವೆ. ತಮ್ಮ ಪಕ್ಷ ರಾಜಕೀಯವನ್ನು ಪಕ್ಕಕ್ಕೆ ಇಟ್ಟು ಇಂದು ರೈತರು ಮತ್ತಿತರ ಗ್ರಾಮೀಣ ಜನ "ಕೃಷಿ ರಕ್ಷಿಸಿ, ರೈತರನ್ನು ಉಳಿಸಿ" ಎಂದು ಕೂಗುತ್ತಾ ಬೆಂಗಳೂರಿಗೆ ದಾವಿಸುತ್ತಿದ್ದಾರೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ.



ಹೋಗುವುದಾದರೂ ಎಲ್ಲಿಗೆ?

ಭೀಕರ ಬರ

ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಕಂಡರಿಯದ ಬರಗಾಲ ನಮ್ಮ ರಾಜ್ಯವನ್ನು ಆವರಿಸಿದೆ. ಮುಂಗಾರು ಬೆಳೆ ಸಂಪೂರ್ಣ ನಾಶವಾಗಿ ರೈತರ ಮನೆಗಳಲ್ಲಿ ಆಹಾರ ದಾನ್ಯಗಳಿಲ್ಲ. ನ್ಯಾಯಬೆಲೆ ಅಂಗಡಿಗಳ ಎದುರು ಚೀಲ ಹಿಡಿದು ನಿಂತರೈತರ ಸಾಲು ಸಾಲು! ಅನ್ನ ನೀಡುವ ಕೈಗಳು ಅನ್ನಕ್ಕಾಗಿ ಕೈಯೊಡ್ಡಬೇಕಾಗಿದೆ.!! ರೈತರ ಪರಿಸ್ಥಿತಿಯೇ ಹೀಗಿರುವಾಗ ಕೂಲಿಕಾರ ಕುಟುಂಬಗಳ ಪರಿಸ್ಥಿತಿ ಏನಾಗಿರಬಹುದು?

ಇದಕ್ಕೂ ಕ್ರೂರವಾದ ಇನ್ನೊಂದು ಪರಿಸ್ಥಿತಿ ಇದೆ. ದೇಶದ ಹಲವು ರಾಜ್ಯಗಳಲ್ಲಿ ಈ ಸಲ ತೀವ್ರ ಬರಗಾಲ ಇರುವಾಗಲೂ ಭಾರತ ಸರ್ಕಾರದ ಆಹಾರ ನಿಗಮದ ಗೋದಾಮುಗಳಲ್ಲಿ ಲಕ್ಷಗಟ್ಟಲೆ ಟನ್ ಆಹಾರ ದಾನ್ಯ ಕೊಳೆಯುತ್ತಿದೆ. ಹೆಗ್ಗಣಗಳ ಪಾಲಾಗುತ್ತಿದೆ. ನಮ್ಮ ದೇಶದಲ್ಲಿ ಹೆಗ್ಗಣಗಳನ್ನು ಪೂಜಿಸುವ ಜನರು ಸಹ ಸರ್ಕಾರಿ ಗೋದಾಮುಗಳಲ್ಲಿ ಸಂಗ್ರಹಿಸಿಡಲಾದ ಆಹಾರ ದಾನ್ಯಗಳನ್ನು ಇಲಿಗಳು ತಿಂದು ಹಾಕುವುದನ್ನು ಬೆಂಬಲಿಸಲಾರರು. ಇದೆಂಥಹ ನೀತಿ. ಜನ ಹೊಟ್ಟೆಗಿಲ್ಲದೆ ಉಪವಾಸ ಸಾಯುತ್ತಿರುವಾಗ, ಸರ್ಕಾರ ಸಾರ್ವಜನಿಕ ಹಣದಿಂದ ಸಂಗ್ರಹಿಸಿದ ಆಹಾರದಾನ್ಯಗಳನ್ನು ವ್ಯರ್ಥವಾಗಿ ಹಾಳು ಮಾಡುತ್ತಿರುವುದು ಕ್ರೌರ್ಯವಲ್ಲದೆ ಮತ್ತೇನು?

ಬರ ಒಂದು ರಾಷ್ಟ್ರೀಯ ಅನಾಹುತ ಇಂತಹ ಅನಾಹುತವನ್ನು ಎದುರಿಸಲು ಸಾಕಷ್ಟು ಹಣವನ್ನು ತೆಗೆದಿಡಲಾಗಿರುತ್ತದೆ. ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕೆಂಬ ಮಾತಿದೆ. ಆದರೆ ಸರ್ಕಾರಿ ಯಂತ್ರ ಅಷ್ಟೊಂದು ವೇಗವಾಗಿ ಚಲಿಸುವುದಿಲ್ಲವಲ್ಲ, ಕರ್ನಾಟಕದ ಬರ ಪರಿಸ್ಥಿತಿಯನ್ನು ಅಂದಾಜು ಮಾಡಲು ಕೇಂದ್ರದ ತಂಡ ಇನ್ನೂ ಬರಲಿಲ್ಲ. ಆ ತಂಡ ಬಂದು, ಪರಿಶೀಲನೆ ಮಾಡಿ, ವರದಿಕೊಟ್ಟು, ಕೇಂದ್ರದಿಂದ ನೆರವು ಬರುವಷ್ಟರಲ್ಲಿ ಆಗಬಾರದ ಅನಾಹುತ ಆಗಿಬಿಟ್ಟಿರುತ್ತದೆ. ರೈತರ ಭೂಮಿ ಸಾಲಕೊಟ್ಟವನ ಹೆಸರಿಗೆ ಬರೆಯಲ್ಪಟ್ಟಿರುತ್ತದೆ. ರೈತರ ದನಕರುಗಳು ಕಟುಕರ ಪಾಲಾಗಿರುತ್ತವೆ. ಗುಳೆ ಹೋದ ಕೃಷಿಕೂಲಿಕಾರರ ಮಕ್ಕಳು ನಗರಗಳ ಬಸ್ ನಿಲ್ದಾಣಗಳಲ್ಲಿ ಬಿಕ್ಷೆ ಬೇಡುತ್ತಿರುತ್ತಾರೆ. ಅಧಿಕೃತ ವರದಿಗಾಗಿ ಕಾಯುವ ಕೇಂದ್ರಸರ್ಕಾರ, ಕೇಂದ್ರದ ನೆರವಿಗಾಗಿ ಕಾಯುವ ರಾಜ್ಯ ಸರ್ಕಾರದ ದೋರಣೆಗಳಿಂದಾಗಿ ಬರ ನಾಡಿನ ಜನತೆಯ ಮೇಲೆ ಎರಗಿದ ಶಾಪವಾಗುತ್ತದೆ.



ವಾಜಪೇಯಿ ಸರ್ಕಾರವು ಪಡಿತರ ದರಗಳನ್ನು ಹಲವು ಬಾರಿ ಏರಿಸುವ ಮೂಲಕ ಬಡವರ ತುತ್ತು ಕೂಳನ್ನು ಸಹ ಕಿತ್ತುಕೊಂಡಿತು. ಈಗ ಬಹುತೇಕ ರಾಜ್ಯಗಳಲ್ಲಿ ಬರ ಆವರಿಸಿಕೊಂಡಿರುವುದು ಗೊತ್ತಿದ್ದು ಕೇಂದ್ರ ಸರ್ಕಾರ ಅಂಗೈ ಹುಣ್ಣಿಗೆ ಕನ್ನಡಿ ಹುಡುಕುತ್ತಿದೆ. 'ಕೂಲಿಗಾಗಿ ಕಾಳು' ಯೋಜನೆಗಾಗಿ ಆಹಾರ ದಾನ್ಯಗಳನ್ನು ಬಿಡುಗಡೆ ಮಾಡಲು ಇಷ್ಟೊಂದು ಮೀನಮೇಷ ಯಾಕೆ? ಬರಗಾಲದಿಂದ ಜನ ಸಾಯುತ್ತಿದ್ದರೂ ಕೇಂದ್ರ ಸರ್ಕಾರಕ್ಕೆ ವಿಶ್ವಬ್ಯಾಂಕಿನ ಆದೇಶ ಜಾರಿ ಮಾಡುವ ಬಗ್ಗೆ ಚಿಂತೆ. ಪಡಿತರ ಕಾರ್ಡುಗಳನ್ನು ಕಡಿತ ಮಾಡಲು ಆದೇಶ ನೀಡಿ ಅದನ್ನು ಜನರ ಕಣ್ಣಿನಿಂದ ಮರೆ


...ರ ಹುಡುಕಿ ಬಂದರು ರೈತರು

...ದರ ನೇತೃತ್ವದಲ್ಲಿ ಹುಟ್ಟಿಕೊಂಡ ...ಖಿಲ ಭಾರತ ಕಿಸಾನ್ ಸಭಾ ...ವಾರ ಆಗಿರುವುದರಿಂದ) 'ರೈತರ ... ಹಾಗೂ ರಾಜ್ಯ ಸರ್ಕಾರಗಳಿಂದ

...ಲು 'ಅಂತ್ಯೋದಯ'ದ ನಾಟಕ ...ದ್ದಾರೆ. ಎಲ್ಲರನ್ನ ಎಲ್ಲ ಕಾಲಕ್ಕೂ ಮೋಸ ...ಲು ಸಾಧ್ಯವಿಲ್ಲ. ವಾಜಪೇಯಿಯವರೆ! ...ಜ್ಯದಲ್ಲಿ ಬರಗಾಲ ಕಾಮಗಾರಿ ...ರ್ಗಿಯೂ ವ್ಯಾಪಕವಾಗಿಯೂ ...ವಾಗಬೇಕಾಗಿದೆ. ಮಾಜಿ ಸಚಿವ ...ನವರು ಕಾಡಿನಿಂದ ವಾಪಸ್ ಬರುವವರೆಗೆ ...ಲು ಸಾಧ್ಯವಿಲ್ಲ. ಕೇಂದ್ರದಿಂದ ನೆರವು ...ಲ್ಲ ಎಂಬ ಕಾರಣಕ್ಕಾಗಿ ರಾಜ್ಯ ಸರ್ಕಾರಕ್ಕೆ ...ಹುತಿ ನೀಡಲಾಗುವುದಿಲ್ಲ. ತುರ್ತುಬರ ...ರ ಕಾಮಗಾರಿ ಆರಂಭವಾಗಬೇಕು. ...ಿಂದು ಗ್ರಾಮ ಪಂಚಾಯತಿಯಲ್ಲಿ ...ರರ ಮತ್ತು ಬಡರೈತರ ಪಟ್ಟಿ ಮಾಡಿ, ... ಕೆಲಸ ಒದಗಿಸಬೇಕು. ಕಾಮಗಾರಿಗಳಲ್ಲಿ ...ಾರಕ್ಕೆ ಅವಕಾಶವಾಗದಂತೆ ಕಟ್ಟುನಿಟ್ಟಿನ ...ಜರುಗಿಸಬೇಕು. ರೈತರ, ಕೂಲಿಕಾರರ ...ನೆಗಳನ್ನು ಹಾಗೂ ಎಲ್ಲಾ ರಾಜಕೀಯ ... ಪ್ರತಿನಿಧಿಗಳನ್ನು ಒಳಗೊಂಡ ಉಸ್ತುವಾರಿ ...ಳನ್ನು ರಚಿಸಿ ಅವುಗಳ ಮೇಲ್ವಿಚಾರಣೆಯಲ್ಲಿ ... ಪರಿಹಾರ ಕಾಮಗಾರಿಗಳು ...ನಡೆಯುವಂತಾಗಬೇಕು. ಈ ಬಾರಿಯ ...ಬರದ ತೀವ್ರತೆಯನ್ನು ಗಣನೆಗೆ ...ತೆಗೆದುಕೊಂಡು ರೈತರ ಸಾಲ ಮನ್ನಾ ...ಮಾಡಬೇಕು, ನಾಶವಾದ ಎಲ್ಲಾ ...ಬೆಳೆಗಳಿಗೂ ವಿಮಾ ಪರಿಹಾರ ...ಒದಗಿಸಬೇಕು, ವಿಮಾ ಪರಿಹಾರವನ್ನು ...ರೈತರ ಸಾಲಕ್ಕೆ ವಜಾ ಮಾಡದೆ ನಗದು ...ರೂಪದಲ್ಲಿ ರೈತರಿಗೆ ಪಾವತಿ ಮಾಡಬೇಕು. ...ರಾಜ್ಯದ ಎಲ್ಲಾ ಬಡವರಿಗೆ, ಹಳ್ಳಿ ಮತ್ತು ...ಪಟ್ಟಣವೆಂಬ ಬೇದ ಮಾಡದೆ ಹಳದಿ ...ಪಡಿತರ ಕಾರ್ಡುಗಳನ್ನು ವಿತರಣೆ ...ಬೇಕು. ಸೆಪ್ಟೆಂಬರ್ 2 'ವಿಧಾನಸೌಧ ...' ಚಳುವಳಿಯಲ್ಲಿ ಈ ಬೇಡಿಕೆಗಳು ...ನಿಸಲಿದ್ದು ಎಸ್.ಎಂ.ಕೃಷ್ಣ ಸರ್ಕಾರ ...ಗೆ ಸ್ಪಂಧಿಸಲು ಮುಂದೆ ಬರಬೇಕು.

...ತ್ ಸಮಸ್ಯೆ

...ರ್ಕಾರದ ವಿದ್ಯುತ್ ನೀತಿಯನ್ನು ...: ವಿದ್ಯುತ್ ಬಳಕೆದಾರರು ಕಳೆದ ...ರಡು ವರ್ಷಗಳಿಂದ ತೀವ್ರವಾಗಿ ...ಧಿಸುತ್ತಿದ್ದಾರೆ. ಅಗ್ಗದ ಹಾಗೂ ಒಳ್ಳೆಯ ...ಗುಣಮಟ್ಟದ ವಿದ್ಯುತ್‌ನ್ನು ಸಾಕಷ್ಟು ...ಣದಲ್ಲಿ ಒದಗಿಸುವ ಬದಲು ರಾಜ್ಯ ...ರವು ವಿಶ್ವಬ್ಯಾಂಕನ್ನು ತೃಪ್ತಿಪಡಿಸುವ ...ಾಗಿ ವಿದ್ಯುತ್ ದರಗಳನ್ನು ಏರಿಸಲು, ... ನೀರಾವರಿ ಪಂಪ್‌ಸೆಟ್‌ಗಳಿಗೆ ...ರ್ ಅಳವಡಿಸಲು, ವಿದ್ಯುತ್ ...ಣೆಯನ್ನು ಖಾಸಗೀಕರಣಗೊಳಿಸಲು ...ಿದೆ. ಅಗ್ಗದ ವಿಧಾನಗಳಿಂದ ವಿದ್ಯುತ್ ...ದನೆ ಆದ್ಯತೆ ನೀಡುವ ಬದಲು ...ೋರ ಖಾಸಗೀ ವಿದ್ಯುತ್ ಉತ್ಪಾದನಾ ...ಗಳನ್ನು ಅವಲಂಭಿಸಲು ಹೊರಟಿದೆ. ...ಷ್ಟವು ಮೇಲಿಂದ ಮೇಲೆ ಬರಗಾಲಕ್ಕೆ



ಹಗಲಿರುಳು ದುಡಿದರೂ ಬೆಲೆಯಿಲ್ಲ ಫಸಲಿಗೆ

ತುತ್ತಾಗುತ್ತಿದ್ದಾಗ್ಯೂ ಬರವನ್ನು ಎದುರಿಸಲು ಕೈಗೊಳ್ಳಬೇಕಾದ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಸರ್ಕಾರಗಳು ನೀಡಬೇಕಾದ ಆಧ್ಯತೆಯನ್ನು ನೀಡಲಿಲ್ಲ. ಕೃಷ್ಣಾ ಹಾಗೂ ಕಾವೇರಿ ನದಿ ಕೊಳ್ಳಗಳ ಅನೇಕ ನೀರಾವರಿ ಯೋಜನೆಗಳು ಇಂದಿಗೂ ಕಾರ್ಯಗತವಾಗದೆ ಉಳಿದಿವೆ. ಒಣ ಬೇಸಾಯ ಪ್ರದೇಶಗಳ ಅಭಿವೃದ್ಧಿಗೆ ಕಾರ್ಯಕ್ರಮವಿಲ್ಲ. ಮಳೆ ನೀರನ್ನು ಸಂಗ್ರಹಿಸಿಡುವ ವ್ಯವಸ್ಥೆಗೆ ಯೋಜನೆಯಿಲ್ಲ. ಕಷ್ಟಪಟ್ಟು ಸಾಲ ಮಾಡಿ ಕೊಳವೆ ಬಾವಿ ತೋಡಿಸಿಕೊಂಡ ಪಂಪ್‌ಸೆಟ್ ರೈತರಿಗೆ ವಿದ್ಯುತ್ ಪೂರೈಸಲಾಗುತ್ತಿಲ್ಲ. ಸಾವಿರಾರು ರೂ ಖರ್ಚುಮಾಡಿ ಕೊಳವೆ ಬಾವಿ ತೋಡಿಸಿಕೊಂಡ ರೈತರಿಗೆ, ವರ್ಷಗಟ್ಟಲೆ ಕಾದಿದ್ದರೂ ವಿದ್ಯುತ್ ಸಂಪರ್ಕ ಪಡೆದುಕೊಂಡ ರೈತನನ್ನು ಕಳುವಿನ ಆರೋಪ ಹೊರಿಸಿ ಜೈಲಿಗೆ ಕಳುಹಿಸಲು ಕಾನೂನು ಮಾಡಿದ್ದಾರೆ. ಎಸ್.ಎಂ.ಕೃಷ್ಣ ಸರ್ಕಾರ ರೈತರ ಫಸಲಿಗೆ ಯೋಗ್ಯ ಬೆಲೆ ನೀಡಲಾಗದ ಸರ್ಕಾರ, ಸರಿಯಾಗಿ ವಿದ್ಯುತ್ ಪೂರೈಕೆ ಮಾಡದೆ ರೈತರ ಬೆಳೆಹಾನಿಗೆ ಕಾರಣವಾದ ಸರ್ಕಾರ, ರೈತರ ನೀರಾವರಿ ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸಲು ಮುಂದಾಗಿದೆ. ವಿದ್ಯುತ್ ವಿತರಣೆಯನ್ನು 4 ಕಂಪನಿಗಳಿಗೆ ವಹಿಸಿಕೊಟ್ಟು ರೈತರ ಪಂಪ್‌ಸೆಟ್‌ಗಳಿಗೆ ಬಲವಂತವಾಗಿ ಮೀಟರ್ ಅಳವಡಿಸಲು ಬಂದಾಗ ಅದನ್ನು ವಿರೋಧಿಸಿದ ರೈತರ ಮೇಲೆ ಸುಳ್ಳು ಕೇಸುಗಳನ್ನು ದಾಖಲು ಮಾಡಲಾಗುತ್ತದೆ. ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ನೂರಾರು ರೈತರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಜೈಲಿಗೆ ತಳ್ಳಿದ ಪ್ರಕರಣವೂ ನಡೆದಿದೆ. ರೈತರ ವ್ಯಾಪಕ ವಿರೋಧದ ಬಳಿಕವೂ ಗ್ರಾಮೀಣ ಫೀಡರ್‌ಗಳಿಂದ ವಿದ್ಯುತ್ ಪಡೆಯುವ ಪಂಪ್‌ಸೆಟ್ ರೈತರಿಗೆ ಹೆಚ್.ಪಿ.ಗೆ ವಾರ್ಷಿಕ ರೂ 720, ನಗರ ಪ್ರದೇಶದ ಫೀಡರ್‌ಗಳಿಂದ ವಿದ್ಯುತ್ ಪಡೆಯುವ ಪಂಪ್‌ಸೆಟ್ ರೈತರಿಗೆ ರೂ.1200 ಮತ್ತು ಸರ್ಕಾರಿ ನೌಕರಿಯಲ್ಲಿದ್ದು 2ಕ್ಕಿಂತ ಹೆಚ್ಚು ಪಂಪ್‌ಸೆಟ್ ಹೊಂದಿರುವ ರೈತರಿಗೆ ರೂ.1500 ದರಗಳನ್ನು ನಿಗದಿಮಾಡಲಾಗಿದೆ. ರೂ.720 ಪಾವತಿ ಮಾಡಬೇಕಾದ ರೈತರಿಗೆ ಕೇವಲ ರೂ 180ರ ರಿಯಾಯ್ತಿ ನೀಡಿ ಪಂಪ್‌ಸೆಟ್ ರೈತರಿಗೆಲ್ಲಾ ರಿಯಾಯ್ತಿ ನೀಡಲಾಗಿದೆ ಎಂದು ಸುಳ್ಳು ಪ್ರಚಾರ ಮಾಡಲಾಗುತ್ತಿದೆ. ಕಾಂಗ್ರೆಸ್ಸಿಗೆ ಬೆಂಬಲ ನೀಡುತ್ತಾ ಬಂದಿರುವ ರೈತರಾದರೂ ಈ ದರ ಏರಿಕೆಯ ದಾಳಿಯನ್ನು ಹೇಗೆ ಸಹಿಸಿಕೊಂಡಾರು? ಗೃಹ ಬಳಕೆಯ ದರಗಳನ್ನು ಸಹ ಸಿಕ್ಕಾಪಟ್ಟೆ ಏರಿಸಲಾಗಿದೆ. ಬಡ ಭಾಗ್ಯಜ್ಯೋತಿ ಫಲಾನುಭವಿಗಳಿಗೆ ದರಗಳನ್ನು 3 ಪಟ್ಟು ಹೆಚ್ಚಿಸಲಾಗಿದೆ ಪಂಪ್‌ಸೆಟ್ ರೈತರ ಅಸಂಬದ್ಧ, ಆಧಾರರಹಿತ, ಹಳೆಯ ಬಾಕಿಗಳನ್ನು ಮನ್ನ ಮಾಡಲು ಒಪ್ಪದ ಕೃಷ್ಣ ಸರ್ಕಾರ ಸಚಿವ ಎಂ.ವೈ ಘೋರ್ಪಡೆಯವರ ವಿದ್ಯುತ್‌ಬಾಕಿ ಮೇಲಿನ 46.59 ಕೋಟಿ ರೂ. ಬಡ್ಡಿಯನ್ನು ಮನ್ನ ಮಾಡಿದೆ! ಬರಗಾಲದ ಈ ದಿನಗಳಲ್ಲಿ ಪರಿಹಾರ ಕ್ರಮಗಳಿಗಾಗಿ ದೊರೆಯುವ ಕೋಟಿಗಟ್ಟಲೆ ರೂಪಾಯಿಗಳನ್ನು ತಿಂದು ಹಾಕುವುದನ್ನು ಬಿಟ್ಟು, ಅದರಲ್ಲಿ ಒಂದು ಭಾಗವನ್ನು ರೈತರ ಸಾಲ ಹಾಗೂ ವಿದ್ಯುತ್ ಬಾಕಿಗಳನ್ನು ಮನ್ನಾ ಮಾಡಲು ಏಕೆ ಬಳಸಿಕೊಳ್ಳಬಾರದು?



ಬರದ ಬೇಗುದಿಗೆ ಗುಳೇ ಹೊರಟ ರೈತರು

ರೇಷ್ಮೆ ಬೆಳೆಗಾರರ ಬಿಕ್ಕಟ್ಟು

ರೇಷ್ಮೆ ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನದಲ್ಲಿದೆ. ಸುಮಾರು 15,000 ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿದ್ದರೆ ಅದರಲ್ಲಿ ಶೇಕಡಾ 65ರಷ್ಟು ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತದೆ. ರೇಷ್ಮೆ ವ್ಯವಸಾಯ ರಾಜ್ಯದ ಲಕ್ಷಾಂತರ ರೈತರ ಹಾಗೂ ಕೂಲಿಕಾರರ ಜೀವನಾಧಾರವಾಗಿದೆ.

ವಾಜಪೇಯಿ ಸರ್ಕಾರದ ಮುಕ್ತ ಆಮದು ನೀತಿಯ ಫಲವಾಗಿ ರೇಷ್ಮೆ ಆಮದಿನ ಮೇಲೆ ಇದ್ದ ನಿಯಂತ್ರಣವನ್ನೂ ಕಳಚಿ ಹಾಕಲಾಗಿದೆ. ಆಮದು ಸುಂಕವನ್ನು ಇಳಿಸಲಾಗಿದೆ. ಕಳ್ಳ ಸಾಗಾಣಿಕೆಯನ್ನು ತಡೆಯಲು ಕ್ರಮಗಳಿಲ್ಲ. ಇವುಗಳ ಪರಿಣಾಮವಾಗಿ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಪ್ರಮಾಣದಷ್ಟು ರೇಷ್ಮೆ ಹೊರಗಿನಿಂದ ಬಂದು ನಮ್ಮ ರೇಷ್ಮೆ ಗೂಡುಗಳ ತೀವ್ರ ಬೆಲೆ ಕುಸಿತಕ್ಕೆ ಕಾರಣವಾಗುತ್ತಿದೆ. ಒಂದು ಕೆ.ಜಿ ರೇಷ್ಮೆ ಗೂಡಿನ ಬೆಲೆ ರೂ.160-170 ರಿಂದ ರೂ 70-80ಕ್ಕೆ ಇಳಿದರೆ ರೇಷ್ಮೆ ಕೃಷಿಕನ ಗತಿ ಏನಾಗಬಹುದು?

ರಾಜ್ಯದ ರೇಷ್ಮೆ ಕೃಷಿಕರು ದಿವಾಳಿಯಾಗುತ್ತಿರುವುದನ್ನು ಗಮನಿಸಿದಾಗಲೂ ರಾಜ್ಯ ಸರ್ಕಾರ ಅವರ ನೆರವಿಗೆ ಧಾವಿಸಲಿಲ್ಲ. ರೇಷ್ಮೆ ಗೂಡಿಗೆ ನ್ಯಾಯವಾದ ಬೆಂಬಲ ಬೆಲೆ (ಕನಿಷ್ಠ ಕೆ.ಜಿ.ಗೆ ರೂ.160-00) ನಿಗದಿ ಮಾಡಲು ಮುಂದಾಗಲಿಲ್ಲ. ರೇಷ್ಮೆ ಕೃಷಿಕರಿಗೆ ಸಬ್ಸಿಡಿಗಳನ್ನು ಹೆಚ್ಚಿಸಿ ಪ್ರೋತ್ಸಾಹಿಸಲಿಲ್ಲ. ರೇಷ್ಮೆ ಕೃಷಿಯಲ್ಲಿ ವಿಶೇಷ ಸಂಶೋಧನೆ ನಡೆಸಿ ರೈತರಿಗೆ ಅದರ ಲಾಭ ದೊರಕಿಸಲು ಸರ್ಕಾರದ ಬಳಿ ಯಾವುದೇ ಕಾರ್ಯಕ್ರಮ ಇಲ್ಲ. ರೇಷ್ಮೆ ಕೃಷಿ ಕರ್ನಾಟಕದ ಹೆಮ್ಮೆಯ ವಿಷಯ ಎಂಬುದನ್ನಾದರೂ ಸರ್ಕಾರ ಮರೆಯಬಾರದು.

ಹಾಲು ಉತ್ಪಾದಕರ ಗೋಳು:

ರಾಜ್ಯದ ಲಕ್ಷಾಂತರ ರೈತರಿಗೆ, ಕೂಲಿಕಾರರಿಗೆ ಹಾಲು ಉತ್ಪಾದನೆ ಜೀವನಾಧಾರವಾಗಿದೆ. ಕೋಲಾರ, ಬೆಂಗಳೂರು ಮೊದಲಾದ ಜಿಲ್ಲೆಗಳಲ್ಲಿ ಸಣ್ಣ ಮತ್ತು ಮಧ್ಯಮ ರೈತರು ದೊಡ್ಡ ಸಂಖ್ಯೆಯಲ್ಲಿ ಹಾಲು ಉತ್ಪಾದನೆಯಲ್ಲಿ ತೊಡಗಿದ್ದಾರೆ. ರಾಜ್ಯದ ಹೈನುಗಾರಿಕೆಯ ಬೆಳವಣಿಗೆಯಲ್ಲಿ ಸಹಕಾರಿ ಚಳುವಳಿ ಪ್ರಮುಖ ಪಾತ್ರವನ್ನೂ ನಿರ್ವಹಿಸುತ್ತಿದೆ. ಸುಮಾರು 16 ಲಕ್ಷ ಶೇರುದಾರರಿರುವ 9 ಸಾವಿರ ಹಾಲು ಉತ್ಪಾದಕ ಪ್ರಾಥಮಿಕ ಸಂಘಗಳು, 13 ಒಕ್ಕೂಟಗಳು ರಾಜ್ಯ ಮಹಾಮಂಡಲದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿವೆ.

ಆದರೆ ರೈತರ ಈ ಸಾಧನೆಯು ಬಗ್ಗೆ ವಾಜಪೇಯಿ ಸರ್ಕಾರಕ್ಕೆ ಹೊಟ್ಟೆಕಿಚ್ಚು ಉಂಟಾದಂತೆ ಕಾಣುತ್ತದೆ. ಹೈನುಗಾರಿಕೆಯ ಕ್ಷೇತ್ರಕ್ಕೆ ಬಂಡವಾಳಿಗರನ್ನು ಆಹ್ವಾನಿಸುವ ಮೂಲಕ ರೈತರನ್ನು ಇಲ್ಲಿಂದ ಹೊರದಬ್ಬುವ ಕ್ರಮವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. 'ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶವನ್ನು ತಿದ್ದುಪಡಿ ಮಾಡಿ ಯಾವುದೇ ಗ್ರಾಮದಲ್ಲಿ ಯಾರೇ ಆಗಲಿ ನೋಂದಾವಣೆಯಿಲ್ಲದೆ ಡೈರಿಗಳನ್ನು ಆರಂಭಿಸಬಹುದು, ಎಲ್ಲಿ ಬೇಕಾದರೂ ಹಾಲು ಮಾರಾಟ ಮಾಡಬಹುದು ಎಂದು ನಿರ್ಧರಿಸಿದೆ. ಇದರ ಪರಿಣಾಮವಾಗಿ ಲಾಭಕೋರ ಕಂಪನಿಗಳು (ವಿದೇಶಿ ಕಂಪನಿಗಳು ಸಹ) ಗ್ರಾಮೀಣ ಉದ್ಯೋಗದ ಈ ಕ್ಷೇತ್ರಕ್ಕೆ ನುಗ್ಗಿ, ಸಹಕಾರಿ ಕ್ಷೇತ್ರವನ್ನು ನಾಶ ಮಾಡಿ, ಹಾಲು ಉತ್ಪಾದಕರಿಗೂ, ಗ್ರಾಹಕರಿಗೂ ಮೋಸ ಮಾಡಲು ಹಾಗೂ ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಅಸಂಖ್ಯಾತ ನೌಕರರನ್ನು ಬೀದಿ ಪಾಲು ಮಾಡಲು ಅವಕಾಶ ಮಾಡಿಕೊಟ್ಟಂತಾಗುವುದು. ರಾಜ್ಯದ ಹಿತ ಕಾಪಾಡಲು ರಾಜ್ಯ ಸರ್ಕಾರವು ಸಮರ್ಥವಾಗಿ ಮಧ್ಯಪ್ರವೇಶ ಮಾಡಬೇಕಾದದ್ದು ಅದರ ಕರ್ತವ್ಯವಾಗಿದೆ.

ಹೀಗೆ ರಾಜ್ಯದ ಜನತೆ, ಮುಖ್ಯವಾಗಿ ರೈತರು, ಕೂಲಿಕಾರರು, ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರು, ರೇಷ್ಮೆ ಕೃಷಿಕರು, ಹಾಲು ಉತ್ಪಾದಕರು ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರರು ಒಟ್ಟಾಗಿ ಬೆಂಗಳೂರಿನಲ್ಲಿ ಬಾರೀ ಪ್ರದರ್ಶನ ನಡೆಸಲು ಸಜ್ಜಾಗಿದ್ದಾರೆ. ಅವರಲ್ಲಿ ಇಂದು ಪಕ್ಷ ಪಂಗಡಗಳ ಬೇದವಿಲ್ಲ. ಬಣ್ಣ ಭಾಷೆಗಳ ಬೇದವಿಲ್ಲ. ರಾಜ್ಯ ಸರ್ಕಾರದ ನಿರ್ಲಕ್ಷ್ಯ ದೋರಣೆ, ಕೇಂದ್ರ ಸರ್ಕಾರದ ರೈತ ವಿರೋಧಿ ದೋರಣೆ ಅವರೆಲ್ಲರನ್ನು ಒಂದುಗೂಡಿಸಿದೆ. ರಾಜ್ಯದ ಹಿತದೃಷ್ಟಿಯಿಂದ ರಾಜ್ಯ ಸರ್ಕಾರವು ಈ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲು ಸಿದ್ಧವಾಗಬೇಕು. ಸ್ಥಳೀಯವಾಗಿ ಚುನಾಯಿತ ಪ್ರತಿನಿಧಿಗಳು ಕಾಣೆಯಾಗಿದ್ದಾರೆ. ಮಂತ್ರಿಗಳು ನಾಪತ್ತೆ! ವೀರಪ್ಪನ್ ಪ್ರತ್ಯಕ್ಷನಾಗಿರುವುದರಿಂದ ಇವರೆಲ್ಲರೂ ಬೆಂಗಳೂರಿಗೆ ಪಾದ ಬೆಳೆಸಿದ್ದಾರೆ ಎಂಬ ಸುದ್ದಿ ದಟ್ಟವಾಗಿದೆ. ಇವರೆಲ್ಲರೂ ಪರಸ್ಪರ ಮಾತನಾಡಿಕೊಂಡೇ ಹೊರಟಿರುವುದು ನೋಡಿದರೆ ದೊಡ್ಡದೊಂದು 'ವ್ಯಾಪಾರ' ಕುದುರುವಂತಿದೆ. ಬೆಣ್ಣೆಟ್ಟ ಬರಲಿದ್ದಾರೆ ಜೋಕೆ!

ಬರದ ಭೀಕರತೆ ಹೆಚ್ಚಿ ಹಲವು ತಿಂಗಳುಗಳೇ ಕಳೆದು ಸಂಕಷ್ಟದಲ್ಲಿ ಸಿಲುಕಿ ಜನ ತತ್ತರಿಸುತ್ತಿದ್ದರೂ, ಸರ್ಕಾರ 'ಪರಿಹಾರ'ದ ಘೋಷಣೆಯಾಗಿಯೇ ಉಳಿದಿದೆ. ಇದೂ ಸಾಲದೆಂದು ಕೇಂದ್ರದ 'ಅಧ್ಯಯನ ತಂಡ'ಗಳು ರಾಜ್ಯಕ್ಕೆ ಭೇಟಿ ನೀಡಿ ವ್ಯರ್ಥ ಕಾಲಹರಣ ಮಾಡುತ್ತಿವೆ. ಇಂತಹ ತಂಡಗಳ ಭೇಟಿ ಎಷ್ಟೊಂದು ನಿಷ್ಕಾಳಜಿಯ ನಾಟಕ ಎಂಬುದನ್ನು ಕಳೆದ ಅನುಭವಗಳಿಂದ ವ್ಯಕ್ತವಾಗುತ್ತದೆ. ಈಸಲದ ತಂಡಗಳ ಭೇಟಿ ಇದಕ್ಕಿಂತ ಭಿನ್ನ ಇದ್ದೀತೆ?

ಬರ ಅಧ್ಯಯನ ತಂಡಗಳೆಂಬ ವಂಚಕರ ಕಾಲಹರಣ

ಮುದ್ದಪ್ಪ ಬಂಡಿ
ದೇವದುರ್ಗ

ಕರ್ನಾಟಕ ರಾಜ್ಯದಲ್ಲಿ ಹೋದ ವರ್ಷ ಅಂದರೆ 2001ರಲ್ಲಿ ಮಳೆಯಾಗದೇ ತೀವ್ರ ಬರಗಾಲವನ್ನು ರೈತ ಅನುಭವಿಸಿ ತೀವ್ರ ಸಂಕಷ್ಟದಲ್ಲಿ ಇರುವಾಗಲೇ 2002ರ ಚೈತ್ರ ಬಾನು ಸಂವತ್ಸರದಲ್ಲಿ ಚೆನ್ನಾಗಿ ಮಳೆಯಾಗಬಹುದು ಎಂಬ ನಿರೀಕ್ಷೆಯಲ್ಲಿದ್ದ ರೈತರಿಗೆ 2002ರ ಈ ವರ್ಷದ ಮುಂಗಾರು ಮಳೆ ಸಂಪೂರ್ಣ ಕೈ ಕೊಟ್ಟಿದ್ದು ರೈತರೆಲ್ಲಾ ಕಂಗಾಲಾಗಿದ್ದಾರೆ.

ಶಾಪ ಹಾಕಿದ ರೈತರು

ಸಾಮಾನ್ಯವಾಗಿ ಬರಗಾಲ ಬಂದಾಗಲೊಮ್ಮೆ ಕೇಂದ್ರ ಸರಕಾರವಾಗಲಿ ರಾಜ್ಯ ಸರಕಾರವಾಗಲಿ ವಿಭಾಗವಾರು ಬರಗಾಲ ತಂಡಗಳನ್ನು ರಚಿಸಿ ಆಯಾಯ ಪ್ರದೇಶಗಳ ಜನರ ಸಮಸ್ಯೆಗಳನ್ನು ಆಲಿಸಿ ಒಂದು ವರದಿ ಕೊಡಿ ಎಂದು ತಿಳಿಸುತ್ತಾರೆ. ಅದರಂತೆ 1998ರಲ್ಲಿಯೂ ಹೈದ್ರಾಬಾದ್ ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಗುಲಬರ್ಗಾ, ರಾಯಚೂರು, ಬೀದರ್ ಈ ಜಿಲ್ಲೆಗಳಲ್ಲಿ ಭಾರಿ ಮಳೆಯಿಂದ ರೈತರ ಹೊಲಗಳಲ್ಲಿ ನೀರು ನಿಂತು ಬೆಳೆ ನಾಶವಾದರೆ, ಇನ್ನೊಂದು ಕಡೆ ಮನೆಗಳು ಕುಸಿದು ಬಿದ್ದುದಲ್ಲದೆ ದನಕರುಗಳು ಹಳ್ಳ ಕೊಳ್ಳಗಳಿಗೆ ಕೊಚ್ಚಿ ಹೋದವು. ಸಾವಿರಾರು ಕುರಿಗಳು ಆಡುಗಳು ಯಾವುದೋ ರೋಗಕ್ಕೆ ಬಲಿಯಾದವು. ಇದನ್ನರಿಯಲು ಕೇಂದ್ರ ಅಧ್ಯಯನ ತಂಡವೊಂದು 1998ರ ಅಕ್ಟೋಬರ್ ತಿಂಗಳಲ್ಲಿ ದೇವದುರ್ಗ ತಾಲೂಕಿನ ಕೆಲವು ಹಳ್ಳಿಗಳಿಗೆ ಭೇಟಿ ನೀಡಿದ ಕೇಂದ್ರ ತಂಡದಲ್ಲಿ ಕನ್ನಡ ಬಾಷೆ ಬಲ್ಲವರು ಯಾರು ಇರಲಿಲ್ಲ ಜಾಲಹಳ್ಳಿ ಐಬಿ ಹತ್ತಿರ ಬಂದಾಗ ಜಾಲಹಳ್ಳಿ ಹೋಬಳಿಯ ಸುತ್ತಮುತ್ತಲ ಹಳ್ಳಿಯ ರೈತರೆಲ್ಲಾ ಬಂದಿದ್ದಾರೆ. ತಂಡದ ಪರವಾಗಿ ಆಗಿನ ತಹಶೀಲ್ದಾರರು ರೈತರನ್ನು ಕೇಳಿದರು ತಮ್ಮ ತಮ್ಮ ನೋವುಗಳನ್ನು ಹೇಳುತ್ತಾ ಮುಕ್ಕನಾಳದ ಒಬ್ಬ ರೈತ ನನ್ನ 50 ಕುರಿಗಳಲ್ಲಿ 40 ಕುರಿಗಳು ಸತ್ತು 10 ಕುರಿಗಳು ಮಾತ್ರ ಉಳಿದಿವೆ ಸರ ಎಂದ ಇನ್ನೊಬ್ಬ ರೈತ, ಒಂದು ಎತ್ತು ಹಳ್ಳಕ್ಕೆ ಹರಿದುಕೊಂಡು ಹೋಯಿತು ಸರ ಅಂದ ಇನ್ನೊಬ್ಬ, ರೈತ ನಮ್ಮ ದನಕರುಗಳಿಗೆ ರೋಗ ಬಂದರೆ ಪಶು ಆಸ್ಪತ್ರೆಗಳಲ್ಲಿ ಸರಿಯಾಗಿ ನೋಡುವುದಿಲ್ಲ ಸರ ಅಂದ. ಕೇಂದ್ರ ಸರಕಾರದ ಅಧಿಕಾರಿಗಳು ಬಾಯಿ ತೆರೆದು ಮಾತುಗಳನ್ನು ಆಲಿಸುತ್ತಿದ್ದರೆ ಹೊರತು ರೈತರ ಕಷ್ಟ ಅವರಿಗೆ ಗೊತ್ತಾಗಲಿಲ್ಲ ಕಾರಣ ಕನ್ನಡ ಅವರಿಗೆ ಅರ್ಥ ಆಗೋಲ್ಲ .ನಮ್ಮ ಕನ್ನಡ ಬರೋ ಅಧಿಕಾರಿಗಳು ಸಾಹೇಬ್ರಿಗೆ ನಾವೆಲ್ಲಾ ಹೇಳುತ್ತೇವೆ ನಾವು ಮುಂದೆ ಲಿಂಗಸೂರ ತಾಲೂಕಿಗೆ ಹೋಗಬೇಕು ಅಂದು ಎದ್ದು ಜೀಪುಗಳಲ್ಲಿ ಹತ್ತಿ ಹೋದರು. ರೈತರೆಲ್ಲಾ ಹುಯ್ಯ ಅಂತಾ ಗೋಳಾಡುತ್ತಾ ಏನಪ್ಪಾ ಏನು ಮಾಡುತ್ತಾರೆ ಬರುತ್ತಾರೆ ಹೋಗುತ್ತಾರೆ ನಮಗೇನು ಲಾಭ ಅನ್ನುತ್ತಾ ಬಂದ ದಾರಿಗೆ ಸುಂಕವಿಲ್ಲವೆಂದು ಗೋಳಾಡುತ್ತಾ ತಮ್ಮ ತಮ್ಮ ಹಳ್ಳಿಗಳಿಗೆ ಶಾಪ ಹಾಕುತ್ತಾ ಹೋದರು.

ಬಂತುನೋಡ್ರಿ ಅಧ್ಯಯನ ತಂಡ

ಮತ್ತೆ 2001ರಲ್ಲಿ ರಾಜ್ಯದಲ್ಲಿ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲಿ ಬೀಕರ ಬರ ಜೂನ್ ಜುಲೈ ತಿಂಗಳು ಕಳೆದರೂ ಮಳೆ ಬರಲಿಲ್ಲ ಮತ್ತೆ ರೈತ ಕಂಗಾಲಾದ ಅಲ್ಲಲ್ಲಿ ರೈತ ಸಂಘಟನೆಗಳ ಹೋರಾಟ ಬರಗಾಲ ಕಾಮಗಾರಿ ಆರಂಭ ಮಾಡಿ ದನಕರುಗಳಿಗೆ ಮೇವು ಒದಗಿಸಿ, ಕೃಷಿಕೂಲಿಕಾರರಿಗೆ ಕೆಲಸಕೊಡಿ, ಕುಡಿಯಲು ನೀರು ಕೊಡಿ ಎಂಬ ನ್ಯಾಯಯುತ ಬೇಡಿಕೆಗಳನ್ನು ಕೇಳಿದರೆ ಸರಕಾರ ಆದೇಶ ಹೊರಡಿಸಿತು. ಆಯಾ ಜಿಲ್ಲಾಧಿಕಾರಿಗಳು ಮತ್ತು ಕೇಂದ್ರ ಅಧ್ಯಯನ ತಂಡದ ಅಧಿಕಾರಿಗಳು ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಿದ ನಂತರ ಬರ ಕಾಮಗಾರಿಗಳು ಆರಂಭಿಸಲಾಗುವುದು ಎಂದು ನಮ್ಮರಾಯಚೂರು ಜಿಲ್ಲೆಯಲ್ಲಿ ತೀವ್ರ ಬರಗಾಲ ಅದರಲ್ಲಿ ದೇವದುರ್ಗ ತಾಲೂಕಾ ಹಿಂದುಳಿದ ತಾಲೂಕಾ ಒಣ ಬೇಸಾಯ ಪ್ರದೇಶ ಆಗಿನ ಜಿಲ್ಲಾಧಿಕಾರಿಯಾದಂತಹ ಜಿ:ಕುಮಾರನಾಯಕ ಜಿಲ್ಲಾ ಪಂಚಾಯತ ಕಾರ್ಯದರ್ಶಿ ದ್ಯಾಬೇರಿ ಮತ್ತು ಕೇಂದ್ರ ತಂಡದ ಅಧಿಕಾರಿಗಳನ್ನೊಳಗೊಂಡ ತಂಡವೊಂದು ಹೋದ ವರ್ಷ ಅಗಸ್ಟ್ ತಿಂಗಳಲ್ಲಿ ಭೇಟಿ ನೀಡಿತು. ಬರಗಾಲ ತಂಡ ಬರುತ್ತಿದೆ ಎಂದು ಸುದ್ದಿ ಗೊತ್ತಾದರೂ ಜನರಲ್ಲಿ ನಿರುತ್ಸಾಹ ಕಾರಣ ಯಾರು ಬಂದರೆ ನಮಗೇನು ಲಾಭ ಎಂಬ ವಿಚಾರ ತಲೆಯಲ್ಲಿ ಬೇರೂರಿತ್ತು. ಆದರೂ ಗ್ರಾಮ ಪಂಚಾಯತ ಅವರಣಕ್ಕೆ ಬರುತ್ತಾರೆ ಎಂಬ ಸುದ್ದಿ ತಿಳಿದ ಮೇಲೆ ನೂರಾರು ಜನ ಸೇರಿದರು. ಅಧ್ಯಯನ ತಂಡ ಬಂತು ವೇದಿಕೆ ಮೇಲೆ ಆಸೀನವಾಯಿತು.

ಮಾನ್ಯ ದ್ಯಾಬೇರಿ ಸಾಹೇಬ್ರು ಬಂದಂತಹ ಅಧಿಕಾರಿಗಳನ್ನು ಜನರಿಗೆ ಪರಿಚಯ ಮಾಡಿಸಿದ ನಂತರ ಸ್ವಾಮಿ ನಮಗೆ ಕುಡಿಯಲು ನೀರಿಲ್ಲ ಎಂದರು ದನಗಳಿಗೆ ಮೇವು ಇಲ್ಲ ಎಂದರು ಗೋಶಾಲೆಗಳನ್ನು ತೆರೆಯಿರಿ ಎಂದರು ಅಧಿಕಾರಿಗಳನ್ನು ನೋಡಿ ನಿಮಗೆ ಕೆಲಸ ಸಿಗಬೇಕಾದರೆ ನಿಮ್ಮ ಊರಲ್ಲಿ ಯಾವ ಯಾವ ಕೆಲಸ ತಗೊಬೇಕು ಎಂಬುದು ಹೇಳಿದರೆ ಅವುಗಳನ್ನು ಬರಗಾಲ ಕಾಮಗಾರಿಗಳಲ್ಲಿ ಕೈಗೆತ್ತಿಕೊಳ್ಳುತ್ತೇವೆ ಅಂದರು. ಸರಿ ಸ್ವಾಮಿ ಕೂಲಿನಾಲಿ ಮಾಡಿ ಬದುಕು ಸಾಗಿಸುವವರಿಗೆ ಕೆಲಸ ಸಿಗುತ್ತದೆ ಬಿಡಿ. ಆದರೆ ನಾಲ್ಕಾರು ದನಗಳನ್ನು ಕಟ್ಟಿಕೊಂಡು 2-3 ಎಕರೆ ಭೂಮಿಯನ್ನು ಕಟ್ಟುಕೊಂಡು ಸಾವು ಬದುಕಿನೊಡನೆ ಹೋರಾಟ ನಡೆಸಿರುವ ನಮಗೆ ಮೊದಲು ದನಗಳಿಗೆ ಒಣ ಮೇವು ಬೇಕು ಎಂದರು ಎಕರೆವಾರು ಪರಿಹಾರ ಕೊಡಿ ಎಂದರು. ಇದನ್ನು ಆಲಿಸಿದ ಜಿಲ್ಲಾಧಿಕಾರಿಗಳು ಮುಗುಳ್ನಗುತ್ತಾ ಎಬ್ಬಟ್ಟಿನಿಂದ ದುಡ್ಡೇ ಇಲ್ಲ ಎಂದು ಜನರಿಗೆ ತೋರಿಸುತ್ತಿದ್ದರು ಮತ್ತು ಕೇಂದ್ರ ತಂಡದಿಂದ ಬಂದಂತಹ ಅಧಿಕಾರಿ ಇಂಗ್ಲೀಷಿನಲ್ಲಿ ಏನೋ ಹೇಳಿದರು. ಮತ್ತೆ ದ್ಯಾಬೇರಿ ಸಾಹೇಬರು ಎದ್ದು ನಿಂತು ರೈತರನ್ನು ನಿಮ್ಮದನಗಳು (ಎತ್ತುಗಳು) ಸತ್ತಿದ್ದಾವೆಯೇ? ಕಸಾಯಕಾನಿಗೆ ಮಾರಾಟ ಮಾಡಿದರೆ ಅವುಗಳ ಬೆಲೆ ಎಷ್ಟು? ಎಂದು ಕೇಳಿದರು. ಒಬ್ಬ ರೈತ 16 ಸಾವಿರ ಬೆಲೆ ಬಾಳುವ ಎತ್ತುಗಳನ್ನು ಕೇವಲ 5000 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದೀವಿ ಸರ ಅಂದ. ಹಲವಾರು ರೈತರು ತಮ್ಮತಮ್ಮ ಆಕಳುಗಳು ಎತ್ತುಗಳು ಸತ್ತ ವಿಷಯ ಮತ್ತು ಕಸಾಯಖಾನೆಗೆ ಮಾರಿದ ವಿಷಯ ಮೇವಿನ ಸಮಸ್ಯೆ ಹೀಗೆ ತಮ್ಮ ಅಳಲನ್ನು ತೋಡಿಕೊಂಡರು. ಅವರಿಗೆ ಪರಿಹಾರ ಸಿಕ್ಕಿದ್ದೇನು? ಕೊನೆಗೂ ಏನೂ ಸಿಗಲಿಲ್ಲ. ಜಿಲ್ಲಾಧಿಕಾರಿಗಳು ಎದ್ದು ನಿಂತು ನೋಡಿ ತಕ್ಷಣ ನಾಳೆಯಿಂದ ನಿಮ್ಮ ಗ್ರಾಮ ಪಂಚಾಯತ ಆವರಣದಲ್ಲಿ ಮೇವು ಬಂದು ಬೀಳುತ್ತೆ ಅಂದರು. ಸರಿ ಎಂದು ರೈತರೆಲ್ಲರೂ ಖುಷಿಪಟ್ಟರು ಆದರೆ ಮೇವಿನ ಬದಲು ಕವಳೆಹುಲ್ಲು ಜಾಲಹಳ್ಳಿ ಪಂಚಾಯತ ಆವರಣದ ಮುಂದೆ ಬಂದು ಬಿತ್ತು. ಹುಲ್ಲನ್ನು ಎಮ್ಮೆಗಳ ಮುಂದೆ ದನಗಳ ಮುಂದೆ ಹಾಕಿದರೆ ಮೂಸಿ ನೋಡಿ ಹಾಗೆ ಬಿಟ್ಟವು.

ಸುಳ್ಳು ಹೇಳುವ ಅಧಿಕಾರಿಗಳು

ಕಾರಣ ದೇವದುರ್ಗ ತಾಲೂಕಾ ಒಣ ಬೇಸಾಯ ಪ್ರದೇಶವಾದರಿಂದ ಇಲ್ಲಿನ ದನಕರುಗಳು ಸಜ್ಜೆ ಸೊಪ್ಪೆ ಜೋಳದ ಸೊಪ್ಪೆ ತಿಂದು ಬದುಕಿರುವುದೇ ಹೊರತು ನೀರಾವರಿಯಲ್ಲಿ ಬೆಳೆದ ಬತ್ತದ ಹುಲ್ಲು ಅಲ್ಲ ಎಂಬುದನ್ನು ಅರಿತು ಯಾವ ತಾಲೂಕಿಗೆ ಯಾವ ಮೇವು ಕಳುಹಿಸಬೇಕು ಎಂಬುದನ್ನು ಅಧಿಕಾರಿಗಳು ಅರಿತುಕೊಳ್ಳಬೇಕು ಮತ್ತೆ ಮೇವಿನ ಆಶ್ವಾಸನೆ ಕೊಟ್ಟನಂತರ ಅಧಿಕಾರಿ ಎದ್ದು ಸರಿ ಮೇವಿನ ಸಮಸ್ಯೆ ಅಂತು ಮುಗಿಯಿತು ಇನ್ನೂ ಬರಗಾಲ ಕಾಮಗಾರಿಗಳನ್ನು ಹೇಳಿರಿ ಅಂದಾಗ ಜಾಲಹಳ್ಳಿಯ ಉತ್ತರಕ್ಕೆ ಇರುವ ಕೆರೆಯನ್ನು ಶುಚಿಗೊಳಿಸಬೇಕು ಎಂದು ಸಾರ್ವಜನಿಕರು ಹೇಳಿದರು ಹಾಗೇ ದಕ್ಷಿಣಕ್ಕೆ ತ್ಯಾಪ್ಲಿರ ಓಣೆಗೆ ಕಚ್ಚಾ ರಸ್ತೆಯಾಗಿ ಮಾರ್ಪಡಿಸಬೇಕು ಪರಾಪೂರ ಕೆರೆ ಹೂಳೆತ್ತಬೇಕು ಹೀಗೆ ರೈತರು ಬರಗಾಲ ಕಾಮಗಾರಿಗಳನ್ನು ಹೇಳಿದಾಗ ಇವರು ಮೂಡಿದ್ದಾದರೂ ಏನು ಜಾಲಹಳ್ಳಿಯಲ್ಲಿ ಯಾವುದೇ ಕಾಮಗಾರಿ ಮಾಡದೇ ಪರಾಪೂರ ಕೆರೆ ಹೂಳೆತ್ತುವುದು ಅದು ಕೇವಲ 8 ದಿನಗಳಲ್ಲಿ ಹಣವಿಲ್ಲವೆಂದು ಕೈತೊಳೆದು ಕುಳಿತರು. ಇತ್ತ ಸರಕಾರ ರಾಜ್ಯದ ಆ ತಾಲೂಕಿಗೆ ಇಷ್ಟು ಹಣ ಅಷ್ಟು ಹಣ ಬಿಡುಗಡೆ ಮಾಡಿವೆ ಎಂದು ಪತ್ರಿಕೆಯಲ್ಲಿ ಟಿ.ವಿ ನ್ಯೂಸ್‌ಗಳಲ್ಲಿ ನೋಡಿ ಸುಖಪಡಬೇಕೆ ಹೊರತು ಅಬಿವೃದ್ಧಿಯಿಂದಲ್ಲ.

ಇಂದು ಬರಗಾಲದ ನೆಪದಲ್ಲಿ ಕೋಟಿಗಟ್ಟಲೆ ಹಣ ಲೂಟಿಯಾಗುತ್ತದೆ ಆ ಕೆರೆಗೆ ಹೂಳೆತ್ತದೆ ಆ ಹಳ್ಳಿಗೆ ರಸ್ತೆ ಮಾಡಿಸಿವಿ ಎಂಬ ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿಸಿ ಹಣವನ್ನು ನುಂಗಿ ನೀರು ಕುಡಿಯುತ್ತಿದ್ದಾರೆ ಎಂದು ಜನ ಆಡಿಕೊಳ್ಳುವ ಮಾತನ್ನು ಸುಳ್ಳು ಮಾಡಬೇಕಾದರೆ ಜನರಿಂದ ಆರಿಸಿ ಹೋದ ಜನಪ್ರತಿನಿದಿಗಳು ಮತ್ತು ಅಧಿಕಾರಿಗಳು ಇಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ○

ಪ್ರಸ್ತುತಕ್ಕಿದುವೇ ಪ್ರತಿಕ್ರಿಯೆ

ಪುಟ5 ರಿಂದ

ಮಾಡಿದ್ದಾರೆ. ಬುಡಕಟ್ಟು ಮತ್ತು ಬುಡಕಟ್ಟೇತರ ಜನಾಂಗದ ಐಕ್ಯತೆಯ ಪ್ರಮುಖವಾಗಿರುವ ತ್ರಿಪುರಾ ಜನತೆಯ ಹಿತಾಸಕ್ತಿಗೆ ಕಾಂಗ್ರೆಸ್‌ನ ಈ ಹೊಂದಾಣಿಕೆ ಮಾರಕವಾಗಿದೆ ಎಂಬುದನ್ನು ಕಾಂಗ್ರೆಸ್ ನಾಯಕತ್ವ ಅರಿಯಬೇಕಿದೆ. ಸಿಪಿಐ(ಎಂ) ವಿರುದ್ಧದ ಅಪಾಯಕಾರಿ ಭಯೋತ್ಪಾದಕ ಶಕ್ತಿಗಳ ಜೊತೆಗೂ ಹೊಂದಾಣಿಕೆ ಎಂಬ ಮಟ್ಟಕ್ಕೆ ಇಳಿಯಬಾರದು. ಇಂತಹ ಸಮಯಸಾಧಕ ಹೊಂದಾಣಿಕೆಯನ್ನು ನಿರ್ದಾಕ್ಷಿಣ್ಯವಾಗಿ ಎದುರಿಸಿ ಸೋಲಿಸಬೇಕಿದೆ. ಹಾಗೂ ಬಹಿರಂಗ ಪಡಿಸಬೇಕಿದೆ. ರಾಜಕೀಯ ಚಟುವಟಿಕೆಗಳೆಂದು ಪರಿಗಣಿಸಲು ಅಸಾಧ್ಯವಾದ ಚಟುವಟಿಕೆಗಳನ್ನು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲುಜಿ) ಮತ್ತು ಕಾಮತಾಪುರಿ ವಿಮೋಚನಾ ಸಂಘಟನೆ(ಕೆಎಲ್‌ಓ) ನಡೆಸುತ್ತಿವೆ. ಅತ್ಯಾಧುನಿಕ ಅಸ್ತ್ರಗಳನ್ನು ಬಳಸಿ ಅವರು ವೈಯಕ್ತಿಕ ಕೊಲೆಗಳಲ್ಲಿ ತೊಡಗಿವೆ. ಅವರ ಪ್ರಮುಖ ಗುರಿ ಸಿಪಿಐ(ಎಂ) ಮುಖಂಡರು. ಮಿಡ್ನಾಪುರ ಪ್ರದೇಶದಲ್ಲಿ ಕಳೆದ ಚುನಾವಣೆಯಿಂದೀಚೆಗೆ ಸಿಪಿಐ(ಎಂ) ಮುಖಂಡರನ್ನು ಪಿಡಬ್ಲ್ಯುಜಿ ಕೊಂದಿದೆ. ದೂಪಗುರಿಯ ಪಕ್ಷದ ಪ್ರಾದೇಶಿಕ ಕಛೇರಿಯ ಮೇಲೆ ಇತ್ತೀಚೆಗೆ ಧಾಳಿ ನಡೆಸಿದ ಕೆಎಲ್‌ಓ ಜೈಪಲ್‌ಗುರಿಯ ಪಕ್ಷದ ಜಿಲ್ಲಾ ಸಮಿತಿ ಸದಸ್ಯರನ್ನು ಒಳಗೊಂಡಂತೆ 5 ಸಿಪಿಐ(ಎಂ) ಕಾರ್ಯಕರ್ತರನ್ನು ಕೊಂದಿದ್ದಾರೆ. ದೃಢ ಆಡಳಿತಾತ್ಮಕ ಮತ್ತು ಪೋಲೀಸ್ ಕ್ರಮಗಳನ್ನು ಇಂತಹ ಹಿಂಸಾತ್ಮಕ ಚಟುವಟಿಕೆಗಳ ಮೇಲೆ ಕೈಗೊಳ್ಳದೆ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಕ್ಕೆ ಅನ್ಯ ಮಾರ್ಗವಿಲ್ಲ.

ರಾಜಕೀಯವಾಗಿ ಜನತೆಯನ್ನು ಈ ವಿಚ್ಛಿದ್ರಕಾರಿ ಚಟುವಟಿಕೆಗಳ ಮಧ್ಯೆ ಅಣಿನೆರೆಸುವ ಮೂಲಕ ಸಿಪಿಐ(ಎಂ) ಕೂಡ ಇದನ್ನು ಎದುರಿಸಿದೆ.

ಇರಾಕ್ ಮೇಲೆ ಅಮೆರಿಕಾ ಯುದ್ಧದ ಬೆದರಿಕೆ

ಇರಾಕ್ ಮೇಲೆ ಯುದ್ಧ ನಡೆಸುವ ಹಾಗೂ ಅಲ್ಲಿನ ಸರ್ಕಾರ ಬದಲಿಸುವ ಯೋಜನೆಯು ಖಂಡನೀಯ. ತನ್ನ ಹಿತಾಸಕ್ತಿಗಾಗಿ ಎಲ್ಲೆಡೆ ತನ್ನ ಮಿಲಿಟರಿ ಶಕ್ತಿ ಬಳಸುವ ಅಪಾಯಕಾರಿ ಅಮೆರಿಕಾದ ಅವ್ಯಾಹತ ಕ್ರಮವನ್ನು 2001 ರ ಸೆಪ್ಟೆಂಬರ್ ನಂತರದ ಬೆಳವಣಿಗೆಯಾಗಿದೆ. ಇರಾಕ್ ಮೇಲಿನ ಯುದ್ಧ ಅಂತರ್ರಾಷ್ಟ್ರೀಯ ಕಾನೂನುಗಳ ಹಾಗೂ ರಾಷ್ಟ್ರದ ಸಾರ್ವಭೌಮತೆಯ ಉಲ್ಲಂಘನೆಯಾಗಿದೆ.

ಭಾರತವು ನಿಕಟ ಸಂಪರ್ಕವುಳ್ಳ ಮಿತ್ರ ರಾಷ್ಟ್ರವಾಗಿದೆ ಇರಾಕ್. ಕೊಲ್ಲಿಯಲ್ಲಿನ ಯುದ್ಧ ಭಾರತದ ಹಿತಾಸಕ್ತಿಗೆ ದಕ್ಕೆ ತರುತ್ತದೆ. ಅಲ್ಲಿನ ಭಾರತೀಯರು ವಾಪಸು ವಲಸೆ ಬರುವಂತೆ ಮಾಡುತ್ತದೆ. ವಾಜಪೇಯಿ ಸರ್ಕಾರದ ವಿದೇಶಾಂಗ ನೀತಿಯು ಸಂಪೂರ್ಣವಾಗಿ ಅಮೆರಿಕಾದ ನಿರ್ಣಾಯಕ ಹಿತಾಸಕ್ತಿಗೆ ಅನುಗುಣವಾಗಿದೆ. ಆದಕಾರಣವೇ ಇರಾಕ್ ಮೇಲಿನ ಅಮೆರಿಕಾ ಧಾಳಿಗೆ ವಿರೋಧವನ್ನು ಭಾರತ ಸ್ಪಷ್ಟಪಡಿಸಿಲ್ಲ. ಅಮೆರಿಕಾ ಯೋಜನೆಯನ್ನು ವಿರೋಧಿಸಿ ನಿರ್ದಿಷ್ಟ ನಿಲುಮೆಯನ್ನು ವಾಜಪೇಯಿ ಸರ್ಕಾರ ಕೈಗೊಳ್ಳಬೇಕು.

ಆಗಸ್ಟ್ 24, ನಮ್ಮ ನಿಮ್ಮೆಲ್ಲರ ಆತ್ಮೀಯ ಸಂಗಾತಿ ದಿವಂಗತ ಸೂರ್ಯನಾರಾಯಣರಾವ್‌ರವರ ಜನ್ಮದಿನ. ಇಂದು ಕಾಂ। ಸೂರಿ ನಮ್ಮೊಂದಿಗಿಲ್ಲ ಎಂಬ ಮಾತಿಗೆ ಅಪವಾದವಿದ್ದಂತೆ ಕಂಡು ಬಂತು ಆ ದಿನ. ಆ ಶನಿವಾರದ ಸಂಜೆ ಬೆಂಗಳೂರಿನ ಎನ್.ಜಿ.ಓ ಸಭಾಂಗಣದಲ್ಲಿ ಅವರ 79ನೇ ವರ್ಷದ ಜನ್ಮದಿನದ ಪ್ರಯುಕ್ತ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ವತಿಯಿಂದ ಏರ್ಪಡಿಸಿದ್ದ "ಸ್ಮರಣೀಯ ಸಂಜೆ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯಾರೊಬ್ಬರಲ್ಲಿಯೂ ಪ್ರಾಯಶಃ "ನಮ್ಮ ಮೆಚ್ಚಿನ, ನಮ್ಮ ಪ್ರೀತಿಯ, ಎಲ್ಲರ ಮನದಲ್ಲೂ ಆದರ್ಶಪ್ರಾಯರಾಗಿದ್ದ ಹಿರಿಯ ಸಂಗಾತಿ 'ಸೂರಿ' ಈ ಲೋಕ ತೊರೆದಿಲ್ಲ, ನಮ್ಮೊಂದಿಗೇ ಇದ್ದಾರೆ, ನಮ್ಮೆಲ್ಲರ ಮನಸ್ಸಿನಾಳದಲ್ಲಿ ಕಾರ್ಯಗಳಲ್ಲಿ, ಹಾಸುಹೊಕ್ಕಾಗಿದ್ದಾರೆ. ಸೂರಿ ಸತ್ತಿಲ್ಲ, ಅವರ ಹೋರಾಟದ ಚೈತನ್ಯಕ್ಕೆ ನಮ್ಮ ದಿನನಿತ್ಯದ ಹೋರಾಟಗಳಲ್ಲಿ ಅಚ್ಚ ಹಸಿರಾಗಿದ್ದಾರೆ" ಎಂಬಂತಿತ್ತು ಆ ಸ್ಮರಣೀಯ ಭಾವನಾತ್ಮಕ, ಜನ್ಮದಿನದ ಆ ಸಂಜೆ.



ಕಾಮ್ರೇಡ್ ಸೂರಿಯ ಸ್ಮರಣೀಯ ಸಂಜೆ

ಅಂದಿನ ಆ ಸುಂದರವಾದ ಕಾರ್ಯಕ್ರಮದಲ್ಲಿ ಕಾಂ। ಸೂರ್ಯನಾರಾಯಣರಾವ್‌ರವರ ಜೀವನ ಸಂಗಾತಿ ಯಶೋಧರವರು, ಸೂರಿಯವರ ಪುತ್ರಿಯರಾದ ಮೀರಾ ಹಾಗೂ ರೇಖಾ ಅವರೊಂದಿಗೆ ಸೂರಿಯವರ ಮುದ್ದಿನ ಮೊಮ್ಮಕ್ಕಳು, ಕುಟುಂಬದ ಇತರರು ಕೂಡ ಭಾಗವಹಿಸಿದ್ದು ಎಲ್ಲರ ಹೃದಯ ಸ್ಪರ್ಶಿಸಿತ್ತು. ಮುಖ್ಯ ಅತಿಥಿಗಳಾಗಿ ಬೆಂಗಳೂರು ಉತ್ತರ ಕ್ಷೇತ್ರದ ಕಾಂಗ್ರೆಸ್ ಸಂಸತ್ ಸದಸ್ಯರಾದ ಮಾಜಿ ಸಚಿವ ಸಿ.ಕೆ. ಜಾಫರ್ ಶರೀಫ್ ಆಗಮಿಸಿದ್ದರು. ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ। ಎಂ.ಕೆ. ಪಂಧೆಯವರು ಕೂಡ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದು ಕಾರ್ಯಕ್ರಮಕ್ಕೆ ಮತ್ತಷ್ಟು ಅರ್ಥಪೂರ್ಣತೆ ತಂದುಕೊಟ್ಟಿತ್ತು. ಇವರೊಂದಿಗೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು, ಸಿಐಟಿಯುವಿನ ಕರ್ನಾಟಕ ರಾಜ್ಯದ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಪಕ್ಷದ ಮಂಗಳೂರು ಜಿಲ್ಲಾ ಕಾರ್ಯದರ್ಶಿ ಶ್ರೀಯಾನ್.ಕೆ.ಆರ್., ಜಿ.ವಿ. ಶ್ರೀರಾಮರೆಡ್ಡಿ, ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿ ಪ್ರಭಾಕರ್, ತುಮಕೂರಿನ ಮುಜೀಬ್ ಹಾಗೂ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ, ಬಯ್ಯಾರೆಡ್ಡಿ, ಗುರುಶಾಂತ್ ಇನ್ನು ಅನೇಕರು ಈ ಒಂದು 'ಭಾವಪೂರ್ಣ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಪಾರವಾದ ಸಂಖ್ಯೆಯಲ್ಲಿ ಬೆಂಗಳೂರಿನ ಕಾರ್ಮಿಕ ಚಳುವಳಿಯ

ಎನ್.ನಾಗರಾಜ್

ನಾಯಕರು, ಸೂರಿಯವರ ನೂರಾರು ಅಭಿಮಾನಿಗಳು ಕಾರ್ಯಕ್ರಮದಲ್ಲಿ ನೆರೆದಿದ್ದರು. ಸೂರಿಯವರ ಜೊತೆ ಕಳೆದ 4 ದಶಕಗಳಿಂದ ಒಡನಾಡಿಯಾಗಿ ದುಡಿದಿದ್ದ ವಿ.ಜೆ.ಕೆ. ನಾಯರ್ ಈ ಕಾರ್ಯಕ್ರಮದಲ್ಲಿ 'ಅಧ್ಯಕ್ಷತೆ' ವಹಿಸಿದ್ದು ತುಂಬ ಅರ್ಥಪೂರ್ಣವಾಗಿತ್ತು.

ದುಡಿವವರ್ಗದ ಧೀಮಂತನಾಯಕ ಕಾಂ। ಪಂಥೆ

ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಿಪಿಎಂ ಪಾಲಿಟ್ ಬ್ಯೂರೋ ಸದಸ್ಯ ಎಂ.ಕೆ. ಪಂಧೆಯವರು ಸೂರಿಯವರೊಂದಿಗೆ ದುಡಿದ ತಮ್ಮ ನೆನಪಿನ ದಿನಗಳನ್ನು ಮೆಲಕು ಹಾಕುತ್ತಾ, ಕಾರ್ಮಿಕ ಚಳುವಳಿಗೆ ಕಾಂ। ಸೂರಿ ಕೊಟ್ಟ ಕೊಡುಗೆ ಅಪಾರವಾದ್ದದೆಂದರು. ಸಮಾಜದಲ್ಲಿನ ಅಸಮಾನತೆ, ಅನ್ಯಾಯಗಳ ವಿರುದ್ಧ ಪ್ರಾಮಾಣಿಕವಾಗಿ ದುಡಿದ ಒಬ್ಬ ಧಿಮಂತ ಜನನಾಯಕ ಎಂದು ನೆನಪು ಮಾಡಿಕೊಂಡರು. ಇಂದಿನ ಯುವ ಜನಾಂಗ ಅವರು ನಂಬಿದ್ದ ಧ್ಯೇಯೋದ್ದೇಶಗಳನ್ನು ಅಳವಡಿಸಿಕೊಂಡು, ಸೂರಿ ನಡೆದು ಬಂದ ಮಾರ್ಗದಲ್ಲಿ ಮುಂದುವರಿಯ ಬೇಕೆಂದರು. ಸಮಾಜವಾದದ ಸಮಾಜದಿಂದ ಮಾತ್ರ ಈಗ ಜ್ವಲಂತಗೊಂಡಿರುವ ಬಡತನ, ಅನಕ್ಷರತೆ, ನಿರುದ್ಯೋಗ ಅಸಮಾನತೆಗಳಂತಹ ಸಮಸ್ಯೆಗಳನ್ನು ತೊಡೆದು ಹಾಕಲು ಸಾಧ್ಯವೆಂದ ಅವರು ಸೂರಿ ಅಗಾಧವಾದ ಆಕಾಂಕ್ಷೆಯನ್ನು "ಸಮಾಜವಾದ"ದ ಬಗ್ಗೆ ಹೊಂದಿದ್ದರು, ಅವರ ಅಪೂರ್ಣ ಕನಸ್ಸನ್ನು ನನಸುಮಾಡುವ ನಿಟ್ಟಿನಲ್ಲಿ ನಾವೆಲ್ಲಾ ದುಡಿಯೋಣ ಸೂರಿಯವರ ಜನ್ಮದಿನಾಚರಣೆಯನ್ನು ಅರ್ಥಪೂರ್ಣಗೊಳಿಸೋಣವೆಂದರು. ವಿದ್ಯಾರ್ಥಿ ದಿಸೆಯಿಂದಲೇ ಅನ್ಯಾಯ, ದಬ್ಬಾಳಿಕೆಯ ವಿರುದ್ಧ ಸಿಡಿದು ನಿಂತವರು ಅಂದು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನಡೆಯುತ್ತಿದ್ದ ಪ್ರಗತಿಪರ ಸಂಗ್ರಾಮದಲ್ಲಿ ಧುಮುಕಿದ ಸ್ವಾತಂತ್ರ ಹೋರಾಟಗಾರರ ಕಾಂ। ಸೂರಿ ಎಂದು ಬಣ್ಣಿಸಿದರು. ಗುಜರಾತಿನಲ್ಲಿನ ಕೋಮುಗಲಭೆಗಳ ಬಗ್ಗೆ ಸೂರಿಯವರು ತುಂಬ ಆಕ್ರೋಶಭರಿತರಾಗಿದ್ದರು. ಅಲ್ಲಿನ ಸರ್ಕಾರವೇ ಕೋಮು ಗಲಭೆಗಳನ್ನು ಆಯೋಜಿಸಿದ್ದು ಅವರ ಆಕ್ರೋಶಕ್ಕೆ ಮೂಲ ಕಾರಣವಾಗಿತ್ತು. ಅಲ್ಪಸಂಖ್ಯಾತರ ರಕ್ಷಣೆ ಪ್ರಜಾಪ್ರಭುತ್ವದ ಒಂದು ಮಹತ್ವದ ಅಂಶವೆಂದಿದ್ದ ಅವರು ದುಡಿವಜನರ ಬಗ್ಗೆ ಅಪಾರವಾದ ಪ್ರೀತಿ ವಿಶ್ವಾಸವಿತ್ತು. 'ಮಾರ್ಕ್ಸಿಸಂ' ವಾದ ಅಪ್ಪಿಕೊಂಡಿದ್ದ ಅವರು ಅದರ ಪಾಲನೆ ಮತ್ತು ಅನುಷ್ಠಾನಕ್ಕೆ ನಿಷ್ಠೆಯಿಂದ ಜೀವನ ಪರ್ಯಂತ ದುಡಿದ ಮಾನವತಾವಾದಿ ಎಂದರು. ಕಾಂ। ಪಂಧೆ ತಮ್ಮ ನೆನಪುಗಳನ್ನು ಮುಂದುವರಿಸುತ್ತಾ 'ಜಾಗತೀಕರಣ'ದ ವಿರುದ್ಧದ ಒಂದು ಮಹತ್ವದ ಸಭೆಯಲ್ಲಿ ಭಾಗವಹಿಸಲು ಅವರೊಂದಿಗೆ ನಾನು ದಕ್ಷಿಣ ಕೋರಿಯಾಕ್ಕೆ ಹೋಗಿದ್ದೆ. ಕಾಂ। ಸೂರಿ ಅಂತರಾಷ್ಟ್ರೀಯ ಮಟ್ಟದಲ್ಲಿನ ಸಮಸ್ಯೆಗಳನ್ನು ಅರಿಯುವಲ್ಲಿ ಏಷ್ಯದ ಇತರೆ ಪ್ರತಿನಿಧಿಗಳೊಂದಿಗೆ ಬೆರೆತು ಚರ್ಚಿಸುತ್ತಿ

ಪುಟ 10 ಕ್ಕೆ


ಕಾಂ.ಸೂರಿ ನೆನಪಿನ ವಿಶೇಷ ಸಂಚಿಕೆ ಬಿಡುಗಡೆ

ದುಡಿವ ಜನರ ಪ್ರಾಣಮಿತ್ರ 'ಐಕ್ಯರಂಗ' ವಾರಪತ್ರಿಕೆಯ ಸಂಪಾದಕರು ಮಾತನಾಡಿದರು. "ಸೂರಿ ಸ್ಮರಣಾ ವಿಶೇಷ ಸಂಚಿಕೆ" ಹೊರತರುವ ಕಾರ್ಯವನ್ನು 'ಐಕ್ಯರಂಗ' ಬಳಗ ಕೈಗೆತ್ತಿಕೊಂಡಿದೆ. ಇದಕ್ಕಾಗಿ ಎಲ್ಲರ ಸಹಕಾರ ಅಗತ್ಯವೆಂದು ಮನವಿ ಮಾಡಿದರು. ಇದೊಂದು ಅಪೂರ್ಣವಾದ ಸಂಚಿಕೆ ಇಂದು ಕಾಂ. ಶ್ರೀಯಾನ್‌ರವರಿಂದ ಬಿಡುಗಡೆಗೊಂಡಿದೆ ಅಷ್ಟೆ. ಅದು ಒಂದು ಸಮಗ್ರವಾದ ಸಂಚಿಕೆ ತಯಾರಿಯಾಗುತ್ತಿದೆ ಎಂದು ಪ್ರಸ್ತಾಪಿಸುತ್ತ ಈ ವಿಶೇಷ ಸಂಚಿಕೆಯ ಮಹತ್ವತೆಯನ್ನು ವಿವರಿಸಿದರು.

ಕಾಂ.ಸೂರಿಯವರ ಸ್ಮರಣೆಗಾಗಿ ಹೊರತರುತ್ತಿರುವ ಈ ಸಂಚಿಕೆಯಲ್ಲಿ ಸ್ಪೂರ್ತಿದಾಯಕವಾದ 'ಐತಿಹಾಸಿಕ ದಾಖಲೆಗಳು' ಹಲವು ಮುಖ್ಯವಾದ ಚಳುವಳಿಗಳ ಅನುಭವಗಳನ್ನು ಐಕ್ಯರಂಗ ಒಟ್ಟುಗೂಡಿಸಿ ಪ್ರಮುಖವಾಗಿ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದ ಧೀರ ಕಾಂ.ಸೂರಿಯವರು - ವಿದ್ಯಾರ್ಥಿ ದಿಸೆಯಿಂದ ಮೊದಲುಗೊಂಡು ಕೊನೆಯುಸಿರಿರುವವರೆಗೂ ದುಡಿವ ಧೀಮಂತ ನಾಯಕ ಇವರು ಐಕ್ಯರಂಗಕ್ಕೆ ಯಾವಾಗಲೂ ಸ್ಫೂರ್ತಿಯಾಗಿದ್ದರು. ಓದುವ ಅಭ್ಯಾಸ ಮಾಡಿಕೊಳ್ಳಬೇಕು. ಚಿಂತನೆಯಿಲ್ಲದ, ಸೈದ್ಧಾಂತಿಕ ನೆಲೆಯಿಲ್ಲದ ಯಾವುದೇ ಹೋರಾಟ ಗುರಿ ಮುಟ್ಟಲಾಗದು ಎಂದಿರುವ ಲೆನಿನ್ - ನಾಣ್ಣುಡಿಯನ್ನು 'ಸೂರಿ' ಯಾವಾಗಲೂ ಸಂಗಾತಿಗಳಿಗೆ ಒತ್ತಿ ಹೇಳುತ್ತಿದ್ದರು, 'ಐಕ್ಯರಂಗ' ಬೆಳೆದು ಬರಲು ಹಗಲಿಗೆ ಹಗಲು ಕೊಟ್ಟ ಸೂರಿಯವರ "ಕಾರ್ಮಿಕ ಚಳುವಳಿಯಲ್ಲಿನ ಅಪಾರವಾದ ಅನುಭವಗಳನ್ನು" ಈ ವಿಶೇಷ ಸಂಚಿಕೆಯು ಒಳಗೊಂಡಿರುತ್ತದೆ. ಈ 'ಸಂಚಿಕೆ'ಯ ಪ್ರತಿಗಳು ದುಡಿಯುವ ಜನತೆಯ ಮಧ್ಯೆ ಸಂಚರಿಸಬೇಕು ಆಗ ಮಾತ್ರ ಸೂರಿ ಕನಸು ನನಸಾಗಲು ಸಾಧ್ಯವೆಂದು ಗುರುಶಾಂತ್ ವಿಶೇಷ ಸಂಚಿಕೆ ಬಿಡುಗಡೆಗೆ ಕುರಿತು ಕೆಲವೊಂದು ಮಾತುಗಳನ್ನಾಡಿದರು.

ಪತ್ರಿಕೆಯನ್ನು ಬಿಡುಗಡೆಗೊಳಿಸಿದ ಶ್ರೀಯಾನ್‌ರವರು 1953ರಲ್ಲಿ ಪಕ್ಷ ಸೇರಿದ ಹಿರಿಯ ನಾಯಕರು ಮಾತನಾಡುತ್ತಾ, ಕಾಂ.ಸೂರ್ಯನಾರಾಯಣ್‌ರಾವ್‌ರವರು ಕರ್ನಾಟಕ ಕಾರ್ಮಿಕವರ್ಗ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಧ್ಯೆ ಸಿಂಹಧ್ವನಿಯಾಗಿ ದುಡಿದವರು ಎಂದು ಆರಂಭಿಸಿ ಶ್ರೀಯಾನ್‌ರವರು ತಮ್ಮ ಹಿಂದಿನ ನೆನಪುಗಳನ್ನು ಕೆದುಕಲಾರಂಭಿಸಿದರು. 1964ರಲ್ಲಿ ಮಂಗಳೂರಿನ ಪಕ್ಷದ ಸಭೆಯಲ್ಲಿ 'ತಪ್ಪು ದಿಕ್ಕಿನಲ್ಲಿದ್ದ ಚಳುವಳಿಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ದಿಕ್ಕಿನಲ್ಲಿ ಚರ್ಚೆ ನಡೆಯುತ್ತಿದ್ದ ಸಂದರ್ಭವನ್ನು ಜ್ಞಾಪಿಸಿಕೊಂಡು, ಅಂದು ಸೂರಿಯವರು ನನಗೆ ಪರಿಚಯಗೊಂಡರು, ಅಂದಿನಿಂದ ಅವರನ್ನು ತುಂಬ ಹತ್ತಿರದಿಂದ ಬಲ್ಲವನಾಗಿದ್ದೇನೆ. ಅಂದು AKG ಯವರ ಬೆಂಬಲದೊಂದಿಗೆ ಬಾಡಿಗೆ ಆಧಾರದ ಮುದ್ರಣದೊಂದಿಗೆ ಮಂಗಳೂರಿನಲ್ಲಿ ಆರಂಭಗೊಂಡ 'ಈ ಐಕ್ಯರಂಗ' ದುಡಿವ ವರ್ಗದ ಚಳುವಳಿಯೊಂದಿಗಿನ ಹಾಸುಹೊಕ್ಕಾಗಿ ಬೆಳೆದು ಬಂದಿದೆ. 1964ರಿಂದ 1978ರವರೆಗೆ ಮಂಗಳೂರಿನಿಂದ ಪ್ರಕಟಿತಗೊಂಡ ಈ 'ಐಕ್ಯರಂಗ' 1978ರಲ್ಲಿ ಬೆಂಗಳೂರಿಗೆ ಆಗಮಿಸಿತು. ಈ ನಿಟ್ಟಿನಲ್ಲಿ ಸೂರಿಯವರ ಕೊಡುಗೆ ಅಪಾರವಾದದ್ದು ಎಂದರು. ಇದರ ಪ್ರಥಮ ಪ್ರಕಾಶಕನಾದ ನಾನು ಸೂರಿಯವರ ಜನಾಕರ್ಷಕ ಭಾಷಣಗಳನ್ನು ಇದರಲ್ಲಿ ಅನೇಕ ಬಾರಿ ಮುದ್ರಿಸಿದ್ದೇವೆ.

ಬೆಂಗಳೂರಿನಲ್ಲಿ ಒಂದು ಕಡೆ ಘನ ಕೈಗಾರಿಕೆಗಳನ್ನು ಮತ್ತೊಂದು ಕಡೆ ಅಸಂಘಟಿತ ವಲಯದ ಬೀಡಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಸೂರಿ ತೋರಿದ ಕಾಳಜಿ ಅಷ್ಟಿಷ್ಟಲ್ಲ. ಬೀಡಿ ಕಾರ್ಮಿಕರ ಕೂಲಿಗೆ ಸಂಬಂಧಿಸಿದಂತೆ 'ಒಂದು ಕಾನೂನು' ರೂಪಿಸುವಲ್ಲಿ ಸೂರಿ ಪಾತ್ರ ಪ್ರಮುಖವಾದದ್ದು. ಇವರ ನೆನಪು ಹಸಿರಾಗಿ ಉಳಿಯಬೇಕಾದರೆ ಆ ನಿಟ್ಟಿನಲ್ಲಿ ನಾವೆಲ್ಲಾ ಈ 'ಐಕ್ಯರಂಗ' ಪತ್ರಿಕೆಯನ್ನು ಬೆಳೆಸೋಣವೆಂದರು.



ಕಾಮ್ರೇಡ್ ಸೂರಿಯ ಸ್ಮರಣೀಯ ಸಂಜೆ.....


ಪುಟ 9 ರಿಂದ

ಷರಿ ನಿಜಕ್ಕೂ ಅವರಲ್ಲಿ ಅಂತರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಇದ್ದ ಕಾಳಜಿಯನ್ನು ಎತ್ತಿತೋರಿಸಿತ್ತು. ಪ್ರಸಕ್ತ ಸನ್ನಿವೇಶದಲ್ಲಿ ಸಾಮಾಜಿಕ ಮೌಲ್ಯಗಳ ಬಗ್ಗೆ ಕಾಳಜಿ ಕುಂದುತ್ತಿದೆ. ಸ್ವಾರ್ಥತನ ಅದರ ಸ್ಥಾನ ಆಕ್ರಮಿಸಿಕೊಳ್ಳುತ್ತಿದೆ. ಬೂರ್ಜ್ವಾ ಪಕ್ಷಗಳು ಈ ಸೊಗಸಾದ ಸಂಪನ್ಮೂಲ ಹೊಂದಿರುವ ಸಮಾಜವನ್ನು ಹಾಳುಗೆಡುಹುತ್ತಿದ್ದಾರೆ ಎಂಬ ಗಾಂಭೀರ್ಯತೆ ಕಾಂ। ಸೂರಿಯವರಲ್ಲಿ ತುಂಬಿತ್ತು.

ಕಾರ್ಮಿಕ ವರ್ಗದ ಐಕ್ಯ ಚಳುವಳಿ ರೂಪಿಸುವಲ್ಲಿ ತುಂಬ ಆಸಕ್ತಿ ಹೊಂದಿದ್ದ ಸೂರಿಯವರು "ಜುಲೈ 15, 2002 ಸಮಾವೇಶದಲ್ಲಿ ಭಾಗವಹಿಸಲು ಪೂರ್ವಸಿದ್ಧರಾಗಿದ್ದರು. ಕಾರ್ಮಿಕ ಸಿದ್ಧಾಂತಗಳಲ್ಲಿ ಮಹತ್ವದಾಯಕ ಸ್ಫೂರ್ತಿ ಹೊಂದಿದ್ದ ಅಪ್ರತಿಮ ಹೋರಾಟಗಾರನಾದ ಕಾಂ.ಸೂರಿಯವರ ಹುಟ್ಟು ದಿನ ಆಚರಿಸುತ್ತಿರುವ ನಾವುಗಳು ಅವರ ಅಪೂರ್ಣ ಆಶಯಗಳನ್ನು ಪರಿಪೂರ್ಣಗೊಳಿಸೋಣ, ಸ್ವಾರ್ಥಕತನವೇ ತುಂಬಿರುವ ಈ ಸಮಾಜವನ್ನು ಬದಲಾಯಿಸೋಣ, ದುಡಿದು ತಿನ್ನುವ ವರ್ಗವಾದ ನಾವು ಸೂರಿಯವರ ಸ್ಮರಣೆಯ ದಿನದಂದು ಪ್ರತಿಜ್ಞೆ ಸ್ವೀಕರಿಸೋಣವೆಂದು ಪಂಧೆಯವರು ಕರೆಕೊಟ್ಟರು.

ಕಪ್ಪುಮೋಡಗಳು ತೊಲಗಿ - ಬೆಳಕು ಮೂಡುತ್ತದೆ: ನಾನು ನಿಮ್ಮೊಂದಿಗೇ ಜಾಫರ್ ಶರೀಫ್

ಮತ್ತೊಬ್ಬ ಮುಖ್ಯ ಅತಿಥಿಗಳಾದ ಜಾಫರ್ ಶರೀಫ್ ಮಾತನಾಡುತ್ತ ನಾನು ಕಾಂಗ್ರೆಸ್ಸಿನವನು


ಡಾ.ಪಂಧೆ


ಆದರೂ, "ನನ್ನ ಗಾಢ ಗೆಳೆತನ ಕಮ್ಯುನಿಸ್ಟರೊಂದಿಗಿದೆ" ಎಂದರು, ನನಗೆ ಪರಿಸ್ಥಿತಿಯ ಬಗ್ಗೆ ಬೇಜಾರಾದಾಗ "ಸುರ್ಜಿತ್" ಬಳಿ ಹೋಗುತ್ತೇನೆ. ದೇಶದಲ್ಲಿ 'ಅನೇಕ ಸಮಸ್ಯೆಗಳಿವೆ. ಆದರೆ ಪರಿಹಾರ ಕಂಡುಕೊಳ್ಳುವುದ ರಲ್ಲಿ ವಿಫಲರಾಗಿದ್ದೇವೆ. ನಿಮ್ಮದು cader based party ಆದರೆ ನಮ್ಮದು ಹಾಗಲ್ಲ. ತೋರಿಕೆಯ, ಕೃತಕವಾದ ಜನಬೆಂಬಲವನ್ನು ನಮ್ಮ ಅಡಿಪಾಯವೆಂಬ ತಪ್ಪು ಕಲ್ಪನೆಯಿಂದ ರಾಜಕೀಯ ಪಕ್ಷಗಳಲ್ಲಿ ನಾವು ಕಾರ್ಯ ನಿರ್ವಹಿಸುತ್ತಿದ್ದೇವೆ. ನಾವು ಗ್ರಾಮೀಣ ಭಾರತಕ್ಕೆ ಹೆಚ್ಚು ಮಾನ್ಯತೆ ಕೊಡಬೇಕು. ಗುಜರಾತ್ ಕೋಮುಗಲಭೆ ನಾಚಿಕೆ ತರುವಂತದ್ದು, ಈ ಮೋಡ ಎಲ್ಲ ಕಡೆ ಕವಚಿಕೊಂಡಿದೆ. ಇದನ್ನು ಸರಿಸಬೇಕಾಗಿದೆ. ಸೂರ್ಯನ ರಶ್ಮಿಯ ಬೆಳಕು ಜನರಮೇಲೆ ಬೀಳಬೇಕಾಗಿದೆ. ಅರಾಜಕತೆ, ಹತಾಶೆಗಳೆಂಬ ಕಾರ್ಮೋಡವನ್ನು ಸರಿಸಿ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ದುಡಿಯಬೇಕಾಗಿದೆ ಎಂದರು. ಪಟ್ಟಭದ್ರರು ಮಧ್ಯದಂತಹ ವ್ಯಾಪಾರದಿಂದ ಹಣ ಮಾಡುತ್ತಿದ್ದಾರೆ. ಹೊಸ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮ ಕುರಿತು ನಾನು ಹಲವು ಬಾರಿ ಮನಮೋಹನ್ ಸಿಂಗ್‌ರೊಂದಿಗೆ ಚರ್ಚಿಸಿದ್ದೇನೆ. ಆದರೂ ಪ್ರಯೋಜನವಾಗಿಲ್ಲ. ಸಾರ್ವಜನಿಕ ಉದ್ಯಮಗಳ ಶೇರು ಮಾರಾಟ ಹೆಚ್ಚಾಗಿದೆ. ನಿರುದ್ಯೋಗಿಗಳು ಬಡವರು ಹೆಚ್ಚಾಗಿದ್ದಾರೆ. ಕಾರ್ಮಿಕ ಹತಾಶನಾಗಿದ್ದಾನೆ. VRS ಮೂಲಕ ಕೆಲಸ ಕಳೆದುಕೊಳ್ಳುತ್ತಾನೆ. ರಾಜಕಾರಣಿಗಳು ಜಾತಿ-ಧರ್ಮದ ಹೆಸರಿನಲ್ಲಿ ತಪ್ಪುದಾರಿಗೆ ಹೊಯ್ಯುತ್ತಿದ್ದಾರೆ. ನೀವು 2 ರಾಜ್ಯಗಳಲ್ಲಿ ಮಾತ್ರ ಇದ್ದೀರೆಂಬ ಮಾತುಕೇಳಿ ಬೇಜಾರು ಮಾಡಿಕೊಳ್ಳಬೇಡಿ. ಒಬ್ಬ ಸೂರಿ ಹೋಗಿದ್ದಾರೆ, ನನಗೆ ನಂಬಿಕೆ ಇದೆ ಅವರು ಸಾವಿರಾರು ಸೂರಿಯವರನ್ನು ಬೆಳೆಸಿ, ಬಿಟ್ಟುಹೋಗಿದ್ದಾರೆ.

ನಿಮ್ಮದು ಮೂಲಭೂತ ಸಿದ್ಧಾಂತ ಹಾಗೂ ಮಾನವೀಯ ಮೌಲ್ಯಗಳಲ್ಲಿ ನಂಬಿಕೆಯಿಟ್ಟಿರುವ ಪಕ್ಷ ನೀವು - ಹತಾಶರಾಗದಿರಿ, ಪ್ರಜಾತಂತ್ರದಲ್ಲಿ ನಂಬಿಕೆ ಗಟ್ಟಿಯಾಗಿರಲಿ, ರಾಷ್ಟ್ರದ ಬಗ್ಗೆ ಹಿತಾಸಕ್ತಿ, ನಿಮಗೆ ಅಪಾರವಾಗಿದೆ. ಸೂರಿ - ಆದರ್ಶ, ತ್ಯಾಗ - ಮನೋಭಾವನೆ ಅವರು ನಡೆದ ಮಾರ್ಗ ನಮ್ಮೆಲ್ಲರಿಗೂ ದಾರಿಯಾಗಲಿ - ಆ ನಿಟ್ಟಿನಲ್ಲಿ ನನ್ನ ಶ್ರದ್ಧಾಂಜಲಿ ಇದೆಂದು ಜನ್ಮದಿನಾಚರಣೆಯಲ್ಲಿ ತಮಗೆ ಎಡ ಚಿಂತನೆಯಲ್ಲಿ ಅವರಿಗಿದ್ದ ಅಪಾರ ಅಭಿಮಾನ ಅವರ ಭಾಷಣದಲ್ಲಿ ತುಂಬಿತು. ಮಾತಿನಲ್ಲಿ ಮಾತ್ರ ನಿಮ್ಮೊಂದಿಗಿಲ್ಲ, ಕೃತಿಯಲ್ಲೂ ನನ್ನ ಬೆಂಬಲವಿದೆ. ಯಾರಿಗೂ ಅವಿಶ್ವಾಸದ ಭಾವ ಬೇಡ ನಾನು ನಿಮ್ಮ ಜೊತೆಯಿರುತ್ತೇನೆ

'ಬೆಂಕಿ ಆರಿ, ಬೆಳಕು ಉಳಿದಿತ್ತಾ'

ಕಾಂ. ಜಿ.ಎನ್. ನಾಗರಾಜ್‌ರವರು ತಮ್ಮ ಭಾಷಣ ಆರಂಭಿಸುತ್ತಿದ್ದಂತೆ ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ ಜಗ್ಗದಯೆ, ಕುಗ್ಗದಯೇ ನುಗ್ಗಿ ನಡೆ ಮುಂದೆ - ಎಂಬ ನಾಣ್ನುಡಿಯಂತೆ ಸೂರಿಯವರು ಅಪ್ರತಿಮ ಸಾಹಸವನ್ನು ಎತ್ತಿತೋರಿದವರು ಎಂದು ಕೊಂಡಾಡಿದರು. ಅವರೊಬ್ಬ ಕೆಚ್ಚೆದೆಯ ಹೋರಾಟಗಾರ, ಅವರ ಆದರ್ಶಮಯ ಜೀವನವನ್ನು ಕರ್ನಾಟಕದ ಉದ್ದಗಲಕ್ಕೂ ಹರಡಲು ನಾವು ಇಲ್ಲಿ ಸೇರಿದ್ದೇವೆ - ಈ ಸಾಧನೆಯನ್ನು ಮಾಡೇ ತೀರಬೇಕು ಎಂದು ಭಾವಾವೇಷದಿಂದ ನುಡಿದರು. ಸೂರಿಯವರ ಬದುಕನ್ನು"ಬೆಂಕಿ ಆರಿ ಬರೆ ಬೆಳಕು ಉಳಿದಿತ್ತಾ" ಅವರ ಜೀವನದ ಬೆಳಕನ್ನು ಹಲವಾರು ದಿನಗಳ ಕಾಲ, ಶತಮಾನಗಳ ಕಾಲ ಬೆಳಗಬೇಕು. ಈ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತಗೊಳ್ಳೋಣ ಎಂದು ಜಿ.ಎನ್.ನಾಗರಾಜ್ ಹಲವಾರು ಪ್ರಸ್ತಾಪಗಳನ್ನು ಈ ಕಾರ್ಯಕ್ರಮದಲ್ಲಿ ಮಂಡಿಸಿದರು. ನಮ್ಮ ಕಣ್ಣಿನ ಪಟಲದಂತೆ ಇವುಗಳನ್ನು ಪಾಲಿಸಲು ಸಿದ್ಧರಾಗಬೇಕು, ಸೂರಿಯವರ ಅಪೇಕ್ಷೆ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ರೈತರಿಗೂ ಸಿಗುವಂತಾಗಬೇಕು ಎಂಬುದು. ಮಾಲೀಕ ವರ್ಗದ ಧೋರಣೆಗಳ ವಿರುದ್ಧ ಫ್ಯಾಕ್ಟರಿಯೊಳಗೆ ಹೋರಾಡಿ ಸೌಲಭ್ಯಗಳನ್ನು ಪಡೆದುಕೊಂಡು, ಫ್ಯಾಕ್ಟರಿ ಆಚೆ ಬಂದಾಗ ಬೂರ್ಜ್ವಾ ಪಕ್ಷಗಳ ಜೊತೆ ಸೇರುತ್ತಾರೆ ಈ ಕಾರ್ಮಿಕರು ಎಂಬ ವಿಷಾದ ಸೂರಿಯವರಲ್ಲಿತ್ತು. ಕಾರ್ಮಿಕ ವರ್ಗದ ರಾಜಕೀಯ ಬೆಳೆಯಬೇಕು ಈ ಸಿಂಹಧ್ವನಿಯ ಆದರ್ಶತೆ ಇಡೀ ಕರ್ನಾಟಕದ ಸುತ್ತಗಲಕ್ಕೂ ಹರಡುವಂತೆ ಮಾಡಬೇಕಾಗಿದೆ ಎಂದರು.

ಜಿ.ಎನ್‌ರವರು "ಸೂರಿಯವರ ಪ್ರಭಾವ ಕರ್ನಾಟಕದ ಮೂಲೆ ಮೂಲೆಗೂ ಪಸರಿಸಬೇಕು. ಈ ಭವನವು ಕಾರ್ಮಿಕ ಚಳುವಳಿಗೆ 'ಕೇಂದ್ರ' ಬಿಂದುವಾಗಿರಬೇಕು. ಆದ್ದರಿಂದ ಕೋಟಿಗಟ್ಟಲೆ ಹಣ ಸಂಗ್ರಹಣೆ ಈ ನಿಟ್ಟಿನಲ್ಲಿ ಆಗಬೇಕು. ಬೆಂಗಳೂರಿನ ಕಾರ್ಮಿಕ ವರ್ಗ ಮುಂದೆ ಬರಬೇಕು. ಇದು ಅಸಾಧ್ಯವಾದುದ್ದೇನಲ್ಲ. ಬೆಂಗಳೂರಿನ ನಿರ್ಮಾಪಕ 'ಕೆಂಪೇಗೌಡರು' ಎನ್ನುತ್ತಾರೆ. ಆದರೆ ಕರ್ನಾಟಕದಲ್ಲಿ CITU ನಾಯಕರಾದ


ಜಾಫರ್ ಶರೀಫ್

ಸೂರಿಯವರು ಬೆಂಗಳೂರಿನ ಕಾರ್ಮಿಕ ವರ್ಗದ ಏಳಿಗೆಗಾಗಿ ಜೀವನ ಪೂರ್ತಿ ಶ್ರಮಿಸಿದ್ದಾರೆ. ಆದ್ದರಿಂದ ಸೂರಿ ಕೂಡ ಬೆಂಗಳೂರಿನ ಒಬ್ಬ ನಿರ್ಮಾಪಕರೇ ಎಂದು ಹೆಮ್ಮೆಯಿಂದ ನುಡಿದರು. ನಂತರ ದೇಣಿಗೆ ಕೊಡಲು ಅನೇಕ ಜನ ಮುಂದೆ ಬಂದರು.

ಅದರಲ್ಲಿ ಪ್ರಮುಖವಾಗಿ ಸೂರಿಯವರ ಪತ್ನಿ ಯಶೋಧರವರು 1 ಲಕ್ಷ ರೂ. ದೇಣಿಗೆ ಕೊಡಲು ಮುಂದಾದರು. ಆನಂತರ ಅವರ ಇಬ್ಬರು ಪುತ್ರಿಯರು ತಲಾ 25,000 ಪ್ರಕಟಿಸಿದರು. ಹೀಗೆ ಅನೇಕ ಸಂಘಟನೆಗಳು ಹಾಗೂ ವೈಯಕ್ತಿಕವಾಗಿ ತುಂಬ ಜನರು ದೇಣಿಗೆ ಹಣವನ್ನು ಪ್ರಕಟಿಸಿದ್ದು ಸಭೆಯಲ್ಲಿ ಉತ್ಸಾಹ ತುಂಬಿದ ವಾತಾವರಣ ಹರಡಿತ್ತು. ಹುಮ್ಮಸ್ಸು, ಉತ್ಸಾಹಕ್ಕೆ ಕೊನೆಯಿಲ್ಲದಂತಿತ್ತು ಆ ಸಮಾರಂಭ.

ಕೊನೆಯಲ್ಲಿ ಶ್ರೀಮತಿ ಯಶೋಧರವರು ಮಾತನಾಡಿ "ಸೂರಿ ಸ್ಮಾರಕ ಭವನ' ಕಟ್ಟಲು ಎಲ್ಲರು ಒಂದಾಗಿ, ಒಗ್ಗಟ್ಟಾಗಿ ಹಣಕಾಸು ಬೆಂಬಲದೊಂದಿಗೆ ಮುಂದೆ ಬರುತ್ತೀರೆಂಬ ಭರವಸೆ ನನಗಿದೆ ಎಂದರು. ನಾನು ನಿಮ್ಮೊಂದಿಗೆ ಭಾಗಿಯಾಗುತ್ತೇನೆ ಎಂದರು.

ಇದಕ್ಕೆ ಮುನ್ನಾ ಅಧ್ಯಕ್ಷೀಯ ಭಾಷಣ ಮಾಡಿದ ವಿ.ಜೆ.ಕೆ ನಾಯರ್ 'ಈ ಸ್ಮಾರಕ ಭವನ'ದ ಮೂಲಕ ನೂರಾರು ಸಮರಧೀರ ಸಂಗಾತಿಗಳನ್ನು ಬೆಳೆಸೋಣ. ಈ ನಿಟ್ಟಿನಲ್ಲಿ ನಿಮ್ಮೆಲ್ಲರ ಸಹಕಾರ, ಬೆಂಬಲದ ಅಗತ್ಯವಿದೆ ಎಂದು ನುಡಿದರು. ಆರಂಭದಲ್ಲಿ ಮೀನಾಕ್ಷಿ ಸುಂದರಂ ಸ್ವಾಗತಿಸಿದರು. ಕೆ. ಪ್ರಕಾಶ್ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮವು ಧನರಾಜ್ ಕ್ರಾಂತಿಗೀತೆ ಹಾಡುವ ಮೂಲಕ ಆರಂಭವಾಯಿತು.

ಸೂರಿ ನೆನಪು ಉಳಿಸಲು - ಪ್ರಮುಖ ಪ್ರಸ್ತಾವಗಳ

ಜಿ.ಎನ್.ನಾಗರಾಜ್‌ರವರು ಎರಡು ಪ್ರಸ್ತಾವನೆಗಳನ್ನು ಸಭೆಯ ಮುಂದೆ ಮಂಡಿಸಿದರು. ಮೊದಲನೆಯ ಪ್ರತಿವರ್ಷ ಸೂರಿಯ ಜನ್ಮದಿನದಂದು-ಒಂದು ಉಪನ್ಯಾಸ ನಡೆಸಬೇಕು. ಸೂರಿಗೆ ದತ್ತಿಯಾಗಿ ಸಮಾಜದ ಏಳಿಗೆಗಾಗಿ ಅವರ ಪರಿಶ್ರಮ ಕುರಿತು, ಅವರು ಯಾವ ಧ್ಯೇಯಗಳನ್ನು ನಂಬಿದ್ದರೋ ಅವುಗಳ ಅನುಷ್ಠಾನ ಕುರಿತು "ಸೂರಿ ಸ್ಮಾರಕ ದತ್ತಿ ಉಪನ್ಯಾಸ ಸಮಿತಿ" ರಚನೆ ಅವರು ಯಾರ ಸಲುವಾಗಿ ತಮ್ಮ ಜೀವನವನ್ನು ಬಸಿದರೋ ಅವರ ಏಳಿಗೆಗಾಗಿ ಈ ಸ್ಮಾರಕ ಉಪನ್ಯಾಸ ಸಮಿತಿ ದುಡಿಯಬೇಕು.

ಸಮಿತಿಯಲ್ಲಿ ಸೂರಿಯವರ ಪತ್ನಿ ಶ್ರೀಮತಿ ಯಶೋಧರವರು ಛೇರ್‌ಮನ್ನರಾಗಿ, ವಿ.ಜೆ.ಕೆ.ನಾಯರ್ ಅಧ್ಯಕ್ಷರಾಗಿ, ಕೆ.ವಿ.ಶ್ರೀಸಿವಾಸನ್ ಉಪಾಧ್ಯಕ್ಷರಾಗಿ ಹಾಗೂ ಮೀನಾಕ್ಷಿ ಸುಂದರಂ ಕಾರ್ಯದರ್ಶಿಯಾಗಿ ಕ್ರಮವಾಗಿ ಇರುತ್ತಾರೆ. ಅನೇಕ ಸದಸ್ಯರು ಈ ಸಮಿತಿಯೊಳಗೆ ಕಾರ್ಯನಿರ್ವಹಿಸುತ್ತಾರೆ. ಸೂರಿಯವರ ಪುತ್ರಿಯರಾದ ಮೀರಾ ಹಾಗೂ ರೇಖಾರವರು ಸಹ ಈ ಸಮಿತಿಯಲ್ಲಿ ಸದಸ್ಯರಾಗಿ ದುಡಿಯುತ್ತಾರೆ.

"ಸೂರಿ ಸ್ಮಾರಕ ಭವನ" ಕಟ್ಟಬೇಕು ದುಡಿಯುವ ವರ್ಗದ ತವರುಮನೆ ಬೆಂಗಳೂರಿನಲ್ಲಿ ಈ ಭವನ ಕಟ್ಟಬೇಕೆಂದು ಜಿ.ಎನ್.ನಾಗರಾಜ್ ತಮ್ಮ ಎರಡನೇ ಪ್ರಸ್ತಾಪ ಮಂಡಿಸಿದರು. ಸಂಘಟಿತ ಹಾಗೂ ಅಸಂಘಟಿತ ವಲಯದ ಕಾರ್ಮಿಕರನ್ನು ಒಂದುಗೂಡಿಸುವಂತ "ಹೋರಾಟದ ತರಬೇತು ಗರಡಿ" ಇದಾಗಬೇಕೆಂದು-ಸೂರ್ಯನಾರಾಯಣರಾವ್‌ರವರ ಆಶಯವನ್ನು ಒತ್ತಿ ಹೇಳಿದರು.


ಒಂದು ವಿಸ್ತಾರವಾದ "ಸ್ಮಾರಕ ಸಮಿತಿಯನ್ನು" ರಚಿಸಲು ಪ್ರಸ್ತಾಪಿಸಿದರು. ಈ ಸಮಿತಿಯಲ್ಲಿ ವಿ.ಜೆ.ಕೆ ನಾಯರ್ ಅಧ್ಯಕ್ಷರಾಗಿ, ಶ್ರೀಮತಿ ಯಶೋಧ ಸೂರಿ ಉಪಾಧ್ಯಕ್ಷರಾಗಿ ಹಾಗೂ ತ್ಯಾನಂದ ಸ್ವಾಮಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಪ್ರಸನ್ನಕುಮಾರ್ ಹಾಗೂ 115 ಜನರ ಸದಸ್ಯರು ಈ ಸಮಿತಿಯಲ್ಲಿದ್ದಾರೆ.


ಕಿಕ್ಕಿರಿದ ಜನ

ಗುಪ್ತ ಫೈಲುಗಳನ್ನು ತೆರೆದಾಗ

ಲುಮುಂಬಾ ಕೊಲೆಯಲ್ಲಿ ಸಿಐಎ ಪಾತ್ರ ಬಯಲು

ಲುಮುಂಬಾ ಆಫ್ರಿಕಾದ ವಸಾಹತುಶಾಹಿಯಿಂದ ಸ್ವಾತಂತ್ರ್ಯ ಹೋರಾಟದ ಅಪ್ರತಿಮ ನಾಯಕ. ಕಾಂಗೋ (ಮಧ್ಯೆ ಇದನ್ನು ಝೈರೋ ಎಂದು ಕರೆಯಲಾಗಿತ್ತು)ದ ಏಕಮಾತ್ರ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಪ್ರಧಾನಿ ಈತ. ಆತನನ್ನು ಮಿಲಿಟರಿ ಕ್ಷಿಪ್ರಕ್ರಾಂತಿಯೊಂದರಲ್ಲಿ ಪದಚ್ಯುತಗೊಳಿಸಿ, ಆತನ ರಾಜಕೀಯ ವಿರೋಧಿಗಳನ್ನು ಕೊಂದಿದ್ದರು ಎಂಬುದು ಈ ವರೆಗೆ ತಿಳಿದ ಸುದ್ದಿ. ನಲವತ್ತು ವರ್ಷಗಳ ನಂತರ ತೆರೆಯಲಾದ ಗುಪ್ತ ಫೈಲುಗಳ ಅಧ್ಯಯನದ ನಂತರ ಲುಮುಂಬಾನ ಕೊಲೆಯಲ್ಲಿ ಸಿಐಎ ಪಾತ್ರದ ಬಗ್ಗೆ ನೇರ ಪುರಾವೆ ಸಿಕ್ಕಿದೆ. ಕಾಂಗೋದ ಪ್ರಜಾಪ್ರಭುತ್ವವನ್ನು ಹುಟ್ಟಿನಲ್ಲೇ ಹಿಸುಕಿಹಾಕಿ, ಆ ದೇಶವನ್ನು ಸರ್ವಾಧಿಕಾರಿ ದಮನ ಚಕ್ರದಲ್ಲಿ ಸಿಲುಕಿಸಿದೆ ಅಮೆರಿಕಾದ ಸಿಐಎ. ಅಮೆರಿಕದ ಹಿತಾಸಕ್ತಿಗಳಿಗೆ ಲುಮುಂಬಾ ಮುಳುವಾಗಬಲ್ಲ ಎಂಬ ಆತಂಕದಿಂದ.


ಆಫ್ರಿಕಾದ ಮಹಾನ್ ನಾಯಕ ಪ್ಯಾಟ್ರಿಕ್ ಲುಮುಂಬಾ

ಶರತ್‌ಚಂದ್ರ

ಪ್ಯಾಟ್ರಿಕ್ ಲುಮುಂಬಾ 41 ವರ್ಷಗಳ ಹಿಂದೆ ಆಫ್ರಿಕಾದ ಏಕಮಾತ್ರ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ನಾಯಕನಾಗಿದ್ದ. ಕಾಂಗೋದಲ್ಲಿ ಬಹುಪಕ್ಷೀಯ ಪ್ರಜಾಪ್ರಭುತ್ವವಿತ್ತು. ಪಾರ್ಲಿಮೆಂಟು ಇತ್ತು. ಆದರೂ ಲುಮುಂಬಾ ಎಂದರೆ ಅಮೆರಿಕನ್ ಸರ್ಕಾರ ಕಿಡಿಕಾಗುತ್ತಿತ್ತು. ಆತನನ್ನು ಪದಚ್ಯುತಗೊಳಿಸಲು, ಕೊಲೆ ಮಾಡಲು ಹಲವು ಸಂಚನ್ನು ಸಿಐಎ ಹೂಡಿತ್ತು ಎಂದು ಆಪಾದಿಸಲಾಗಿತ್ತು. ಆದರೆ ಆತನನ್ನು, ಆತನ ರಾಜಕೀಯ ವಿರೋಧಿಗಳು ಕೊಲೆ ಮಾಡಿದರು ಎಂಬುದೇ ಈ ವರೆಗಿನ ತಿಳುವಳಿಕೆಯಾಗಿತ್ತು. ಇತ್ತೀಚೆಗೆ ಕಾಂಗೋದ ಹಿಂದಿನ ವಸಹತುಶಾಹಿ ಮೂಲಕವಾಗಿದ್ದ ಬೆಲ್ಜಿಯಂ ಒಂದು ತನಿಖೆ ನಡೆಸಿ, ಲುಮುಂಬಾ ಕೊಲೆಯಲ್ಲಿ ತನ್ನ ಪಾತ್ರವಿತ್ತು ಎಂದು ಒಪ್ಪಿಕೊಂಡಿದೆ. ಬೆಲ್ಜಿಯಂ ಬಿಡುಗಡೆ ಮಾಡಿದ 1500 ಪುಟದ ವರದಿ ಲುಮುಂಬಾ ಹತ್ಯೆ ಮತ್ತು ಪ್ರಜಾಪ್ರಭುತ್ವ ನಾಶವಾದ ಘಟನಾವಳಿಗಳನ್ನು ವಿವರವಾಗಿ ಚಿತ್ರಿಸಿದೆ. ಆದರೆ ಅಮೆರಿಕ ತನ್ನ ಪಾತ್ರವನ್ನು ಯಾವಾಗಲೂ ನಿರಾಕರಿಸಿತ್ತು. 1975ರಲ್ಲಿ ಅಮೆರಿಕಾದ ಸೆನೆಟ್ ನೇಮಿಸಿದ 'ಚರ್ಚ್ ಸಮಿತಿ' ಸಿಐಎ ಪಾತ್ರಕ್ಕೆ ಯಾವುದೇ ಪುರಾವೆ ಇಲ್ಲ ಎಂಬ ತೀರ್ಮಾನಕ್ಕೆ ಬಂದಿತ್ತು. ಆದರೆ ಹಲವು ಸ್ವತಂತ್ರ ಸಂಶೋಧಕರು ಬೆಲ್ಜಿಯಂ ಸರ್ಕಾರ ಮತ್ತು ಸಿಐಎ ಜಂಟಿಯಾಗಿ ಲುಮುಂಬಾ ಕೊಲೆಗೆ ಪಿತೂರಿ ಹೂಡಿದ್ದರು ಎಂಬ ನಿರ್ಧಾರಕ್ಕೆ ಹಿಂದೆಯೇ ಬಂದಿದ್ದರು. ಇದಕ್ಕೆ ಬಲವಾದ ಪುರಾವೆ ಇರಲಿಲ್ಲ ಅಷ್ಟೆ. ಆದರೆ ಈಗ ಆ ಅವಧಿಯ ಹಲವು ಅಮೆರಿಕನ್ ಸರ್ಕಾರದ ಗುಪ್ತ ಫೈಲುಗಳನ್ನು ತೆರೆಯಲಾಗಿದ್ದು, ಈ ಬಗ್ಗೆ ಹೆಚ್ಚಿನ ವಿವರ ದೊರಕಿದೆ. ಬೆಲ್ಜಿಯಂ ಸರ್ಕಾರ ಪ್ರಕಟಪಡಿಸಿದ ವರದಿ ಮತ್ತು ಈ ಸಂಶೋಧನೆಯಿಂದ, ಲುಮುಂಬಾ ಕೊಲೆಯಲ್ಲಿ ಸಿಐಎ ಪಾತ್ರದ ಬಗ್ಗೆ ಪುರಾವೆ ದೊರಕಿದೆ. ಇದನ್ನು 'ವಾಷಿಂಗ್ಟನ್ ಪೋಸ್ಟ್'ನಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ತಿಳಿಸಲಾಗಿದೆ. ಅದರ ಲೇಖಕ ಸ್ಟೀಫನ್ ವೀಸ್‌ಮನ್ ಎಂಬುವ. ಈತ 1986ರಿಂದ 1991ರ ವರೆಗೆ ಅಮೆರಿಕನ್ ಪಾರ್ಲಿಮೆಂಟಿನ ಉಪಸಮಿತಿಯ ಆಫ್ರಿಕಾ ಸಿಬ್ಬಂದಿಗೆ ಡೈರೆಕ್ಟರ್ ಆಗಿದ್ದವ. ಈಗ ತೆರೆದಿರುವ 41 ವರ್ಷಗಳ ಹಿಂದಿನ ಫೈಲುಗಳನ್ನು ಅಧ್ಯಯನ ಮಾಡಿ ಸ್ಟೀಫನ್ ಈ ತೀರ್ಮಾನಕ್ಕೆ ಬಂದಿದ್ದಾನೆ.

'ಪ್ರಾಜೆಕ್ಟ್ ವಿಝಾರ್ಡ್' ಸಿಐಎ ಗುಪ್ತ ಯೋಜನೆ

ಕಾಂಗೋದ ಜನಪ್ರಿಯ ನಾಯಕ ಪ್ಯಾಟ್ರಿಕ್ ಲುಮುಂಬಾನ ಸರ್ಕಾರವನ್ನು ಉರುಳಿಸಿ, ಆತನ ಕೊಲೆಗೆ ಕಾರಣರಾಗಿರುವವರು ಎನ್ನಲಾರದವರೆಲ್ಲ ಸಿಐಎಯ ಗುಪ್ತ ಯೋಜನೆ ಪ್ರಾಜೆಕ್ಟ್ ವಿಝಾರ್ಡ್ ಪಾತ್ರಧಾರಿಗಳಾಗಿದ್ದರು ಎಂಬುದನ್ನು ಗುಪ್ತಫೈಲುಗಳು ಸಾರುತ್ತವೆ ಎನ್ನುತ್ತಾನೆ ಸ್ಟೀಫನ್. ಕಾಂಗೋದ ಆ ನಾಯಕರಿಗೆ ಸಿಐಎ ಲಕ್ಷಗಟ್ಟಳೆ ಡಾಲರುಗಳ ಮತ್ತು ಶಸ್ತ್ರಾಸ್ತ್ರಗಳನ್ನು ಸಿಐಎ ನೀಡಿತ್ತು ಎಂದು ಈ ಫೈಲುಗಳು ತಿಳಿಸುತ್ತವೆ. ಲುಮುಂಬಾನನ್ನು ಪದಚ್ಯುತಗೊಳಿಸಿದ ಅಧ್ಯಕ್ಷ ಜೋಸೆಫ್ ಕಸವುಬುಗೆ ನಾಲ್ಕುದಿನಗಳ ಮುಂಚೆ ಅಪಾರ ಹಣ ನೀಡಿತ್ತು. ಅದೇ ರೀತಿ ಲುಮುಂಬಾ ಪರ ಸೈನ್ಯದ ಜತೆ ಯುದ್ಧ ಮಾಡಲು ಶಸ್ತ್ರಾಸ್ತ್ರ ಹಾಗೂ ಅಪಾರ ಹಣವನ್ನು ಆಗಿನ ಜನರಲ್ ಮೊಬುಟುಗೆ ಕೊಟ್ಟಿತ್ತು. ಲುಮುಂಬಾ ಮರಣದ ನಂತರ, ಆತನ ಕೊಲೆಯಲ್ಲಿ ಭಾಗಿಯಾಗಿದ್ದವರಿಗೆಲ್ಲ ಸಿಐಎ ಹಣ ನೀಡಿತ್ತು ಎಂಬ ಸಂಗತಿಗಳು ಗುಪ್ತ ಫೈಲುಗಳ ಅವಲೋಕನದಿಂದ ತಿಳಿದು ಬರುತ್ತದೆ. ಆಗಿನ ಅಧ್ಯಕ್ಷ ಐಸೆನ್ ಹೋವರ್ ಸೇರಿದಂತೆ ಅಮೆರಿಕನ್ ಸರ್ಕಾರದ ಉನ್ನತ ವಲಯಗಳಿಂದ ಈ ಕುಕೃತ್ಯಗಳಿಗೆ ಅಂಗೀಕಾರ ದೊರಕಿತ್ತು ಎಂಬುದನ್ನು ಈ ಗುಪ್ತಫೈಲ್‌ಗಳ ಅಧ್ಯಯನ ಹೊರಗೆಡವಿದೆ.

ಲುಮುಂಬಾ 'ಆಫ್ರಿಕಾದ ಕ್ಯಾಸ್ಟ್ರೋ' ಆದಾನು ಸೋವಿಯತ್‌ಗಳ ಕಡೆ ತಿರುಗಿಯಾನು ಎಂಬ ಆತಂಕದಿಂದ ಸಿಐಎ ಆತ ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲೇ (ಆಗಸ್ಟ್ 06) ಗುಪ್ತ ಯೋಜನೆ 'ಪ್ರಾಜೆಕ್ಟ್ ವಿಝಾರ್ಡ್' ಆರಂಭಿಸಿತ್ತು. ಈ ಗುಪ್ತ ಯೋಜನೆ ಮೂಲಕ ಆಗಿನ ಅಧ್ಯಕ್ಷ ಕಸವುಂಬು, ಆಗಿನ ಸೇನಾ ಮುಖ್ಯಸ್ಥ ಮೊಬುಟು (ಅಮೇರಿಕ ಸರ್ವಾಧಿಕಾರಿ ಈತ ಇತ್ತೀಚಿನವರೆಗೆ ಅಧಿಕಾರದಲ್ಲಿದ್ದ) ಹಣಕಾಸು ಸಹಾಯಕ ಅಲ್ಬರ್ಟ್ ನೆಡೆಲೆ, ವಿದೇಶಿ ಮಂತ್ರಿ ಜಸ್ಟಿನ್ ಬೊಂಬೊಕೋ, ಸೆನೆಟ್ ಅಧ್ಯಕ್ಷ ಜೊಸೆಫ್ ಇಲಿಯೋ ಮತ್ತು ಕಾರ್ಮಿಕ ನಾಯಕ ಸಿರಿಲ್ ಅಡ್‌ಲಾನಿಗೆ ಧನ ಸಹಾಯ ಮಾಡಿ ಅವರ ಜತೆ ಲುಮುಂಬಾ ಪತನಕ್ಕೆ ಪಿತೂರಿ ಆರಂಭಿಸಿತ್ತು.

ಪರಿಸ್ಥಿತಿ ಬಿಗಡಾಯಿಸಿದಾಗ ಲುಮುಂಬಾ ಹತ್ಯೆ

ಸಿಐಎ ಮತ್ತು ಬೆಲ್ಜಿಯಂ ಸರ್ಕಾರ ಲುಮುಂಬಾನನ್ನು ಅಧಿಕಾರದಿಂದ ಇಳಿಸುವ ಪಿತೂರಿಯನ್ನು ಜಂಟಿಯಾಗಿ ಮಾಡಿದವು, ಇಲಿಯೋ ಮತ್ತು ಅಡೌಲಾ ಅವಿಶ್ವಾಸ ನಿರ್ಣಯ ತರುವುದು, ನೆಡೆಲೆ ಹಣ ಕೊಟ್ಟು ಕೆಲವು ಮಂತ್ರಿಗಳು ರಾಜೀನಾಮೆ ಕೊಡುವಂತೆ ಮಾಡುವುದು, ಸರ್ಕಾರದ ವಿರುದ್ಧ ಯೂನಿಯನ್ ನಾಯಕತ್ವದಲ್ಲಿ ಪ್ರದರ್ಶನಗಳು ಮತ್ತು ಇದರ ನಂತರ ಅಧ್ಯಕ್ಷ ಕಸವುಂಬು ಲುಮುಂಬಾನನ್ನು ಪ್ರಧಾನಿ ಪದವಿಯಿಂದ ಬರ್ಖಾಸ್ತುಗೊಳಿಸುವುದು ಇದು ಅವರು ಹೂಡಿದ ಪಿತೂರಿ. ಇದರ ಪ್ರಕಾರ ಹೆಚ್ಚು ಕಡಿಮೆ ಘಟನಾವಳಿಗಳು ಹಾಗೇ ನಡೆದವು. ಆದರೆ ಲುಮುಂಬಾ ಪದಚ್ಯುತಿ ನಂತರ ಇಲಿಯೊ ಕೇವಲ 10 ದಿನಗಳಿಗೆ ಪ್ರಧಾನಿಯಾಗಿದ್ದ - ಜನರಲ್ ಮೊಬುಟು ಆತನನ್ನು ಉರುಳಿಸಿ ಅಧಿಕಾರಕ್ಕೆ ಬಂದ, ಜನರಲ್ ಮೊಬುಟು ರಚಿಸಿದ ಸರ್ಕಾರದ ಅಧಿಕಾರಿಗಳೆಲ್ಲಾ ಸಿಐಎ ಗುಪ್ತ ಯೋಜನೆಯಿಂದಿ ಹಣ ಪಡೆದವರೇ ಆಗಿದ್ದರು. ಆತನ ಸರ್ಕಾರಕ್ಕೆ ಪಾರ್ಲಿಮೆಂಟಿನ ಬಹುಮತ ಬೆಂಬಲ ಗಿಟ್ಟಿಸಲು ಸಿಐಎ 250 ಸಾವಿರ ಡಾಲರು ಹಣ ಸುರಿಯಿತು. ಪಾರ್ಲಿಮೆಂಟು ಬೆಂಬಲ ಸಿಐಎ ಲೆಕ್ಕಾಚಾರದಂತೆ ಸಿಗಲಿಲ್ಲ ಆಗ ಪಾಲಿಮೆಂಟನ್ನೆ ಅಮಾನತ್ತಿನಲ್ಲಿ ಇಡಲಾಯಿತು. ಸೈನ್ಯದ ಒಂದು ವಿಭಾಗ ಪ್ರಧಾನಿ ಲುಮುಂಬಾಗೆ ಬೆಂಬಲವಾಗಿ ಹೋರಾಟಕ್ಕೆ ಇಳಿದಾಗ, ಮೊಬುಟು ಸೈನ್ಯಕ್ಕೆ ತರಬೇತಿ, ಉಪಕರಣ, ಹಣ, ಶಸ್ತ್ರಾಸ್ತ್ರಗಳನ್ನು ಸುರಿಯಲಾಯಿತು. ಪಾರ್ಲಿಮೆಂಟಿನಲ್ಲೂ, ಅಂತರ್‌ರಾಷ್ಟ್ರೀಯವಾಗಿ ಮೊಬುಟಗೆ ತೀವ್ರ ಬೆಂಬಲ ವ್ಯಕ್ತವಾದ್ದು - ಸಿಐಎಯ ಚಿತ್ರಕಥೆ ಪ್ರಕಾರ ಇರಲಿಲ್ಲ. ವಿಶ್ವಸಂಸ್ಥೆ ಪಡೆಗಳು ಲುಮುಂಬಾನನ್ನು ಆತನ ರಕ್ಷಣೆಗೆ ಗೃಹಬಂಧನದಲ್ಲಿಟ್ಟರು. ಅಲ್ಲಿಂದ ಲುಮುಂಬಾ ಪರಾರಿಯಾದ. ಮೊಬುಟು ಸೈನಿಕರು ಲುಮುಂಬಾನ್ನು ಬಂಧಿಸಿ, ಆತನ ರಾಜಕೀಯ ವಿರೋಧಿಗಳಿಗೆ ಆತನನ್ನು ಒಪ್ಪಿಸಿದರು. ಆದರೆ ಆಗಲೇ ಲುಮುಂಬಾ ಹತ್ಯೆ ನಡೆಯಲಿಲ್ಲ.

ಇನ್ನೊಂದೆರಡು ತಿಂಗಳಲ್ಲಿ ಪರಿಸ್ಥಿತಿ ಮೊಬುಂಬಾ ಸರ್ಕಾರಕ್ಕೆ ಬಿಗಡಾಯಿಸಿತು. ಲುಮುಂಬಾ ಬೆಂಬಲಿಗ ಸೈನ್ಯ ಸರ್ಕಾರಕ್ಕೆ ತಲೆನೋವಾಗಿತ್ತು. ಸೈನ್ಯದ ಸಹಾಯದಿಂದ ಲುಮುಂಬಾ ಪುನಃ ಅಧಿಕಾರಕ್ಕೆ ಬರುವ ಸಾಧ್ಯತೆಯು ಇತ್ತು. ಆದ್ದರಿಂದ ಲುಮುಂಬಾನ ಕೊಲೆ ಮಾಡಲಾಯಿತು ಎಂಬುದು ಗುಪ್ತ ಫೈಲುಗಳಿಂದ ಸ್ಪಷ್ಟವಾಗುತ್ತದೆ. (1961 ಫೆಬ್ರುವರಿ)

ಸಿಐಎ ಅಧಿಕಾರಿಗಳು ನೇರವಾಗಿ ಕೊಲೆಯಲ್ಲಿ ಭಾಗವಹಿಸದಿದ್ದರೂ ಲುಮುಂಬಾನ ವಿರೋಧಿಗಳ ಮೂಲಕ ಈ ಕೆಲಸ ಮಾಡಿಸುವುದರಲ್ಲಿ ಸಕ್ರಿಯ ಪಾತ್ರ ವಹಿಸಿದರು. ನಾಲ್ಕು ವಾರಗಳ ಕಾಲ ಲುಮುಂಬಾನ ಸಾವನ್ನು ಘೋಷಿಸಲಿಲ್ಲ. ಲುಮುಂಬಾನನ್ನು ಮುಗಿಸಿದ ಆತನ ವಿರೋಧಿಗಳಿಗೆ ಕೆಲಸ ಮುಗಿದಕೂಡಲೇ ಭಾರಿ ಹಣ ಕೊಟ್ಟಿದ್ದಕ್ಕೆ ಗುಪ್ತಫೈಲ್‌ಗಳಲ್ಲಿ ಪುರಾವೆ ಇದೆ. ಇದೆಲ್ಲಾ 1960-61ರ ಕಥೆ. ಆಫ್ರಿಕಾದಲ್ಲಿ ಸರ್ವಾಧಿಕಾರಿಗಳು ಬಹಳ ರಾಕ್ಷಸೀ ಸ್ವಭಾವದವರು. ರಾಜಕೀಯ ಗುಂಪುಗಳು ಕಿತ್ತಾಟ ಮಾಡುತ್ತವೆ ಎಂದೆಲ್ಲಾ ಅಮೆರಿಕನ್ ಸರ್ಕಾರ ಆತಂಕ ವ್ಯಕ್ತಪಡಿಸುತ್ತವೆ. ಚುನಾಯಿತ ಲುಮುಂಬಾನ ಕೊಲೆಯಲ್ಲಿ ಸಕ್ರಿಯ ಪಾತ್ರ ವಹಿಸಿ ಮೊಬುಟು ಸರ್ವಾಧಿಕಾರಿಯಾಗಲು ಸಹಾಯಮಾಡಿದ್ದು ಸಿಐಎನೇ. ಮೊಬುಟು 1961ರಿಂದಿ 1997ವರೆಗೆ ಅಧಿಕಾರದಲ್ಲಿದ್ದ ಆ ಮೇಲೆ ಕಾಂಗೋ ಪರಸ್ಪರ ವಿರೋಧಿ ರಾಜಕೀಯ ಪಂಗಡಗಳ ನಡುವಿನ ಕಿತ್ತಾಟದ ರಣರಂಗವಾಗಿ ಬಿಟ್ಟಿದೆ. ಇದಕ್ಕೆ ನೇರ ಕಾರಣ ಸಿಐಎಯ ಗುಪ್ತ ಯೋಜನೆ. ಆ ಮೂಲಕ ಆಫ್ರಿಕಾ ಬುಡದಲ್ಲೇ, ಪ್ರಜಾಸತ್ತೆ ಬೇರೂರುವ ಸಾಧ್ಯತೆಯನ್ನು ಮೊಳಕೆಯಲ್ಲೇ ಚಿವುಟಿ ಹಾಕಿತು.

ಇಷ್ಟೆಲ್ಲಾ ಪುರಾವೆಗಳಿದ್ದರೂ 1960-61ರ ಘಟನೆಗಳಿಗೆ (ಲುಮುಂಬಾ ಕೊಲೆ ಸೇರಿ) ಜವಾಬ್ದಾರಿ ತೆಗೆದುಕೊಳ್ಳಲು ಅಮೆರಿಕಾ ತಯಾರಿಲ್ಲ. ಕಾಂಗೋದ ಇಂದಿನ ಪರಿಸ್ಥಿತಿಯಲ್ಲಿ ಸಹಾಯಕವಾದ ಧನ ಸಹಾಯ ಮಾಡಲು ತಯಾರಿಲ್ಲ.'ಭಯೋತ್ಪಾದನೆ ವಿರುದ್ಧ ಯುದ್ಧ'ದ ಆಟ ಆಡುತ್ತಿರುವ ಅಮೆರಿಕಾದ ಅಟಾಟೋಪ ಇತ್ತೀಚಿನದಲ್ಲ. ಚರಿತ್ರೆಯ ತುಂಬಾ ಇದಕ್ಕೆ ಉದಾಹರಣೆಗಳಿವೆ ಅನ್ನಿಸುತ್ತದೆ. ○

ಈ ವಾರ....

ಕಾವೇರಿ ನೀರು: ಸಂಕಷ್ಟ ಹಂಚಿಕೊಳ್ಳುವುದೊಂದೇ ಮಾರ್ಗ

ಕರ್ನಾಟಕ ಮತ್ತು ತಮಿಳುನಾಡಿನಲ್ಲಿಯೂ ಮಳೆ ಇಲ್ಲದೇ ಬರದ ದವಡೆಗೆ ರೈತರು ಸಿಲುಕಿದ್ದಾರೆ. ಮಳೆ ಇರದೇ ಬತ್ತಿರುವುದೇ ಕಡಿಮೆ. ಮಳೆ ವರ್ಷದಂತೆ ಸಕಾಲಿಕವಾಗಿ ಹಾಗೂ ಸಮೃದ್ಧವಾಗಿ ಬಾರದೇ ಜಲಾಶಯಗಳು ಬತ್ತಿವೆ. ಸಂಗ್ರಹಿತವಾದ ನೀರು ಸಹ ಅತ್ಯಲ್ಪ. ಹೀಗಾಗಿ ಕಾವೇರಿ ಕೊಳ್ಳದ ನೀರನ್ನು ಅವಲಂಬಿಸಿರುವ ರೈತರು ಕಂಗಾಲಾಗಿರುವುದು ಸಹಜ.

ಇಂತಹ ಸ್ಥಿತಿಯಲ್ಲಿ ಸಂಕಷ್ಟವನ್ನು ಹಂಚಿಕೊಳ್ಳದೇ ಅನ್ಯಮಾರ್ಗವಿಲ್ಲ. ಈ ಸಂಕಷ್ಟ ಸೂತ್ರವನ್ನು ಕಾವೇರಿ ಟ್ರಿಬ್ಯುನಲ್ ಮತ್ತು ಕಾವೇರಿ ಜಲ ಪ್ರಾಧಿಕಾರಗಳು ಒಂದೊಂದು ರೀತಿಯಲ್ಲಿ ಲೆಕ್ಕ ಮಾಡಿವೆ. ಎರಡೂ ಸರ್ಕಾರಗಳು ಬಿನ್ನವಾಗಿ ವಾದ ಹೂಡಿವೆ.

ಈ ಚರ್ಚೆ-ಲೆಕ್ಕಚಾರಗಳು ಇರುವಾಗಲೇ ಕರ್ನಾಟಕ ತಮಿಳುನಾಡಿನ ರೈತರಿಗೆ ನೀರು ಬಿಡುವ ಬದಲಾಗಿ ಸಹಜವಾಗಿ ಹರಿದು ಹೋಗಿರುವುದು ಅಷ್ಟೇ. ಮೆಟ್ಟೂರು ಜಲಾಶಯದಲ್ಲಿ ಸಂಗ್ರಹವಾದದ್ದು ಅಂದರೆ 15 ಟಿಎಂಸಿ ಇದೆ. ಹಿಂದಿನ ವರುಷ ಈ ಕಾಲದಲ್ಲಿ 76 ಟಿಎಂಸಿ ಇದ್ದಿತು.

ಆದುದರಿಂದ ಮುಂದೆ ಮಳೆಯಾದೀತೆಂದು ಕರ್ನಾಟಕ ಕಾಯುತ್ತಾ ಕೂಡುವುದು ಅಷ್ಟು ಸಮಂಜಸವಲ್ಲ. ಹಾಗೆಯೇ ತಮಿಳುನಾಡು ಸರ್ಕಾರವೂ ಸಹ ಕರ್ನಾಟಕದಲ್ಲಿನ ಗಂಭೀರ ಸ್ಥಿತಿಯನ್ನೂ ಅರಿತು ಒಂದು ಪ್ರಾಯೋಗಿಕ ಸೂತ್ರಕ್ಕೆ ಬರಬೇಕು. ಅದು ಬಿಟ್ಟು ರಾಜಕೀಯ ಲಾಭಕ್ಕಾಗಿ ಮಾತುಕತಗಳನ್ನು ಮುರಿಯಬಾರದ್ದು.

ಒಟ್ಟಾರೆ ಸಂಕಷ್ಟದ ಸೂತ್ರ ರೂಪಿಸಿ ಆದಷ್ಟು ಕೂಡಲೇ ನೀರಿನ ಹಂಚಿಕೆಗೆ ಒಪ್ಪಂದ ಏರ್ಪಡಬೇಕು.

ಪ್ರಧಾನಿಗಳು ಕರೆದಿದ್ದ ಸಭೆಗೆ ಪೂರ್ವಬಾವಿಯಾಗಿ ಕರ್ನಾಟಕದ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ ಸರ್ವಪಕ್ಷಗಳ ಸಭೆ ಕರೆದಿದ್ದರು. ಸಿಪಿಐ(ಎಂ)ನಿಂದ ರಾಜ್ಯಕಾರ್ಯದರ್ಶಿ ಜಿ.ಎನ್.ನಾಗರಾಜ್ ಮತ್ತು ವಿಜೆಕೆ ನಾಯರ್ ಭಾಗವಹಿಸಿದ್ದರು.



ಕಥೆ - 4

ಗಿರೀಶ್ ಕಾರ್ನಾಡ್

ಅಳಿದ ಮೇಲೆ

ನಾನು ಎದ್ದೆ.

'ಹನ್ನೊಂದರಲ್ಲಿ ಫಿಲ್ಮ್ ಆಗೋದಿಲ್ಲ. ಕ್ಷಮಿಸಬೇಕು. ನಾವು ಬರುತ್ತೇವೆ. ನಡಿ, ಯಾಕೂಬ್' ಎಂದೆ.

'ಹಾಗಾದರೆ ಅಡ್ವಾನ್ಸ್?'

'ಅದನ್ನು ರಿಝುವಿ ತಿಂದಿಲ್ಲ ಎಲ್ಲರಿಗೂ ಹಂಚಿಬಿಟ್ಟಿದ್ದಾರೆ. ನನಗೂ ಕೊಟ್ಟಿದ್ದಾರೆ. ಚಿತ್ರಪಟದ ನಿರ್ಮಿತಿಯೊಂದಿಗೆ ಅದು ಪ್ರಯೋಜನಕ್ಕೆ ಬರುತ್ತದೆ. ಇಲ್ಲದಿದ್ದರೆ ಹೋಯ್ತು. ವಿಚಾರ ಮಾಡಿ ಹೇಳಿರಿ. ಹದಿನೆಂಟರಲ್ಲಾದರೆ ನಾನೇ ಮಾಡಿ ಕೊಡಬಲ್ಲೆ'.

ನಾನು ಹದಿನಾರು ಅನ್ನಬಹುದಾಗಿತ್ತು. ಆದರೆ ಮದುವೆಯ ಖರ್ಚಿಗೆ ಅಂತ ಎರಡು ಲಕ್ಷ ಸೇರಿಸಿದ್ದೆ. ಅಲ್ಲದೆ ಚೌಕಾಶಿ ಇಲ್ಲೇ ಮುಗಿದಿಲ್ಲ ಅಂತ ನನಗೆ ಗೊತ್ತಿತ್ತು.

ಯಾಕೂಬ್ ದಿಗಿಲಾಗಿದ್ದ. ನಮ್ಮಿಂದ ಕೈಲಾಶ್ ಪ್ರಸಾದನಿಗೆ ಅನ್ಯಾಯವಾಗುತ್ತಿದೆ ಎಂದು ವಿಹ್ವಲನಾಗಿದ್ದ. ಬೀದಿಗಿಳಿದಾಗ ನಾನು ಸ್ಕ್ರಿಪ್ಟ್ ಹಾಗೂ ಬಜೆಟ್ ಅವನ ಕೈಯಲ್ಲಿಟ್ಟು ಹೇಳಿದೆ.

'ಆ ಕಳ್ಳ ಒಪ್ಪಿಕೊಂಡರೆ ಸರಿ. ಇಲ್ಲದಿದ್ದರೆ ನಿನ್ನ ಅಕ್ಕನ ಮದುವೆಗೆ ಬೇರೆಯೆಲ್ಲಾದರೂ ಹಣದ ವ್ಯವಸ್ಥೆ ಮಾಡು. ಹನ್ನೊಂದರಲ್ಲಿ ಫಿಲ್ಮ್ ಮುಗಿಸುವ ಉಪದ್ವ್ಯಾಪಕ್ಕೆ ಹೋಗಬೇಡ!'

ನಾನು ಟ್ಯಾಕ್ಸಿ ಹಿಡಿದು ಮನೆಗೆ ಹೊರಟೆ.

ರಿಝುವಿ ಮೂರ್ಖನಲ್ಲ ನನಗೆ ಗೊತ್ತಿತ್ತು. ಅಂದಾಗ ಇಂಥ ನಂಬಲಾಗದ ವ್ಯಾಪಾರಕ್ಕೆ ಇಳಿದ ವ್ಯಕ್ತಿಗೆ ಏನೆಂದು ಕರೆಯಬೇಕು? ಹುಂಬ? ಹುಚ್ಚ? ಕನ್ನಡದಲ್ಲಿ ಬಹುಶಃ ಅದಕ್ಕೆ ಯೋಗ್ಯ ಶಬ್ದವಿಲ್ಲ. ಅರಬ್ಬಿ ಭಾಷೆಯಲ್ಲಿದೆ. ಮಜನೂ! ಒಂದು ಕಾದಂಬರಿಯ ಆರವತ್ತು ಪುಟಗಳಿಗೆ ಭ್ರಾಂತನಾದ ಮಜನೂ.

ಆರು ಡಿಸೆಂಬರ್. ಅಯೋಧ್ಯೆಯಲ್ಲಿ ಬಾಬರೀ ಮಸೀದಿ ಕೆಡವಲಾಯಿತು.

ಮಾರನೇ ದಿನ ಭೂಷಣ ಫೋನ್ ಮಾಡಿದ. 'ಅವರಿಗೆ ಹಾಗೇ ಬುದ್ಧಿ ಕಲಿಸಬೇಕು. ಇಲ್ಲದಿದ್ದರೆ ಕಲಿಯೋದಿಲ್ಲ. ಅವರು' ಎಂದ.

ನನ್ನ ಕುಟುಂಬದವರು, ನೆಂಟರಿಷ್ಟರು, ಮಿತ್ರರು ಎಲ್ಲ ಹೌದೆಂದು ತಲೆದೂಗುತ್ತಿದ್ದರು. ತನ್ನ ಹಿಂಸೆಗೇ ಊರ್ಧ್ವರೇತವಾಗಿತ್ತು ನನ್ನ ಪರಿಸರ. ಬಾಬರೀ ಮಸೀದಿಯ ಉಧ್ವಸ್ತ ಅಡಿಗಲ್ಲಿನ ಮೇಲೊಂದು ಅನಾಥ ಶವ ಬಿದ್ದುಕೊಂಡಿದೆ, ಹಿಂದೂ ಸಂಸ್ಕೃತಿಯದು, ಅನಿಸಿತು.

ಸುಮಾರು ಒಂದು ವಾರದ ನಂತರ.

ಮುಂಜಾನೆ ಚಹ ಕುಡಿಯುತ್ತಿರುವಾಗಲೇ ಯಾಕೂಬ್ ರಿಝುವಿಯ ಫೋನ್ ಬಂತು.

'ಅಂಕಲ್, ನೀವು ಇನ್ನೊಂದು ಅರ್ಧ ಗಂಟೆ ಮನೆಯಲ್ಲಿದ್ದೀರಲ್ಲೇನು?'

'ಇದ್ದೇನಲ್ಲ. ಈ ಹೊತ್ತು ಮಧ್ಯಾಹ್ನದ ಶೂಟಿಂಗ್ ಶಿಫ್ಟ್....'

'ಹಾಗಾದರೆ ಬಂದೇ ಬಿಟ್ಟೆ. ಅರ್ಧ ಗಂಟೆಯೊಳಗೆ'

'ಏನಾಯ್ತು? ಫೋನ್ ಮೇಲೆ ಹೇಳಲ್ಲ'

ಯಾಕೂಬ್ ಫೋನ್ ಕೆಳಗಿಟ್ಟಿದ್ದ.

ಇಪ್ಪತ್ತು ನಿಮಿಷದೊಳಗೆ ಬಾಗಿಲ ಗಂಟೆಯಾಯಿತು. ಬಾಗಿಲಲ್ಲಿ ಕ್ಷಣ ಮಾತ್ರ ರಿಝುವಿಯೇ ನಿಂತಂತೆ ಅನಿಸಿತು.

'ಬಾ ಬಾ ಕೂತುಕೋ' ಎಂದು ಹೇಳುತ್ತಿರುವಾಗಲೇ ಒಂದು ಪ್ರಶ್ನೆ ಕಾಡುತ್ತಿತ್ತು. ಹಿಂದಿನ ಸಲ ಯಾಕೂಬ್‌ಗೂ ಅವನ ತಂದೆಗೂ ಯಾವುದೇ ಸಾಮ್ಯವಿರಲಿಲ್ಲ. ಈ ಸಲ ಮಾತ್ರ ನನಗೆ ಯಾಕೆ ರಿಝುವಿಯ ನೆನಪಾಗಬೇಕು?

'ಏನು ವಿಶೇಷ?' ಎಂದೆ.

'ತಡೀರಿ, ಅಂಕಲ್. ಮೊದಲು ಸಿಹಿ ತಗೊಳ್ಳಿರಿ! ಆ ಮೇಲೆ ಸುದ್ದಿ!' ಎಂದು, ಹ್ಯಾಂಡ್ ಬ್ಯಾಗಿನಿಂದ ಒಂದು ಮಿಠಾಯಿಯ ಪೆಟ್ಟಿಗೆ ತೆಗೆದ. ನಗುತ್ತ ನನ್ನ ಕಡೆಗೆ ನೋಡಿದ. ಕೂಡಲೆ ನಾನು ಆ ತುಂಟ ನಗೆಯ ಗುರುತು ಹಿಡಿದೆ. ಕೇಳಿದ ಪ್ರಶ್ನೆ ತಪ್ಪಿಸಿ ಇನ್ನೊಂದೇನೋ ಹೇಳುವುದು- ಅದೂ ರಿಝುವಿಯ ಟ್ರೇಡ್ ಮಾರ್ಕ್!

'ಮಿಠಾಯಿ ಯಾಕೆ?'

'ಅವ್ವ ನಿಮಗಾಗಿ ಮಾಡಿದ್ದಾಳೆ. ಇದು ಒಂದು ವಿಶಿಷ್ಟ ಪದ್ಧತಿಯ ಹೈದರಿಬಾದೀ ಮಿಠಾಯಿ. ಶಾಹೀ ಟುಕಡಾ. ನೀವು ಮೊದಲು ಅದನ್ನು ತಿಂದು ಆ ಮೇಲೆ ಏನು ಬೇಕೋ ಅದನ್ನ ಚರ್ಚಿಸಬಹುದು ಅಂತ ಕರಾರು ಹಾಕಿದ್ದಾಳೆ.

ಶಾಹೀ ಟುಕಡಾ ಸವಿಯುತ್ತ ನಾನು ಕೇಳಿದೆ. 'ಏನು, ಅಕ್ಕನ ಲಗ್ನ ನಿಶ್ಚಯವಾಯಿತೇನು?'

'ಇಲ್ಲ. ಆದರೆ ನಿಶ್ಚಯವಾಗತದೆ ಅನ್ನೋದು ನಿಶ್ಚಯವಾಯಿತು'

'ಅಂದರೆ'

'ಅಂಕಲ್, ಕೆಪಿ ಪ್ರೊಡಕ್ಷನ್ಸ್‌ರವರು 'ಅಳಿದ ಮೇಲೆ' ಗಾಗಿ ಹದಿನೇಳು ಲಕ್ಷ ಕೊಡಲಿಕ್ಕೊಪ್ಪಿಕೊಂಡಿದ್ದಾರೆ ನಿನ್ನೆ ರಾತ್ರಿ ಫೋನ್ ಬಂತು'

ಶಬ್ದಗಳ ಮೇಲೆ ಶಬ್ದ ನುಗ್ಗುತ್ತ ಹರಿದು ಬಂದವು.

ನಾನು ಉತ್ತರ ಕೊಡಲಿಲ್ಲ.

'ಆದಷ್ಟು ಬೇಗ ಶುರು ಮಾಡಿ ಬಿಡಿ ಅಂತಂದರು'

'ಯಾಕೂಬ್, "ಅಳಿದ ಮೇಲೆ" ಈಗಂತೂ ಸಾಧ್ಯವಿಲ್ಲ"

ತಂದೆಯಂತೆ ಮಗ, ನಾನೇನು ಹೇಳುತ್ತಿದ್ದೇನೆಂಬುದನ್ನು ಲೆಕ್ಕಿಸದೆ ಮುಂದಕ್ಕೆ ನುಗ್ಗಿದ.

"ನಿಮ್ಮ ಒಟ್ಟೂ ಕಮಿಟ್‌ಮೆಂಟೇನೂ ಅಂತ ಹೇಳಿಬಿಟ್ಟರೆ"

'ಯಾಕೂಬ್, ಸಾರಿ. ನಾನು ಈ ಟೆಲಿಫಿಲ್ ಮಾಡಲಿಕ್ಕೊಲ್ಲೆ'

ಈ ಸಲ ಮಾತು ಮುಟ್ಟಿತು. ತಬ್ಬಿಬ್ಬಾದ. ಬೆಚ್ಚಿ, ಇನ್ನೂವರೆಗೆ ನಿಂತಿದ್ದವನು ಕುರ್ಚಿಯ ಮೇಲೆ ಕೂತ. ನಕ್ಕರೆ ಅಡಚಣೆಗಳೆಲ್ಲ ಇಲ್ಲವಾಗಿ ಬಿಡಬಹುದೇನೋ ಎಂಬಂತೆ ನನ್ನನ್ನು ನೋಡಿ ಅರ್ಧ ನಗೆ ನಕ್ಕ.

'ಯಾಕೆ ಅಂಕಲ್? ನೀವೇ ಒಪ್ಪಿಕೊಂಡಿದ್ದಿರಲ್ಲ. ಅವರು ಹದಿನೇಳು ಅನ್ನತಿದ್ದಾರೆ. ಆದರೆ ಹದಿನೆಂಟೇ ಆಗಬೇಕು ಅಂತಿದ್ದರೆ'

ಅವನ ದನಿ ನಿಧಾನವಾಗಿತ್ತು. ಉತ್ಕರ್ಷದ ಹೊಸ್ತಿಲಲ್ಲಿ ನಿಂತ ಭವಿಷ್ಯತ್ತಿನ ಕತೆ ಕೇಳಿ ಕೇಳಿ ದಣಿದ ಅವನ ತಾಯಿಯ ದನಿಯಂತೆ.

ಇವನಿಗೆ ಏನಂತ ಹೇಳಲಿ? ಪ್ರಯತ್ನ ಮಾಡಿದೆ.

'ನೋಡು, ನಿನ್ನ ತಂದೆ ಈ ಕತೆಗೆ ಮಾರು ಹೋದದ್ದು ಒಂದೇ ಕಾರಣಕ್ಕಾಗಿ. ಚಿತ್ರಪಟದ ಕೊನೆಗೆ ಪುನರ್ಜನ್ಮತಾಳಿ ಬರುವ ಮಂದಿರಕ್ಕಾಗಿ. ಅದು ಅವನಿಗೆ ಮಾನವೀಯತೆಯ ಪ್ರತೀಕವಾಗಿತ್ತು. ಆದರೆ ಈಗ... 'ಮಂದಿರ ಕಟ್ಟೋದು' 'ಮಂದಿರದ ಪುನರುತ್ಥಾನ' ಎಂಬ ನುಡಿಕಟ್ಟಿನ ಅರ್ಥನೇ ಬದಲಾಗಿದೆ. ವಿಷಪೂರಿತವಾಗಿದೆ.

'ಅಂದರೆ?'

ಯಾಕೂಬ್ ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದನೋ, ತನ್ನದೇ ಬೇರೆ ಯಾವುದೋ ವಿಚಾರಗಳಲ್ಲಿ ತೊಡಗಿದ್ದನೋ ಗೊತ್ತಾಗಲಿಲ್ಲ.

'ಬಾಬರೀ ಮಸೀದಿಯನ್ನು ಕೆಡವಿದ ದುರುಳರು ಈಗ ಆ ಸ್ಥಾನದಲ್ಲಿ ಮಂದಿರ ಕಟ್ಟಬೇಕೆನ್ನತ್ತಿದ್ದಾರೆ ಗೊತಿಲ್ವೇನು?'

ಎಂದು ಕೇಳಿದೆ.

'ಅದು ಯಾರಿಗೆ ಗೊತ್ತಿಲ್ಲ ಅಂಕಲ್?'

ಯಾಕೂಬ್ ನಕ್ಕ. 'ಅದಕ್ಕೂ ನಿಮಗೂ ಏನು ಸಂಬಂಧ?'

ನಾನು ಎದ್ದು ಕಿಟಕಿಯ ಹತ್ತಿರ ಹೋಗಿ ಹೊರಗೆ ನೋಡಿದೆ. ಕೂಡಲೆ ಹಾಗೆ ಮಾಡಬಾರದಿತ್ತು ಅನಿಸಿತು. ಪ್ರತಿಯೊಂದು ಟೆಲಿವಿಜನ್ ಧಾರಾವಾಹಿಯಲ್ಲಿ ವಯಸ್ಸಿನಲ್ಲಿ ಹಿರಿಯ ವ್ಯಕ್ತಿ ಭಾಷಣ ಬಿಗಿಯಬೇಕೆಂದಾಗ ಎದ್ದು ಹೋಗಿ ಕಿಟಕಿಯಿಂದ ಹೊರಗೆ ನೋಡುತ್ತಾನೆ.

'ಅದಕ್ಕೂ ಎಲ್ಲದಕ್ಕೂ ಸಂಬಂಧ ಬರತದೆ. ಅಯೋಧ್ಯೆಯಲ್ಲಿ ನಡೆದ ಬರ್ಬರತೆಯಿಂದ ಮಂದಿರ ನಿರ್ಮಾಣದ ಕಲ್ಪನೆನೇ ಭ್ರಷ್ಟವಾಗಿಬಿಟ್ಟಿದೆ'.

ಮೇಲೋಡ್ರಾಮಾಟಿಕ್ ಆಗದೆ ಮುಂದೆ ಹೇಗೆ ಸಾಗಬೇಕೆಂದು ತಿಳಿಯದೆ ನಾನು ನನ್ನ ಮಾತು ಮೊಟಕುಗೊಳಿಸಿ ಬಿಟ್ಟೆ.

'ನನ್ನಿಂದಂತೂ ಸಾಧ್ಯವಿಲ್ಲ' ಎಂದೆ.

ಯಾಕೂಬ್ ನೋಡುತ್ತ ಕುಳಿತ.

ನಾನೂ ರಿಝುವಿಯಂತೆ ಮಾತನಾಡುತ್ತಿದ್ದೇನೆ, ಮುಖ್ಯ ವಿಷಯ ಬಿಟ್ಟು ಗುಡ್ಡ ಸುತ್ತಿ ಬರುತ್ತಿದ್ದೇನೆ ಅನಿಸಿತು. ಬಾಬರೀ ಮಸೀದಿಯ ವಿನಾಶದಂಥ ಘಟನೆ ಎಂದೂ ಒಬ್ಬಂಟಿಯಾಗಿ ನಿಲ್ಲುವುದಿಲ್ಲ. ಅದು ಪಿಡುಗಿನಂತೆ ನಮ್ಮ ಸಂಸ್ಕೃತಿಯ ಪ್ರತಿ ಅಂಶವನ್ನು ಕಲುಷಿತಗೊಳಿಸುತ್ತದೆ. ಮೂವತ್ತೆರಡು ವರ್ಷಗಳ ಹಿಂದೆಯೇ ಬರೆದ ಒಂದು ಸಾಹಿತ್ಯ ಕೃತಿಯನ್ನು ಕೂಡ.

'ಅಂಕಲ್' ಯಾಕೂಬ್ ಆರಂಭಿಸಿದ. ನಿಂತ. 'ನಾನು ಹೇಳಬಾರದು ಅಂತಿದ್ದೆ. ಹೇಳತೀನಿ. ಈ ಫಿಲ್ಮ್ ಆದರೆ ನನ್ನ ಅಕ್ಕನ ಮದುವೆ ಆಗತದೆ. ನೀವು ಈ ಚಿತ್ರಪಟವನ್ನು ಡೈರೆಕ್ಟ್ ಮಾಡಲಿಕ್ಕೆ ಒಪ್ಪಿಕೊಂಡಿದ್ದೀರಿ. ಅದಕ್ಕಾಗಿ..... ನಾನು ಹೇಳಬಾರದು.... ಆದರೆ ನಮ್ಮ ಇಡೀ ಕುಟುಂಬ ಎಷ್ಟು ಆಭಾರಿಯಾಗಿದೆ ಹೇಳೋದು ಕಷ್ಟ'

ಒಂದು ಗಳಿಗೆ ತಡೆದು,

'ನಮಗೆ ಈಗ ನೀವೇ ಗತಿ' ಎಂದ.

ಇವನಿಗೆ ಹೇಗೆ ತಿಳಿಸಿ ಹೇಳಲಿ? ನಾಳೆ ಫಿಲ್ಮ್ ಟೆಲಿವಿಜನ್ ಮೇಲೆ ಬಂದಾಗ ಪ್ರೇಕ್ಷಕರಿಗೆ ರಿಝುವಿಯ ಮಗಳ ಮದುವೆಯ ಸಂದರ್ಭವನ್ನು ಯಾರು ವಿವರಿಸತಾರೆ? ಎಲ್ಲರಿಗೂ ಕಾಣಸೋದು ನಾನು ಒಂದು ಅಮೋಘ ಕನ್ನಡ ಕಾದಂಬರಿಯನ್ನು ಒಂದು ಲಜ್ಜಾಸ್ಪದ ಘಟನೆಯ ಹೆಗ್ಗಳಿಕೆಗಾಗಿ ಬಳಸುತ್ತಿದ್ದೇನೆ ಅನ್ನೋದಷ್ಟೇ.

'ಬಾಬರೀ ಮಸೀದಿ ಮಾತ್ರ ಅಳಿದ[...] ಹೋಗಿಲ್ಲ. ಯಾಕೂಬ್ ಅದರ ಜೊತೆಗೆ ನಿ[...] ತಂದೆಯ ಕನಸೂ ಅಳಿದು ಹೋಗಿದೆ' ಎಂ[...] ಹೇಳಬೇಕಾಗಿತ್ತು. ಹೇಳಲಾರದೆ ನಿಂತೆ. ಕಿಡಕಿ[...] ಹೊರಗೆ ನೋಡುತ್ತ.

ದೀರ್ಘ ಮೌನ

'ನಿಮ್ಮ ಮರ್ಜಿ' ಎನ್ನುತ್ತ ಯಾಕೂಬ್ ಎದ್ದ[...] 'ನಿಮಗೆ ಮನಸ್ಸು ಇಲ್ಲದಿರುವಾಗ ನಾವು ಒತ್ತಾಯ[...] ಮಾಡುವುದೂ ತಪ್ಪಾಗತದೆ'.

ನಾನು ಹೇಳಿದ್ದನ್ನೇ ಎಷ್ಟು ಸಲ ಹೇಳಲಿ[...] ಅಥವಾ ಹೇಳದೆ ಇದ್ದುದನ್ನೇ ಎಷ್ಟು ಸಲ ಹೇಳಲಿ[...]

'ಸರಿ, ಬರತೇನೆ' ಎಂದು ಬಾಗಿಲ ಕಡೆ[...] ಹೋದ.

ಮಿಠಾಯಿಯ ಪೆಟ್ಟಿಗೆ ಮೇಜಿನ ಮೇಲೆ ಇ[...] ಅದರ ಪಕ್ಕದಲ್ಲೇ 'ಅಳಿದ ಮೇಲೆ' ಟೆಲಿಫಿಲ್[...] ಚಿತ್ರಕತೆಯಿತ್ತು.

'ಯಾಕೂಬ್, ಆ ಸ್ಕ್ರಿಪ್ಟ್ ತಗೊಂಡ[...] ಹೋಗು'.

ಯಾಕೂಬ್‌ನ ಮುಖ ಸಣ್ಣಗಾಗಿತ್ತು. [...] ಕಡೆಗೆ ನೋಡಿದ. ಕ್ಷಣ ಮಾತ್ರ ಅವನ ಕಣ್ಣ[...] ಒಂದು ನಗೆ ಮಿಂಚಿದಂತಾಯಿತು.

'ಬೇಡ, ಅಂಕಲ್. ಅದರಿಂದ ನಮಗೇ[...] ಪ್ರಯೋಜನ? ಬರತೆನೆ' ಎಂದ. ಹೊರ[...] ಹೋದ.

- ಮುಗಿಯಿ[...]



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH